
ಸೋಮವಾರ, ಜನವರಿ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 1 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮನವಿಗಿಂತ ಹೆಚ್ಚು ಮರ ಕಡಿಯಲು ಆದೇಶ 5

2024ರಲ್ಲೂ ಇದೇ ಉತ್ಸಾಹ ಮುಂದುವರಿಯಲಿ: ಪ್ರಧಾನಿ ಮೋದಿ ಕರೆ 6

ಅರವಿಂದ್ ಪನಗಡಿಯಾ 16ನೇ ಹಣಕಾಸು ಆಯೋಗದ ಅಧ್ಯಕ್ಷ 6

'ರಾಮ ಭಜನೆ, ಹಾಡು ಹಂಚಿಕೊಳ್ಳಿ' 6

ಹೊಸ ವರ್ಷ, ಹೊಸ ನೋಟ

ಲೋಕಸಭಾ ಚುನಾವಣೆ, ರಾಮಮಂದಿರ ಉದ್ಘಾಟನೆ ಸೇರಿ ಹತ್ತಾರು ಮೈಲಿಗಲ್ಲು

2024 ಕಾಲಿರಿಸಿದೆ. ಈ ವರ್ಷವು ಹಲವು ಸಕಾರಾತ್ಮಕ ಬದಲಾವಣೆಗಳನ್ನು ತರಲಿದೆ ಎಂಬುದು ಈ ಹೊತ್ತಿನ ನಿರೀಕ್ಷೆ. ರಾಜಕಾರಣ, ಕಾನೂನು ಕಟ್ಟಳೆ, ಬಾಹ್ಯಾಕಾಶ ವಿಜ್ಞಾನ ಇವೆಲ್ಲವುಗಳಲ್ಲಿ ಹೊಸ ಬದಲಾವಣೆ ಮತ್ತು ಹೊಸ ಸಾಧನೆಗೆ ದೇಶ ಸಿದ್ಧವಾಗಿದೆ. ಇವುಗಳ ಜತೆಯಲ್ಲೇ ದೇಶದ ಜನಜೀವನವನ್ನು ನೇರವಾಗಿ ಪ್ರಭಾವಿಸುವ ಮೀಸಲಾತಿಯ ವಿಚಾರವು ಹೊಸ ಬದಲಾವಣೆಗೆ ತೆರೆದುಕೊಳ್ಳುವ ಸಾಧ್ಯತೆ ಇದೆ. ಈ ವರ್ಷ ಎದುರು ನೋಡಬೇಕಾದ ಕೆಲವು ಮಹತ್ವದ ವಿಷಯಗಳ ಮುನ್ನೋಟವನ್ನು 'ಪ್ರಜಾವಾಣಿ' ಇಲ್ಲಿ ಕಟ್ಟಿಕೊಟ್ಟಿದೆ



ರಾಮಮಂದಿರ: ಅಯೋಧ್ಯೆಯ ರಾಮಮಂದಿರವನ್ನು ಇದೇ 22ರಂದು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ. ಧಾರ್ಮಿಕವಾಗಿ ಮತ್ತು 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜಕೀಯವಾಗಿ ಇದು ಅತಿ ಹೆಚ್ಚು ಮಹತ್ವ ಪಡೆದ ವಿಚಾರವಾಗಿದೆ

ಚುನಾವಣೆ: ಮೇ ತಿಂಗಳ ಒಳಗೆ ಲೋಕಸಭೆಗೆ ಚುನಾವಣೆ ನಡೆದು, ಕೇಂದ್ರದಲ್ಲಿ ಹೊಸ ಸರ್ಕಾರ ರಚನೆಯಾಗಬೇಕಿದೆ. ಆನಂತರ ವರ್ಷದುದ್ದಕ್ಕೂ ಒಟ್ಟು ಆರು ರಾಜ್ಯ ಮತ್ತು ಜಮ್ಮು–ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಗೆ ಚುನಾವಣೆ ನಡೆಯಬೇಕಿದೆ



ಸಿಎಎ: ನೆರೆಯ ದೇಶಗಳಲ್ಲಿ ಧರ್ಮದ ಕಾರಣಕ್ಕೆ ಕಿರುಕುಳ ಅನುಭವಿಸಿದ ಮುಸ್ಲಿಮೇತರ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಭಾರತದ ಪೌರತ್ವ ನೀಡುವ, ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಲೋಕಸಭಾ ಚುನಾವಣೆಗೂ ಮುನ್ನವೇ ಜಾರಿಗೆ ತರುವ ನಿರೀಕ್ಷೆ ಇದೆ

ಷೇರುಪೇಟೆ: ನಿಫ್ಟಿ 25,000ದ ಗಡಿ ಮತ್ತು ಬಿಎಸ್‌ಇ ಸೆನ್ಸೆಕ್ಸ್ ಈ ವರ್ಷದಲ್ಲೇ 80,000 ಅಂಶಗಳ ಗಡಿ ದಾಟಲಿವೆ ಎನ್ನುತ್ತವೆ ಷೇರು ದಲ್ಲಾಳಿ ಕಂಪನಿಗಳು

ಇಸ್ರೊ: ಎಕ್ಸ್‌–ರೇ ಮೂಲಗಳ ಕಪ್ಪುರಂಧ್ರದ ನಿಗೂಢ ಜಗತ್ತಿನ ವಿಸ್ಮಯಗಳನ್ನು ತಿಳಿಯುವ ಉದ್ದೇಶದ 'ಎಕ್ಸ್‌–ರೇ ಪೋಲಾರಿಮೀಟರ್ ಉಪಗ್ರಹ' (ಎಕ್ಸ್‌ಪೊಸ್ಯಾಟ್) ಉಡಾವಣೆಯ (ಜನವರಿ 1) ಮೂಲಕ ಹೊಸ ವರ್ಷವನ್ನು ಆರಂಭಿಸಲು ಈಗ ಇಸ್ರೊ ಸಜ್ಜಾಗಿದೆ

ಎಸ್‌ಸಿ,ಎಸ್‌ಟಿ ಉಪ ವರ್ಗೀಕರಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಉಪವರ್ಗೀಕರಣ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆಯೇ ಎಂಬುದನ್ನು ಪರಿಶೀಲಿಸುವ ಸಂಬಂಧದ ಅರ್ಜಿಗಳು ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಸಂವಿಧಾನ ಪೀಠದ ಮುಂದೆ ಇದೆ. 2020ರ ಆಗಸ್ಟ್‌ನಲ್ಲಿಯೇ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು, ಈ ಅರ್ಜಿಗಳನ್ನು ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠಕ್ಕೆ ವರ್ಗಾಯಿಸಿತ್ತು. ಇದೇ 17ಕ್ಕೆ ವಿಚಾರಣೆ ನಿಗದಿಯಾಗಿದೆ

ಆಳ–ಅಗಲ



ಹೊಸ ವರ್ಷದ ಹರ್ಷ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಹೊಸ ವರ್ಷವನ್ನು ಸ್ವಾಗತಿಸಲು ಭಾನುವಾರ ರಾತ್ರಿ ಸೇರಿದ್ದ ಜನಸ್ತೋಮ ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಪ್ರಿಯ ಓದುಗರೇ

ಹೊಸ ಸೂರ್ಯೋದಯವಾಗಿದೆ. ಹೊಸ ವರ್ಷವೂ ಬಂದಿದೆ. ಹೊಸ ವರ್ಷದಲ್ಲಿ ನಿಮ್ಮ ಕನಸುಗಳೆಲ್ಲ ಈಡೇರಲಿ, ಯಶಸ್ಸು ಸದಾ ನಿಮ್ಮ ಜತೆಗಿರಲಿ ಎಂದು 'ಪ್ರಜಾವಾಣಿ' ಹೃದಯ ತುಂಬಿ ಹಾರೈಸುತ್ತಾ, ಶುಭಾಶಯಗಳನ್ನು ಕೋರುತ್ತದೆ

–ಕಾರ್ಯನಿರ್ವಾಹಕ ಸಂಪಾದಕ

ಇಂದಿನ ಸಂಚಿಕೆಯೊಂದಿಗೆ **2024ರ ಆಕರ್ಷಕ ಕ್ಯಾಲೆಂಡರ್** ಕೊಡಲಾಗಿದೆ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಟೌನ್‌ಶಿಪ್ ನಿರ್ಮಾಣ ಪ್ರಸ್ತಾವ: ಸಂಸದ ಸುರೇಶ್, ಶಾಸಕ ರಂಗನಾಥ್ ಆಸಕ್ತಿ?

ಅಡಕತ್ತರಿಯಲ್ಲಿ ಕುಣಿಗಲ್ ಕುದುರೆ ಫಾರ್ಮ್

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಜಗತ್ತಿನ ಕುದುರೆ ತಳಿ ಸಂವರ್ಧನಾ ಕೇಂದ್ರಗಳಲ್ಲಿ ಅತ್ಯಂತ ಪುರಾತನವಾದವುಗಳಲ್ಲಿ ಒಂದಾಗಿರುವ 'ಕುಣಿಗಲ್ ಕುದುರೆ ಫಾರ್ಮ್'ನ ಜಮೀನಿನಲ್ಲಿ ಅತ್ಯಾಧುನಿಕ ಸೌಕರ್ಯಗಳಿರುವ ಉಪನಗರ ನಿರ್ಮಾಣಕ್ಕೆ ನಗರಾಭಿವೃದ್ಧಿ ಇಲಾಖೆ ಮುಂದಾಗಿದೆ. ಇದರಿಂದಾಗಿ ಎರಡೂವರೆ ಶತಮಾನಗಳ ಇತಿಹಾಸವಿರುವ ಕುದುರೆ ಫಾರ್ಮ್ ಭವಿಷ್ಯ ಅಡಕತ್ತರಿಯಲ್ಲಿ ಸಿಲುಕಿದೆ.

ಕುದುರೆ ಫಾರ್ಮ್‌ನ 100 ಎಕರೆಯನ್ನು ಬೆಂಗಳೂರು ಟರ್ಫ್ ಕ್ಲಬ್ ಸ್ಥಳಾಂತರಕ್ಕೆ ಬಳಸುವ ಪ್ರಸ್ತಾವವಿದೆ. ಉಳಿದ 321 ಎಕರೆ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಿಸಬೇಕೆಂಬ ಪ್ರಸ್ತಾವವನ್ನು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಮತ್ತು ಕುಣಿಗಲ್ ಶಾಸಕ ಡಾ.ಎಚ್‌.ಡಿ. ರಂಗನಾಥ್ ಮುಂದಿಟ್ಟಿದ್ದಾರೆ.

'ಭೂ ಕಬಳಿಕೆಯ ಸಂಚು'

'ಕುಣಿಗಲ್‌ನ ಹವಾಮಾನದ ಕಾರಣದಿಂದ ಜಗತ್ತಿನಲ್ಲಿ ಅತ್ಯಂತ ಉತ್ಕೃಷ್ಟವಾದ ಕುದುರೆಗಳು ಇಲ್ಲಿ ಜನಿಸುತ್ತಿವೆ. ಈಗ ಬೆಂಗಳೂರು ಟರ್ಫ್ ಕ್ಲಬ್ ಹಾಗೂ ಕುದುರೆ ಫಾರ್ಮ್‌ನ ಜಮೀನುಗಳನ್ನು ಕಬಳಿಸಲು ವ್ಯವಸ್ಥಿತ ಸಂಚು ನಡೆಯುತ್ತಿದೆ' ಎಂದು ಆರೋಪಿಸುತ್ತಾರೆ ಕುಣಿಗಲ್‌ನ ಮಾಜಿ ಶಾಸಕ ಬಿ.ಬಿ. ರಾಮಸ್ವಾಮಿ ಗೌಡ.

'ದೊಡ್ಡಕೆರೆ, ರಾಮಬಾಣದ ಹಂತ, ಹೇರೂರು ಕಾವಲ್ ಮತ್ತು ಬೇಗೂರು ಕಾವಲ್‌ಗಳಲ್ಲೂ ಕುಣಿಗಲ್ ಕುದುರೆ ಫಾರ್ಮ್‌ಗೆ ಸೇರಿದ ಜಮೀನುಗಳಿವೆ. ಈ ಎಲ್ಲವುಗಳ ಮೇಲೂ ಕಣ್ಣುಬಿದ್ದಿದೆ. ಕುಣಿಗಲ್ ಪಟ್ಟಣವೇ ಇನ್ನೂ ಅಭಿವೃದ್ಧಿಯಾಗಿಲ್ಲ. ಇನ್ನೇಕೆ ಹೊಸ ಟೌನ್‌ಶಿಪ್? ಇದರ ಹಿಂದೆ ಯಾವ ಹಿತಾಸಕ್ತಿ ಇದೆ ಎಂಬುದು ಜನರಿಗೆ ಗೊತ್ತಿಲ್ಲವೆ' ಎಂದು ಪ್ರಶ್ನಿಸಿದರು.

'ಕುದುರೆ ಫಾರ್ಮ್ ಒಂದು ಪಾರಂಪರಿಕ ತಾಣ. ಅದನ್ನು ಸರ್ಕಾರವೇ ನಿರ್ವಹಿಸಲಿ. ಪೊಲೀಸ್ ಇಲಾಖೆಯ ಅಶ್ವದಳದ ಸುಪರ್ದಿಗೆ ನೀಡಲಿ. ಅದನ್ನು ಟೌನ್‌ಶಿಪ್ ಮಾಡಲು ಕುಣಿಗಲ್ ಜನರು ಅವಕಾಶ ನೀಡುವುದಿಲ್ಲ' ಎಂದರು.

11 ನೇ ಪುಟ ನೋಡಿ

ಹಡಗುಗಳ ಮೇಲೆ ದಾಳಿ ಕಣ್ಗಾವಲು ಬಲ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅರಬ್ಬಿ ಸಮುದ್ರ, ಏಡನ್ ಕೊಲ್ಲಿಯಲ್ಲಿ ಯುದ್ಧನೌಕೆ ನಿಯೋಜನೆ
- ಸರಕು ಸಾಗಣೆ ಹಡಗುಗಳ ಮೇಲಿನ ದಾಳಿಯ ಬಳಿಕ ಕ್ರಮ
- ಗಸ್ತು ವಿಮಾನ, ಡ್ರೋನ್‌ಗಳ ಬಳಕೆ

ನವದೆಹಲಿ: ಸರಕು ಸಾಗಣೆ ಹಡಗುಗಳ ಮೇಲೆ ಈಚೆಗೆ ನಡೆದ ದಾಳಿಯ ಕಾರಣದಿಂದ ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರ ಮತ್ತು ಏಡನ್ ಕೊಲ್ಲಿಯಲ್ಲಿ ಯುದ್ಧನೌಕೆಗಳನ್ನು ನಿಯೋಜಿಸಿ ಕಣ್ಗಾವಲು ಗಣನೀಯವಾಗಿ ಹೆಚ್ಚಿಸಿದೆ.

ವಿಶಾಲ ವ್ಯಾಪ್ತಿಯ ಕಣ್ಗಾವಲಿಗೆ ಗಸ್ತು ವಿಮಾನ ಮತ್ತು ಡ್ರೋನ್‌ಗಳನ್ನು ನಿಯೋಜಿಸಿದ್ದು, ಕರಾವಳಿ ಕಾವಲು ಪಡೆಗಳ ಜತೆ ಸಮನ್ವಯ ಸಾಧಿಸಿ ಒಟ್ಟಾರೆ ಪರಿಸ್ಥಿತಿಯ ಮೇಲೆ ನಿಗಾ ವಹಿಸಲಾಗಿದೆ.



'ಕಳೆದ ಕೆಲವು ವಾರಗಳಲ್ಲಿ ಕೆಂಪು ಸಮುದ್ರ, ಏಡನ್ ಕೊಲ್ಲಿ ಮತ್ತು ಮಧ್ಯ/ಉತ್ತರ ಅರಬ್ಬಿ ಸಮುದ್ರದಲ್ಲಿ ಅಂತರರಾಷ್ಟ್ರೀಯ ಹಡಗು ಮಾರ್ಗಗಳ ಮೂಲಕ ಸಾಗುವ ಸರಕು ಸಾಗಣೆ ಹಡಗುಗಳ ಭದ್ರತೆಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಿವೆ' ಎಂದು ನೌಕಾಪಡೆ ಪ್ರಕಟಣೆ ತಿಳಿಸಿದೆ.

'ಹೀಗಾಗಿ, ಯುದ್ಧನೌಕೆಗಳನ್ನು ಒಳಗೊಂಡ ಕಾರ್ಯಪಡೆಯನ್ನು ನಿಯೋಜಿಸಲಾಗಿದೆ. ಸರಕು ಸಾಗಣೆ ಹಡಗುಗಳ ಮೇಲೆ ಯಾವುದೇ ದಾಳಿ ನಡೆದರೆ ತಕ್ಷಣವೇ ನೆರವಿಗೆ ಧಾವಿಸುವಂತೆ ಸೂಚಿಸಲಾಗಿದೆ. ಹಡಗುಗಳ ಸುರಕ್ಷತೆ ಖಾತರಿಪಡಿಸಿಕೊಳ್ಳಲು ನೌಕಾಪಡೆ ಬದ್ಧವಾಗಿದೆ' ಎಂದು ಹೇಳಿದೆ.

11 ನೇ ಪುಟ ನೋಡಿ

ಯಶಸ್ಸಿನ ಕೈದೀವಿಗೆ



ಯಶಸ್ಸಿಗಾಗಿ ಹಾತೊರೆಯುತ್ತಿರುವ ಕನ್ನಡದ ಯುವ ಪೀಳಿಗೆಯನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು 'ಪ್ರಜಾವಾಣಿ ಬಳಗ'ದಿಂದ ರೂಪಿಸಲಾದ 'ಸ್ಪರ್ಧಾವಾಣಿ' ಮಾಸಿಕದ ಹೊಸ ಸಂಚಿಕೆ ಇದೀಗ ಮಾರುಕಟ್ಟೆಯಲ್ಲಿದೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್ ಸೇರಿ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಈ ಮ್ಯಾಗಝಿನ್ ಕೈದೀವಿಗೆಯಾಗಿದೆ.

ಬಹುಆಯ್ಕೆ ಮಾದರಿಯ ಪ್ರಶ್ನೋತ್ತರಗಳು, ಪ್ರಚಲಿತ ವಿದ್ಯಮಾನಗಳ ಟಿಪ್ಪಣಿಗಳು, ಸುದ್ದಿ ವಿಶ್ಲೇಷಣೆಗಳು, ಪರೀಕ್ಷೆಯಲ್ಲಿ ಯಶಸ್ವಿಯಾದ ಸಾಧಕರ ಅನುಭವ ಗಾಥೆಗಳು... ಹೀಗೆ ಇಲ್ಲಿನ ರಸಪಾಕವು ಯಶಸ್ಸಿನ ಯಾತ್ರೆಗೆ ಟಾನಿಕ್ ಆಗಿ ಒದಗಲಿದೆ. ಹೊಸ ಸಂಚಿಕೆಗೆ ಇಂದೇ ಏಜೆಂಟರನ್ನು ವಿಚಾರಿಸಿ.

ದಾವಣಗೆರೆಯಲ್ಲಿ ರಾಜ್ಯಮಟ್ಟದ ಮಹಿಳಾ ಸಮ್ಮೇಳನ ಜ. 6ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್ಎಸ್) ವತಿಯಿಂದ 2024ರ ಜನವರಿ 6 ಮತ್ತು 7ರಂದು ದಾವಣಗೆರೆಯಲ್ಲಿ 7ನೇ ರಾಜ್ಯಮಟ್ಟದ ಮಹಿಳಾ ಸಮ್ಮೇಳನವನ್ನು ಆಯೋಜಿಸಲಾಗಿದೆ' ಎಂದು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ಅಪರ್ಣಾ ಬಿ.ಆರ್. ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಿ, ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಆರೋಗ್ಯ ಖಚಿತಪಡಿಸಿ, ದುಡಿಯುವ ಮಹಿಳೆಯರಿಗೆ ಕನಿಷ್ಠವೇತನ ಸೇವಾಭದ್ರತೆ ಖಾತ್ರಿ ಪಡಿಸಿ ಎಂಬ ಘೋಷ ವ್ಯಾಕ್ಯ ಗಳೊಂದಿಗೆ ಈ ಬಾರಿಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ' ಎಂದು ಹೇಳಿದರು.

ಸಾಮಾಜಿಕ ಹೋರಾಟಗಾರ್ತಿ ರೂಪ ಹಾಸನ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ರಾಜ್ಯ ಕಾರ್ಯದರ್ಶಿ ಶೋಭಾ ಎಸ್. ಅಧ್ಯಕ್ಷತೆ ವಹಿಸಲಿದ್ದಾರೆ. ಎಂ.ಆರ್. ಹಿರೇಮಠ, ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ, ಎಐಎಂಎಸ್ಎಸ್ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಛಬ್ಬಿ ಮೊಹಂತಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಗೃಹ ಸಚಿವ ಪರಮೇಶ್ವರ

'ಮುಂದೆ ಮೀಸಲಾತಿ ಕೈ ಹಿಡಿಯದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿ ಶೋಷಿತ ಸಮುದಾಯಗಳಿಗೆ ಸಹಾಯ ಮಾಡಿದೆ. ಆದರೆ, ಮುಂದೆಯೂ ಮೀಸಲಾತಿ ಕೈ ಹಿಡಿದು ನಡೆಸುತ್ತದೆ ಎಂದು ಹೇಳಲಾಗದು. ಈಗಾಗಲೇ ಮೀಸಲಾತಿ ಬಗ್ಗೆ ಒಡಕಿನ ಧ್ವನಿಗಳು ಎದ್ದಿವೆ. ಸಂಯಮದ ಹಾದಿಯಲ್ಲಿ ನಮ್ಮ ಏಳಿಗೆಯನ್ನು ನಾವೇ ಮಾಡಿಕೊಳ್ಳಬೇಕು' ಎಂದು ಗೃಹ ಸಚಿವಜಿ. ಪರಮೇಶ್ವರ ಹೇಳಿದರು.

ಸಮತಾ ಸೈನಿಕ ದಳ, ಭಾರತೀಯ ಬೌದ್ಧ ಮಹಾಸಭಾ, ನಾಗಸೇನಾ ಬುದ್ಧವಿಹಾರ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶೋಷಿತ ಸಮುದಾಯಗಳ ಮೇಲೆ ದೌರ್ಜನ್ಯ ನಿಂತಿಲ್ಲ. ಸಂಘರ್ಷವೇ ಬದುಕಾಗಿದೆ. ಇದರ ನಡುವೆ ಸಂವಿಧಾನ ಬದಲಾಯಿಸುತ್ತೇವೆ, ಮೀಸಲಾತಿ ತೆಗೆಯುತ್ತೇವೆ ಎಂಬೆಲ್ಲ ಮಾತುಗಳು ಹೆಚ್ಚಾಗಿವೆ' ಎಂದು ವಿಷಾದಿಸಿದರು.

'ಅನೇಕ ಘಟನೆಗಳು ನಡೆಯುತ್ತಿರುತ್ತವೆ. ಆದರೆ, ಎಲ್ಲ ಘಟನೆಗಳು ದಾಖಲಾಗಿರುವುದಿಲ್ಲ. ಅವರವರಿಗೆ ಬೇಕಾದ ಘಟನೆಗಳನ್ನಷ್ಟೇ ದಾಖಲಿಸಿ ಇಟ್ಟಿರುತ್ತಾರೆ. ಬ್ರಿಟಿಷರು ಆಳಿದ 200 ವರ್ಷಗಳಲ್ಲಿ ಮಾತ್ರ ಎಲ್ಲ ಮಹತ್ವ ಘಟನೆಗಳನ್ನು ದಾಖಲಿಸಿದ್ದಾರೆ. ಅದರಲ್ಲಿ ಭೀಮಾ ಕೋರೆಗಾಂವ್ ಯುದ್ಧವೂ ಒಂದು ಎಂದು' ಹೇಳಿದರು.

'ಭೀಮಾ ನದಿಯ ತೀರದಲ್ಲಿ 1818ರಲ್ಲಿ ನಡೆದ ಯುದ್ಧದಲ್ಲಿ ಪೇಶ್ವೆಯ 28 ಸಾವಿರ ಸೈನಿಕರನ್ನು 500 ಮಹರ್ ಸೈನಿಕರು ಸೋಲಿಸಿದ್ದರು. ಅವಕಾಶ ಸಿಕ್ಕಿದರೆ ಎಂಥ ಹೋರಾಟವನ್ನೂ, ಸಾಧನೆಯನ್ನೂ ಮಾಡಬಲ್ಲ ಸಮುದಾಯ ನಮ್ಮದು ಎಂಬುದಕ್ಕೆ ಈ ಯುದ್ಧ ಸಾಕ್ಷಿ' ಎಂದರು.

'ಅಂಬೇಡ್ಕರ್ ಅವರು ಭೀಮಾ ನದಿಯ ತೀರದಲ್ಲಿ ನಡೆದ ಯುದ್ಧವನ್ನು ಇತಿಹಾಸ ಪುಟಗಳಿಂದ ಎತ್ತಿ ತೋರಿಸಿದರು. ಆದರೆ, ನಮ್ಮ ಸಮುದಾಯ ಇಂದು ಕೀಳರಿಮೆಯಿಂದ ಬಳಲುತ್ತಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮತಾ ಸೈನಿಕ ದಳದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಬಿಕ್ಕುಣಿ ಬುದ್ಧಮ್ಮ, ನಿವೃತ್ತ ಪೊಲೀಸ್ ಅಧಿಕಾರಿ ಸಿದ್ದರಾಜು, ನಾಗಸೇನಾ ವಿದ್ಯಾಲಯದ ಸದಸ್ಯ ಗಂಗಾಧರಯ್ಯ, ಮುಖಂಡರಾದ ಸುರೇಶ್ ಕಂಠಿ, ನರಸಿಂಹಪ್ಪ, ಆರ್‌ಪಿಐ ಸತೀಶ್, ಡಿ.ಎಂ. ಅಂಬರೀಶ್ ಬೋದ್, ಆರ್. ಚಂದ್ರಶೇಖರ್, ಲಯನ್ ಬಾಲಕೃಷ್ಣ ಭಾಗವಹಿಸಿದ್ದರು.



ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ಬೋಧಿಸಲಾಯಿತು. ಬಿಕ್ಕುಣಿ ಬುದ್ಧಮ್ಮ, ಮುಖಂಡರಾದ ಗಂಗಾಧರಯ್ಯ, ಆರ್.ಪಿ.ಐ. ಸತೀಶ್, ಸುರೇಶ್ ಕಂಠಿ, ಗೃಹ ಸಚಿವ ಜಿ. ಪರಮೇಶ್ವರ, ಎಂ. ವೆಂಕಟಸ್ವಾಮಿ ಹಾಗೂ ಲಯನ್ ಬಾಲಕೃಷ್ಣ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

> ಮೀಸಲಾತಿಯಿಂದ ನಮ್ಮ ಒಂದಷ್ಟು ಜನರು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಾಗಿರಬಹುದು. ಆದರೆ, ಗ್ರಾಮೀಣ ಭಾಗಗಳಲ್ಲಿ ಅಸ್ಪೃಶ್ಯತೆ ಇನ್ನೂ ಹೋಗಿಲ್ಲ
> **ಜಿ.ಪರಮೇಶ್ವರ,** ಗೃಹ ಸಚಿವ

ಎನ್‌ಪಿಎಸ್ ಜ.5ಕ್ಕೆ ನೌಕರರ ಜತೆ ಸಿಎಂ ಸಭೆ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.5ರಂದು ಬೆಂಗಳೂರಿನಲ್ಲಿ ನೂತನ ಪಿಂಚಣಿ ನೌಕರರ (ಎನ್‌ಪಿಎಸ್) ಸಂಘದ ಸಭೆ ಕರೆದಿದ್ದಾರೆ. ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿ ಕುರಿತು ಮಹತ್ವದ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಾಂತಾರಾಂ ತೇಜ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ಎನ್‌ಪಿಎಸ್ ನೌಕರರ ಸಂಘದ ಬೆಂಗಳೂರು ವಿಭಾಗೀಯ ಮಟ್ಟದ ಸಂಘಟನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಸಿಎಂ ಜತೆ ಈಗಾಗಲೇ ಮೂರು–ನಾಲ್ಕು ಸಭೆ ಮಾಡಲಾಗಿದೆ. ಮುಂದೆ ನಡೆಯುವ ಸಭೆಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ಸಭೆ ನಂತರ ಸಂಘದ ರಾಜ್ಯ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗುವುದು. ಮುಖ್ಯಮಂತ್ರಿ ಅವರೇ ಸಮಾವೇಶದ ದಿನಾಂಕ ನಿಗದಿ ಪಡಿಸುವುದಾಗಿ ತಿಳಿಸಿದ್ದಾರೆ' ಎಂದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳ ನೌಕರರು ಇದ್ದರು.

ವರ್ತೂರಿನಲ್ಲಿ ವಿಜೃಂಭಣೆಯ ಶ್ರೀನಿವಾಸ ಕಲ್ಯಾಣೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಪ್ರತಿಯೊಬ್ಬರೂ ಸನ್ಮಾರ್ಗದ ಪರಿಕಲ್ಪನೆಯನ್ನು ಬಿತ್ತುವಂತಹ ಕೆಲಸ ಮಾಡಬೇಕು' ಎಂದು ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ವರ್ತೂರಿನಲ್ಲಿ ಸ್ವಾಮಿ ವಿವೇಕಾನಂದ ಸೇವಾ ಸಮಿತಿ ಮತ್ತು ವಿಶ್ವ ಹಿಂದೂ ಪರಿಷತ್ತಿನ ಸಹಯೋಗದಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.



ವರ್ತೂರಿನಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಿತು

'ಮಾನವೀಯತೆಯ ಮೌಲ್ಯವನ್ನು ಬೆಳೆಸಿಕೊಂಡು, ಮತ್ತೊಬ್ಬರಿಗೆ ನೆರವಾಗುವ ರೀತಿಯಲ್ಲಿ ಸರಳ ಜೀವನ ಶೈಲಿ ರೂಢಿಸಿಕೊಳ್ಳಬೇಕು. ಎಲ್ಲ ಧರ್ಮಗಳನ್ನು ಪ್ರೀತಿಸುವ ಗುಣ ಹೊಂದಬೇಕು' ಎಂದರು.

'ಗೋವುಗಳೆಂದರೆ ಪರಮಾತ್ಮನಿಗೆ ಅತ್ಯಂತ ಪ್ರೀತಿ. ಆದ ಕಾರಣ ಗೋವುಗಳನ್ನು ರಕ್ಷಿಸುವ ಕೆಲಸ ಮಾಡುವ ಮೂಲಕ ಭಗವಂತನ ಅನುಗ್ರಹ ಪಡೆದು ಕೊಳ್ಳಬೇಕು' ಎಂದರು.

ಈ ಸಂದರ್ಭದಲ್ಲಿ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ವಿಶ್ವ ಹಿಂದೂ ಪರಿಷತ್ ದಕ್ಷಿಣ ಪ್ರಾಂತ ಕಾರ್ಯದರ್ಶಿ ಜಗನಾಥ್ ಶಾಸ್ತ್ರಿ, ಕಾರ್ಯಕ್ರಮ ಆಯೋಜಕ ಎನ್.ಪಿ.ಮುನಿರಾಜು, ಮುಖಂಡರಾದ ಮನೋಹರರೆಡ್ಡಿ, ರಾಜಾರೆಡ್ಡಿ, ಶ್ರೀಕೃಷ್ಣ ಇದ್ದರು.

ವಿಚಾರಣಾಧೀನ ಕೈದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ದರೋಡೆ ನಡೆಸಿದ್ದ ಪ್ರಕರಣವೊಂದರಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದ ವಿಚಾರಣಾಧೀನ ಕೈದಿ ಪರಪ್ಪನ ಅಗ್ರಹಾರದ ಕಾರಾಗೃಹದಲ್ಲಿ ಮೃತಪಟ್ಟಿದ್ದಾನೆ.

ಮಡಿವಾಳದ ತಾವರೆಕೆರೆ ನಿವಾಸಿ ಗಣೇಶ್ ಮೃತಪಟ್ಟವರು.

'ಎಚ್‌ಎಸ್ ಆರ್ ಲೇಔಟ್ ಠಾಣೆಯ ಪೊಲೀಸರ ವಶ ದಲ್ಲಿದ್ದಾಗ ಆರೋಪಿಗೆ ನೀಡಿದ ಹಿಂಸೆಯಿಂದ ಮೃತಪಟ್ಟಿದ್ದಾರೆ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಡಿ.12ರಂದು ರಾತ್ರಿ 9.30ರ ಸುಮಾರಿಗೆ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಸಂಜೀವ್ ಕುಮಾರ್ ಬೊರೊ ಎಂಬುವವರ ಮನೆಗೆ ನುಗ್ಗಿದ ಆರೋಪಿ, ಪೊಲೀಸ್ ಅಧಿಕಾರಿ ಎಂದು ಪರಿಚಯಿಸಿ ಕೊಂಡಿದ್ದ. ಬಳಿಕ, 'ನಿಮ್ಮಿಂದ ಅಕ್ಕಪಕ್ಕದ ಮನೆಯ ನಿವಾಸಿಗಳಿಗೆ ತೊಂದರೆ ಯಾಗುತ್ತಿದೆ' ಎಂಬ ದೂರು ಬಂದಿದೆ ಎಂದು ಆರೋಪಿ ಹೇಳಿದ್ದ. ಅದಕ್ಕೆ ದಂಪತಿ ಆಕ್ಷೇಪ ವ್ಯಕ್ತಪಡಿಸಿದ್ದರು. ಬಳಿಕ ಬೆದರಿಸಿ ದಂಪತಿಯಿಂದ ₹2.5 ಲಕ್ಷ ನಗದು ಸುಲಿಗೆ ಮಾಡಿ ಪರಾರಿಯಾಗಿದ್ದ. ಈ ಸಂಬಂಧ ಸಂಜೀವ್ ಕುಮಾರ್ ಬೊರೊ ಎಚ್‌ಎಸ್‌ಆರ್ ಲೇಔಟ್ ಠಾಣೆಗೆ ದೂರು ನೀಡಿದ್ದರು.

'ಬಳಿಕ ಕಾರ್ಯಾಚರಣೆ ನಡೆಸಿ ಪೊಲೀಸರು ಕೆಲವು ದಿನಗಳ ಹಿಂದೆ ಆರೋಪಿ ಗಣೇಶ್ ಸೇರಿದಂತೆ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಗಣೇಶ್‌ಗೆ ಪೊಲೀಸರು ಹಿಂಸೆ ನೀಡಿದ್ದಾರೆ; ಥಳಿಸಿದ್ದಾರೆ. ಇದೇ ಸಾವಿಗೆ ಕಾರಣ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

'ವಿಚಾರಣೆ ಬಳಿಕ ಕೋರ್ಟ್‌ಗೆ ಹಾಜರು ಪಡಿಸಿ, ಪರಪ್ಪನ ಅಗ್ರಹಾರದ ಕಾರಾಗೃಹಕ್ಕೆ ಕಳುಹಿಸಲಾಗಿತ್ತು. ಕೆಲ ದಿನಗಳಿಂದ ಗಣೇಶ್‌ಗೆ ಊಟ ಸೇರುತ್ತಿರಲಿಲ್ಲ. ಬಳಿಕ ಜೈಲಿನ ಆಸ್ಪತ್ರೆಯಲ್ಲಿ ಆತನಿಗೆ ಚಿಕಿತ್ಸೆ ಕೊಡಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆಂದು ನಗರಕ್ಕೆ ಕರೆತರುವಾಗ ಮಾರ್ಗಮಧ್ಯೆಯೇ ಮೃತಪಟ್ಟಿ ದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ವಿಚಾರಣೆ ನೆಪದಲ್ಲಿ ಗಣೇಶ್‌ನನ್ನು ಐದಾರು ದಿನಗಳ ಕಾಲ ಠಾಣೆಯಲ್ಲೇ ಇರಿಸಿಕೊಂಡಿದ್ದರು. ಈ ವೇಳೆ ಗಣೇಶ್‌ನ ಮರ್ಮಾಂಗ ಮತ್ತು ಗುದದ್ವಾರಕ್ಕೆ ಖಾರದಪುಡಿ ಹಾಕಿದ್ದರು' ಎಂದು ಗಣೇಶ್ ಪೋಷಕರು ಹಾಗೂ ಸ್ನೇಹಿತರು ದೂರಿದ್ದಾರೆ.

ಈ ಬಗ್ಗೆ ಠಾಣಾಧಿಕಾರಿ ಹರೀಶ್ ಕುಮಾರ್‌ಗೆ ಹಲವು ಬಾರಿ ಕರೆ ಮಾಡಿದರೂ ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಅತ್ಯಾಚಾರ: ಕ್ಯಾಡಿಲಾ ಸಿಎಂಡಿ ವಿರುದ್ಧ ಎಫ್‌ಐಆರ್

ಅಹಮದಾಬಾದ್ (ಪಿಟಿಐ): ಬಲ್ಗೇರಿಯಾದ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಮತ್ತು ಹಲ್ಲೆ ನಡೆಸಿ, ಉದ್ದೇಶ ಪೂರ್ವಕ ಅವಮಾನ ಮಾಡಿರುವ ಆರೋಪ ಸಂಬಂಧ ಕ್ಯಾಡಿಲಾ ಫಾರ್ಮಾಸ್ಯುಟಿಕಲ್ಸ್ ಕಂಪನಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಗುಜರಾತ್ ಹೈಕೋರ್ಟ್ ನಿರ್ದೇಶನದ ಮೇರೆಗೆ ಎಫ್‌ಐಆರ್ ದಾಖಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

'ಗುಜರಾತ್ ಹೈಕೋರ್ಟ್ ಡಿ.22ರಂದು ನೀಡಿರುವ ನಿರ್ದೇಶನ ಅನುಸಾರ, ಸಂತ್ರಸ್ತೆಯ ದೂರು ಆಧರಿಸಿ ಕ್ಯಾಡಿಲಾ ಫಾರ್ಮಾ ಸಿಎಂಡಿ ರಾಜೀವ್ ಮೋದಿ ಮತ್ತು ಜಾನ್ಸನ್ ಮ್ಯಾಥ್ಯೂ ಎಂಬುವವರ ವಿರುದ್ಧ ಸೋಲಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ' ಎಂದು ಎಸಿಪಿ ಎಚ್.ಎಂ. ಕನ್ನಾಗ್ರ ತಿಳಿಸಿದ್ದಾರೆ.

ಮಹಿಳೆಯ ದೂರಿನ ಬಗ್ಗೆ ಸಮರ್ಥ ಪೊಲೀಸ್ ಅಧಿಕಾರಿಯಿಂದ ತನಿಖೆ ನಡೆಸುವಂತೆ ಆದೇಶಿಸಲು ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್‌ಗೆ ಹೈಕೋರ್ಟ್ ನಿರ್ದೇಶಿಸಿದೆ. ಡಿಐಜಿ (ಕಾನೂನು ಮತ್ತು ಸುವ್ಯವಸ್ಥೆ) ನೇಮಿಸುವ ಹಿರಿಯ ಐಪಿಎಸ್ ಅಧಿಕಾರಿ ಮೇಲ್ವಿಚಾರಣೆಯಲ್ಲಿ ಎರಡು ತಿಂಗಳೊಳಗೆ ತನಿಖೆ ಪೂರ್ಣಗೊಳಿಸುವಂತೆಯೂ ಆದೇಶದಲ್ಲಿ ಸೂಚಿಸಿದೆ.

2022ರಲ್ಲಿ ಬಲ್ಗೇರಿಯಾದಿಂದ ಬಂದಿದ್ದ ಮಹಿಳೆ, ಅಹಮದಾಬಾದ್ ಮೂಲದ ಕ್ಯಾಡಿಲಾ ಫಾರ್ಮಾ ಕಂಪನಿಯಲ್ಲಿ ವಿಮಾನದ ಪರಿಚಾರಕಿಯಾಗಿ ಕೆಲಸಕ್ಕೆ ಸೇರಿದ್ದರು.

ಕುಂದು ಕೊರತೆ — ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದು ಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**)ಸಹ ಮಾಡಬಹುದು.


'ಕಸದ ರಾಶಿ ವಿಲೇವಾರಿಯಾಗಲಿ'

ಹನುಮಂತನಗರದ ಯೋಗ ಆಂಜನೇಯ ದೇವಾಲಯದ ಬಳಿ ಕಸದ ರಾಶಿ ಬೆಳೆಯುತ್ತಲೇ ಇದೆ. ಅಧಿಕಾರಿಗಳಿಗೆ ದೂರು ನೀಡಿದರೂ ಈ ಬಗ್ಗೆ ಕ್ರಮಕೈಗೊಂಡಿಲ್ಲ. ಇದರಿಂದಾಗಿ ಆ ಜಾಗ ಕಸದ ತೊಟ್ಟಿಯಾಗಿ ಪರಿಣಮಿಸಿದೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಬಿ.ಆರ್. ಸುರೇಶ್, ಗವಿಪುರ



ಹನುಮಂತನಗರದ ಯೋಗ ಆಂಜನೇಯ ದೇವಾಲಯದ ಬಳಿ ಕಸದ ರಾಶಿ ಹಾಕಿರುವುದು



ಸೇಂಟ್ ಪೀಟರ್ ತೆಲುಗು ಚರ್ಚ್ ಬಳಿ ರಸ್ತೆಯ ಇಕ್ಕೆಲ ವಾಹನಗಳನ್ನು ನಿಲ್ಲಿಸಿರುವುದು

'ರಸ್ತೆಯ ಇಕ್ಕೆಲ ವಾಹನ ಪಾರ್ಕಿಂಗ್'

ಸಿಎಸ್ಐ ಕಾಂಪೌಂಡ್‌ನ ಮೊದಲನೇ ಅಡ್ಡ ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ಈ ರಸ್ತೆಯಲ್ಲಿ ವಾಹನ ಸಂಚಾರ ಕಷ್ಟಸಾಧ್ಯವಾಗಿದೆ. ಈ ರಸ್ತೆಗೆ ಹೊಂದಿಕೊಂಡು ಸೇಂಟ್ ಪೀಟರ್ ತೆಲುಗು ಚರ್ಚ್ ಇದ್ದು, ಕಾರು ಸೇರಿದಂತೆ ವಿವಿಧ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಲಾಗುತ್ತಿದೆ. ಕಾರು ಸೇರಿದಂತೆ ದೊಡ್ಡ ವಾಹನಗಳು ಬಂದರೆ ರಸ್ತೆಯಲ್ಲಿ ತೆರಳಲು ಪರದಾಟ ನಡೆಸಬೇಕಾಗುತ್ತದೆ. ಚರ್ಚ್‌ಗೆ ಬರುವವರು ಸಹ ರಸ್ತೆಯ ಅಕ್ಕಪಕ್ಕದಲ್ಲಿಯೇ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಸಂಚಾರ ಪೊಲೀಸರು ಈ ಬಗ್ಗೆ ಗಮನಹರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ಮಹೇಶ್, ಐಟಿ ಉದ್ಯೋಗಿ

'ಅಗತ್ಯ ಮೂಲಸೌಕರ್ಯ ಕಲ್ಪಿಸಿ'

ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ದಾಸರಹಳ್ಳಿಯ ಮಾರುತಿ ಬಡಾವಣೆ 1 ಮತ್ತು 2ನೇ ಕ್ರಾಸ್‌ನಲ್ಲಿ ಸುಸಜ್ಜಿತ ರಸ್ತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಸೇರಿ ಅಗತ್ಯ ಮೂಲಸೌಕರ್ಯಗಳಿಲ್ಲ. ನಾಲ್ಕು ತಿಂಗಳಿಂದ ಬೀದಿ ದೀಪವೂ ಬೆಳಗುತ್ತಿಲ್ಲ. ಗ್ರಾಮ ದೇವತೆ ಕಾಟೇರಮ್ಮ ದೇವಸ್ಥಾನಕ್ಕೆ ಹಾವು–ಚೇಳಿನ ಭಯದಲ್ಲಿಯೇ ಸಾಗಬೇಕಾಗಿದೆ. ಹಳೆ ಮೋರಿಯಲ್ಲಿ ಹೂಳು ತುಂಬಿ, ಮೂರು ವರ್ಷಗಳಿಂದ ನೀರು ನಿಂತಿದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಳವಾಗಿದೆ. ಈಗಲಾದರೂ ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಿ, ಸಮಸ್ಯೆಗಳನ್ನು ನಿವಾರಿಸಬೇಕು.

ಮಾರುತಿ ಬಡಾವಣೆ ನಿವಾಸಿಗಳು

'ರಸ್ತೆಗೆ ಡಾಂಬರು ಹಾಕಿ'

ತ್ಯಾಗರಾಜನಗರದ 2ನೇ ಬ್ಲಾಕ್‌ನಲ್ಲಿರುವ ಗಣೇಶ ಮಂದಿರ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಡಾಂಬರೀಕರಣ ಕಾಮಗಾರಿ ಸೂಕ್ತ ರೀತಿಯಲ್ಲಿ ನಡೆಯದಿದ್ದರಿಂದ ಕೆಲವೇ ದಿನಗಳಲ್ಲಿ ರಸ್ತೆ ಕಿತ್ತು ಹೋಗಿದೆ. ಇದರಿಂದಾಗಿ ವಾಹನ ಸವಾರರು ಇಲ್ಲಿ ಸಂಚರಿಸಲು ಸಮಸ್ಯೆ ಎದುರಿಸಬೇಕಾಗಿದೆ. ಕೆಟ್ಟ ರಸ್ತೆಯಲ್ಲಿ ಬಿದ್ದು, ಹಲವರಿಗೆ ಗಾಯಗಳಾಗಿವೆ. ವಾಹನಗಳ ಸಂಚಾರ ಹೆಚ್ಚಾಗಿರುವ ಈ ರಸ್ತೆಯನ್ನು ಶೀಘ್ರ ಸರಿಪಡಿಸಬೇಕು.

ಮಹೇಶ್ ಡಿ., ಗಣೇಶ ಮಂದಿರ ರಸ್ತೆ ನಿವಾಸಿ



ಕನ್ಸರ್ವೆನ್ಸಿ ರಸ್ತೆಯಲ್ಲಿ ಕಸ ಹಾಕಿರುವುದು

'ತ್ಯಾಜ್ಯದಿಂದ ಆವರಿಸಿಕೊಂಡ ರಸ್ತೆ'

ಗಾಂಧಿನಗರ ಪ್ರದೇಶಕ್ಕೆ ಹೊಂದಿಕೊಂಡಿರುವ ಒಂದನೆ ಹಾಗೂ ಎರಡನೆ ಕ್ರಾಸ್‌ಗೆ ಸಂಪರ್ಕ ಕಲ್ಪಿಸುವ ಕನ್ಸರ್ವೆನ್ಸಿ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಈ ರಸ್ತೆ ತುಂಬಾ ಭಾರಿ ಪ್ರಮಾಣದಲ್ಲಿ ತ್ಯಾಜ್ಯದ ರಾಶಿಯನ್ನು ಸುರಿಯಲಾಗಿದೆ. ಬಿಬಿಎಂಪಿ ಅಧಿಕಾರಿಗಳ ಅಸಡ್ಡೆಯಿಂದ ರಸ್ತೆ ಹೊಲಸು ಕೊಂಪೆಯಾಗಿದೆ. ಇಲ್ಲಿ ಮೂಗು ಮುಚ್ಚಿಕೊಂಡೇ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ, ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು.

ಶಿವಪ್ರಸಾದ್ ಎಸ್., ಗಾಂಧಿನಗರ

ಹೆಣ್ಣು ಮರಿಗೆ ಜನ್ಮ ನೀಡಿದ ಆನೆ ‘ರೂಪಾ’

ಹೊಸ ವರ್ಷಕ್ಕೆ ‘ಹೊಸ ಅತಿಥಿ’

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಹೊಸ ವರ್ಷಕ್ಕೆ ಹೊಸ ಅತಿಥಿ ಆಗಮನ ಆಗಿದೆ. ಆನೆ ‘ರೂಪಾ’ ಮುದ್ದಾದ ಹೆಣ್ಣು ಮರಿಯೊಂದಕ್ಕೆ ಜನ್ಮ ನೀಡಿದೆ.


ನೂತನ ಅತಿಥಿ ಆಗಮನದಿಂದ ಬನ್ನೇರುಘಟ್ಟ ಆನೆ ಕುಟುಂಬಸ್ಥರ ಸಂಖ್ಯೆ 25ಕ್ಕೇರಿದೆ. ರೂಪಾ ಜನ್ಮ ನೀಡಿರುವ ಮೂರನೇ ಮರಿ ಇದಾಗಿದೆ. ಈ ಹಿಂದೆ 2016ರಲ್ಲಿ ಗೌರಿ, 2020ರಲ್ಲಿ ಬಸವ ಎಂಬ ಮರಿಗಳಿಗೆ ಜನ್ಮ ನೀಡಿತ್ತು.

ಮರಿಯಾನೆ ಸುಮಾರು 120 ಕೆ.ಜಿ ಇದ್ದು ಆರೋಗ್ಯವಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

ಮರಿಯಾನೆ ವೀಕ್ಷಣೆಗೆ ಪ್ರವಾಸಿಗರಿಗೆ ಅವಕಾಶ ನೀಡಲಾಗಿದೆ. ಆನೆ ಸಫಾರಿಗೆ ಬರುವ ಪ್ರವಾಸಿಗರು ಮರಿಯ ಚೆನ್ನಾಟ ಕಣ್ತುಂಬಿಕೊಂಡು ಖುಷಿಪಡುತ್ತಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ವೈದ್ಯ ಡಾ.ಕಿರಣ್ ಮತ್ತು ಆರ್‌ಎಫ್‌ಒ ದಿನೇಶ್ ಮಾರ್ಗದರ್ಶನದಲ್ಲಿ ಮಾವುತ ಕೆ.ರಾಜಣ್ಣ ಅವರು ತಾಯಿ ಮತ್ತು ಮರಿ ಆನೆಯನ್ನು ಜೋಪಾನ ಮಾಡುತ್ತಿದ್ದಾರೆ.

ಉದ್ದು, ಅವಲಕ್ಕಿ, ಕಡಲೆಕಾಳು, ಹೆಸರುಕಾಳು, ತೆಂಗಿನಕಾಯಿ ಸೇರಿದಂತೆ ವಿಶೇಷ ಆಹಾರ ನೀಡಲಾಗುತ್ತಿದೆ ಎಂದು ಉದ್ಯಾನದ ಆನೆ ಮೇಲ್ವಿಚಾರಕ ಸುರೇಶ್ ತಿಳಿಸಿದರು.




ಮರಿಯ ಜೊತೆಗೆ ತಾಯಿ ಆನೆ

ಬನ್ನೇರುಘಟ್ಟ: ಜನಜಂಗುಳಿ

ಆನೇಕಲ್: ಹೊಸ ವರ್ಷದ ಮುನ್ನಾ ದಿನವಾದ ಭಾನುವಾರ ಬನ್ನೇರುಘಟ್ಟ ಜೈವಿಕ ಉದ್ಯಾನ ಜನಜಂಗುಳಿಯಿಂದ ತುಂಬಿತ್ತು. ಉದ್ಯಾನದ ಮೃಗಾಲಯ, ಸಫಾರಿ, ಚಿಟ್ಟೆ ಪಾರ್ಕ್ ಸೇರಿದಂತೆ ವಿವಿಧ ತಾಣಗಳ ವೀಕ್ಷಣೆಗೆ ಜನರು ಮುಗಿಬಿದ್ದಿದ್ದರು. ಟಿಕೆಟ್ ಕೌಂಟರ್‌ನಲ್ಲಿ ಸಂಜೆ 5ರವರೆಗೂ ಸರತಿ ಸಾಲಿನಲ್ಲಿ ನಿಂತು ಟಿಕೆಟ್ ಪಡೆಯುತ್ತಿದ್ದ ದೃಶ್ಯ ಕಂಡು ಬಂದಿತು.

ಮಿಥಿಕ್ ಸೊಸೈಟಿ ಅಧ್ಯಕ್ಷರಾಗಿ ವಿ. ನಾಗರಾಜ್ ಆಯ್ಕೆ

ಬೆಂಗಳೂರು: ದಿ ಮಿಥಿಕ್ ಸೊಸೈಟಿಯ ಸರ್ವಸದಸ್ಯರ ಸಭೆ ಮತ್ತು ಚುನಾವಣೆ ಭಾನುವಾರ ನಡೆದಿದ್ದು, ನೂತನ ಅಧ್ಯಕ್ಷರಾಗಿ ವಿ. ನಾಗರಾಜ್ ಆಯ್ಕೆಯಾಗಿದ್ದಾರೆ.



ವಿ. ನಾಗರಾಜ್

ಗೌರವ ಕಾರ್ಯದರ್ಶಿಯಾಗಿ ಎಸ್. ರವಿ, ಉಪಾಧ್ಯಕ್ಷರಾಗಿ, ವಿ. ಅನುರಾಧಾ ಹಾಗೂ ಗೌರವ ಕೋಶಾಧ್ಯಕ್ಷರಾಗಿ ಕೆ.ಎನ್. ಹಿರಿಯಣ್ಣಯ್ಯ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿ ಸದಸ್ಯರಾಗಿ ತಿಪ್ಪೇಸ್ವಾಮಿ ಎನ್., ಎಂ.ಆರ್. ಪ್ರಸನ್ನ ಕುಮಾರ್, ಎಂ. ಕೊಟ್ರೇಶ್, ಸುದರ್ಶನ್ ಎಸ್., ಎಂ.ಜಿ. ಚಂದ್ರಕಾಂತ್, ಎಸ್. ನರಹರಿ ರಾವ್, ಕೆ.ಎಸ್. ಶ್ರೀಧರ ಹಾಗೂ ಮಾಧವರಾವ್ ಕೆ. ಹೆಬ್ಬಾರ್ ಅವರು ಆಯ್ಕೆಯಾಗಿದ್ದಾರೆ.







1. ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನ ಪಬ್‌ವೊಂದರಲ್ಲಿ ಹೊಸ ವರ್ಷದ ಪ್ರಯುಕ್ತ ಭಾನುವಾರ ರಾತ್ರಿ ಯುವಕ–ಯುವತಿಯರು ಕುಣಿದು ಕುಪ್ಪಳಿಸಿದರು 2. ನೃತ್ಯ ಮಾಡಿದ ಯುವ ಸಮುದಾಯ 3. ಕೋರಮಂಗಲದಲ್ಲಿ ಜನರು ಸಂಭ್ರಮದಿಂದ ಹೊಸ ವರ್ಷ ಸ್ವಾಗತಿಸಿದರು —ಪ್ರಜಾವಾಣಿ ಚಿತ್ರಗಳು: ರಂಜು. ಪಿ/ ಪುಷ್ಕರ್ ವಿ

2024ಕ್ಕೆ ಅದ್ಧೂರಿ ಸ್ವಾಗತ: ಹರ್ಷೋದ್ಗಾರದ ಜೊತೆಗೆ ಕುಣಿದು ಕುಪ್ಪಳಿಸಿದ ಯುವಕ– ಯುವತಿಯರು

ಹೊಸ ವರ್ಷಾಚರಣೆ: ರಂಗೇರಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರ್ಷೋದ್ಗಾರ, ಪರಸ್ಪರ ಶುಭಾಶಯ ವಿನಿಮಯ, ಪಟಾಕಿಗಳ ಚಿತ್ತಾರಗಳಿಂದ ಕಂಗೊಳಿಸಿದ ಸಿಲಿಕಾನ್ ಸಿಟಿ. ರಸ್ತೆಗಳು, ಹೋಟೆಲ್, ಪಬ್, ಬಾರ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ನೆಚ್ಚಿನ ಹಾಡುಗಳಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದ ಯುವಕ–ಯುವತಿಯರು. ಕೇಕೆ, ಶಿಳ್ಳೆ ಹಾಕುವ ಮೂಲಕ ಮೊಳಗಿದ 'ಹ್ಯಾಪಿ ನ್ಯೂ ಇಯರ್' ಘೋಷಣೆ.

ಇದು ಹೊಸ ವರ್ಷಾಚರಣೆಯ ವೇಳೆ ನಗರದಲ್ಲಿ ಭಾನುವಾರ ಕಂಡುಬಂದ ದೃಶ್ಯಾವಳಿಗಳು. 2023ಕ್ಕೆ ವಿದಾಯ ಹೇಳಿ, 2024 ಅನ್ನು ನವೋಲ್ಲಾಸದಿಂದ ಜನರು ಮಧ್ಯರಾತ್ರಿ ಸ್ವಾಗತಿಸಿದರು.

ನಗರದಲ್ಲಿ ಭಾನುವಾರ ಮಧ್ಯರಾತ್ರಿ 1 ಗಂಟೆ ವರೆಗೆ ಹೊಸ ವರ್ಷಾಚರಣೆಗೆ ಪೊಲೀಸ್ ಇಲಾಖೆ ಅವಕಾಶ ಕಲ್ಪಿಸಿತ್ತು. ಹಲವೆಡೆ ಅವಧಿಗೂ ಮೀರಿ ಆಚರಣೆ ನಡೆಯಿತು. ರಸ್ತೆಗಳು ರಂಗು ಪಡೆದು-ಕೊಂಡಿದ್ದವು. ಒಮ್ಮೆಲೇ ಪ್ರವಾಹದಂತೆ ಜನರು ಬಂದರು. 10 ಗಂಟೆಯ ನಂತರ ಎಂ.ಜಿ ರಸ್ತೆಯತ್ತ ಬರುವ ಜನರ ಸಂಖ್ಯೆ ಹೆಚ್ಚಾಗಿತ್ತು. ಸ್ಥಳದಲ್ಲಿದ್ದ ಪೊಲೀಸರು ದಟ್ಟಣೆ ನಿಯಂತ್ರಣಕ್ಕೆ ಹರಸಾಹಸ ಪಟ್ಟರು. ರಸ್ತೆಗಳಲ್ಲಿ ಗುಂಪು ಗುಂಪಾಗಿ ಕೇಕೆ ಹಾಕುತ್ತಾ ಸಂಚರಿಸುತ್ತಿದ್ದರು.

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆ, ಬ್ರಿಗೇಡ್ ರಸ್ತೆ, ಕೋರಮಂಗಲ, ಇಂದಿರಾ ನಗರದ 100 ಅಡಿ ರಸ್ತೆಯಲ್ಲಿ ಸಂಭ್ರಮ ಮೇರೆ ಮೀರಿತ್ತು. ಅಂಗಡಿ, ಹೋಟೆಲ್‌ಗಳ ಎದುರು ಅಲಂಕಾರಿಕ ವಿದ್ಯುತ್ ದೀಪಗಳು ಕಣ್ಣುಕೋರೈಸು-ತ್ತಿದ್ದವು. ಝಗಮಗಿಸುವ ದೀಪಗಳ ಬೆಳಕಿನಲ್ಲಿ ಅಬ್ಬರದ ಸಂಗೀತಕ್ಕೆ ಪಬ್, ಕ್ಲಬ್‌ಗಳಲ್ಲಿ ಯುವಕ–ಯುವತಿಯರು ಕೈಕೈ ಹಿಡಿದು ಹೆಜ್ಜೆ ಹಾಕಿದರು. ಕೆಲವು ಭಾಗದ ಪಬ್‌ಗಳಲ್ಲಿ ಸಂಜೆಯಿಂದಲೇ ಪಾರ್ಟಿಗಳು ರಂಗೇರಿದ್ದವು.

> ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಕೇಂದ್ರ ವಿಭಾಗದಲ್ಲಿ ನಾಲ್ವರು ಡಿಸಿಪಿ ಹಾಗೂ 3,000 ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು.
>
> **ಶೇಖರ್, ಡಿಸಿಪಿ,** ಕೇಂದ್ರ ವಿಭಾಗ

ಎಂ.ಜಿ. ರಸ್ತೆಯಲ್ಲಿ ನಿರೀಕ್ಷೆಗೂ ಮೀರಿ ಜನರು ಸೇರಿದ್ದರು. ರಾತ್ರಿ 12 ಗಂಟೆ ಆಗುತ್ತಿದ್ದಂತೆಯೇ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ರಸ್ತೆಗೆ ಬಂದರು. ಪ್ರಮುಖ ರಸ್ತೆಗಳಲ್ಲಿ ನಡೆದ ಹೊಸ ವರ್ಷಾಚರಣೆ ರಂಗು ರಂಗಾಗಿತ್ತು. ಫ್ಯಾಷನ್ ಉಡುಗೆಗಳನ್ನು ತೊಟ್ಟ ಯುವಕ–ಯುವತಿಯರ ಓಡಾಟ ನೆರೆದಿದ್ದವರ ಗಮನ ಸೆಳೆಯಿತು. ನಗರ, ಹೊರ ಜಿಲ್ಲೆ, ರಾಜ್ಯ ಹಾಗೂ ಹೊರ ದೇಶಗಳಿಂದಲೂ ಬಂದಿದ್ದ ಜನ, ತಮ್ಮ ಅಭಿರುಚಿಗೆ ತಕ್ಕಂತೆ ಹೊಸ ವರ್ಷಾಚರಣೆ ಮಾಡಿದರು.

ಹೊಸ ವರ್ಷಕ್ಕೆ ಮದ್ಯ ಮತ್ತಷ್ಟು ರಂಗು ತುಂಬಿತ್ತು. ಪಬ್‌ಗಳಲ್ಲಿ ಮದ್ಯ ಸೇವಿಸಿದವರು ರಸ್ತೆಗಳಲ್ಲಿ ಕೇಕೆ ಹಾಕಿ ನೃತ್ಯ ಮಾಡಿದರು. ಬಳಲಿದವರಿಗೆ ಸುರಕ್ಷಾ ದ್ವೀಪದಲ್ಲಿ ಉಪಚರಿಸಲಾಯಿತು.

ಪಬ್‌ಗಳಲ್ಲಿ ಭರ್ಜರಿ ವ್ಯಾಪಾರ: ಪಬ್‌ಗಳಲ್ಲಿ ಭರ್ಜರಿ ವ್ಯಾಪಾರ ನಡೆಯಿತು. ಬೇಕರಿಗಳಲ್ಲಿ ವಿಭಿನ್ನವಾದ ಕೇಕ್ ತಯಾರಿಸಲಾಗಿತ್ತು. ಬೆಳಿಗ್ಗೆಯಿಂದಲೂ ಬೇಕರಿಗಳ ಮುಂದೆ ಜನದಟ್ಟಣೆ ಕಂಡುಬಂತು. ಹೊಸ ವಿನ್ಯಾಸದ ಕೇಕ್‌ಗಳನ್ನು ಕತ್ತರಿಸಿ ಜನರು ಸಂಭ್ರಮಿಸಿದರು.

ಅಪಾರ್ಟ್‌ಮೆಂಟ್‌ನಲ್ಲೂ ಆಚರಣೆ: ಹೊಸ ವರ್ಷ ಸ್ವಾಗತಿಸಲು ಅಪಾರ್ಟ್‌ಮೆಂಟ್‌ಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿದ್ದವು. ಅಪಾರ್ಟ್‌ಮೆಂಟ್ ಸಂಘದವರೂ ಪಾರ್ಟಿಗಳನ್ನು ಆಯೋಜಿಸಿದ್ದರು. ಹಾಡು, ನೃತ್ಯ ಸಂಗೀತ ಕಾರ್ಯಕ್ರಮಗಳು ನಡೆದವು.

ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಬಡಾವಣೆ, ಅಶೋಕ ನಗರ, ಮತ್ತಿಕೆರೆ, ಕೆಂಗೇರಿ, ಬಸವನಗುಡಿ, ಜಯನಗರ, ಜೆಪಿ ನಗರ, ಪೀಣ್ಯ, ಮಲ್ಲೇಶ್ವರ, ಶೇಷಾದ್ರಿಪುರ, ದೀಪಾಂಜಲಿ ನಗರ, ಸುಬ್ರಹ್ಮಣ್ಯ ನಗರ, ಯಶವಂತಪುರ, ಜಾಲಹಳ್ಳಿ, ದಾಸರಹಳ್ಳಿ, ಎಚ್‌ಎಸ್‌ಆರ್ ಲೇಔಟ್, ಇಂದಿರಾನಗರ, ದೊಮ್ಮಲೂರು ಸೇರಿ ನಗರದ ಎಲ್ಲೆಡೆ ಹೊಸವರ್ಷವನ್ನು ದ್ದೂರಿಯಿಂದ ಸ್ವಾಗತಿಸಲಾಯಿತು.

ರೆಸಾರ್ಟ್‌ನತ್ತ ಜನರು: ಈ ವರ್ಷ ರೆಸಾರ್ಟ್‌ಗಳು ಜನರಿಂದ ಭರ್ತಿಯಾಗಿದ್ದವು. ರೆಸಾರ್ಟ್‌ನ ಹೊರ ಆವರಣದಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಗರದ ಕೆಲವರು ಮಡಿಕೇರಿ, ಮಂಗಳೂರು, ಉಡುಪಿ, ಸಕಲೇಶಪುರ, ಮೂಡಿಗೆರೆ, ಶಿವಮೊಗ್ಗ, ಸಾಗರದತ್ತ ಹೊಸ ವರ್ಷಾಚರಣೆಗೆ ತೆರಳಿದ್ದರು.

ಜೈ ಶ್ರೀರಾಮ್ ಘೋಷಣೆ

ಹೊಸ ವರ್ಷಾಚರಣೆ ವೇಳೆ ಗುಂಪು ಗುಂಪಾಗಿ ಬಂದ ಯುವಕ–ಯುವತಿಯರು ಜೈ ಶ್ರೀರಾಮ್ ಹಾಗೂ ಜೈ ಮೋದಿ ಎಂದು ಘೋಷಣೆ ಕೂಗಿದರು. ಆಗ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಲಘು ಲಾಠಿ ಪ್ರಹಾರ ಮಾಡಿ ಗುಂಪು ಚದುರಿಸಿದರು. 12 ಗಂಟೆಯ ಬಳಿಕ ಯುವಕ–ಯುವತಿಯರ ಘೋಷಣೆಗಳು ಜೋರಾಗಿ ಕೇಳಿಬಂದವು.

ಸಂಭ್ರಮ...ಪರದಾಟ

- ಗಂಟೆ 12 ಆಗುತ್ತಿದ್ದಂತೆ ನಗರದ ಹಲವೆಡೆ ಪಟಾಕಿ ಸಿಡಿಸಿ 'ಹ್ಯಾಪಿ ನ್ಯೂ ಇಯರ್' ಎಂದು ಹರ್ಷೋದ್ಗಾರ ಮಾಡಿದ ಜನರು.
- ಚರ್ಚ್ ಸ್ಟ್ರೀಟ್‌ನಲ್ಲಿ ಜನಸ್ತೋಮ ನೆರೆದಿದ್ದರಿಂದ ಗೊಂದಲ ಉಂಟಾಗಿತ್ತು. ಜನರು ಮುಂದಕ್ಕೆ ಸಾಗಲು ಪರದಾಡಿದರು. ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು.
- ಕೋರಮಂಗಲ ಪಬ್‌ನಲ್ಲಿ ಕನ್ನಡ ಹಾಡು ಹಾಕಿಲ್ಲ ಎಂದು ಯುವಕನೊಬ್ಬ ಗಲಾಟೆ ನಡೆಸಿದ. ಆತನನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.



ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಭಾನುವಾರ ರಾತ್ರಿ ಭದ್ರತೆ ಪರಿಶೀಲಿಸಿದ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ.

ಎಲ್ಲೆಡೆ ಪೊಲೀಸ್ ಕಾವಲು

ಪ್ರಮುಖ ರಸ್ತೆಗಳಲ್ಲಿ 10 ಗಂಟೆ ಬಳಿಕ ವಾಹನ ಸಂಚಾರ ನಿರ್ಬಂಧಿಸಿ ಸಂಭ್ರಮಾಚರಣೆಗೆ ಅವಕಾಶ ಕಲ್ಪಿಸಲಾಗಿತ್ತು. ಎಂ.ಜಿ ರಸ್ತೆ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ 3 ಸಾವಿರದಷ್ಟು ಪೊಲೀಸರನ್ನು ಭದ್ರತೆಗೆ ನಿಯೋಜನೆ ಮಾಡಲಾಗಿತ್ತು.

ಸೂಕ್ಷ್ಮ ಪ್ರದೇಶದಲ್ಲಿ ಭಾನುವಾರ ಸಂಜೆ ಬಾಂಬ್ ತಪಾಸಣಾ ದಳ ಹಾಗೂ ಶ್ವಾನ ದಳದಿಂದ ತಪಾಸಣೆ ನಡೆಸಲಾಗಿತ್ತು. ಪಾನಮತ್ತ ಚಾಲಕರ ಪತ್ತೆಗೆ 48 ವಿಶೇಷ ತಂಡ ರಚಿಸಲಾಗಿತ್ತು. ಅಲ್ಲಲ್ಲಿ ಚಾಲಕರನ್ನು ತಪಾಸಣೆಗೆ ಒಳಪಡಿಸಲಾಯಿತು. ಬೆಸ್ಕಾಂ ಸಿಬ್ಬಂದಿ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಅಧಿಕಾರಿಗಳೂ ಪೊಲೀಸರ ಜೊತೆಗೆ ಸಾಥ್ ನೀಡಿದ್ದರು. ಸ್ಥಳದಲ್ಲಿ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು.

ಭದ್ರತೆಗೆ ಇಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರು, 15 ಮಂದಿ ಡಿಸಿಪಿಗಳು, 45 ಎಸಿಪಿಗಳು, 160 ಇನ್‌ಸ್ಪೆಕ್ಟರ್‌ಗಳು, 600 ಸಬ್ ಇನ್‌ಸ್ಪೆಕ್ಟರ್‌ಗಳು, 600 ಎಎಸ್‌ಐ, 1,800 ಹೆಡ್ ಕಾನ್‌ಸ್ಟೆಬಲ್, 5,200 ಕಾನ್‌ಸ್ಟೆಬಲ್‌ಗಳನ್ನು ಬಳಕೆ ಮಾಡಿಕೊಳ್ಳಲಾಗಿತ್ತು. ರಾತ್ರಿ 11ರಿಂದ ಪ್ರಮುಖ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಶರ್ಟ್ ಹರಿದು ಯುವಕನಿಗೆ ಥಳಿತ

ಬ್ರಿಗೇಡ್ ರಸ್ತೆಯಲ್ಲಿ ಯುವಕನ ಮೇಲೆ ಹಲ್ಲೆ ನಡೆಸಿದ ಘಟನೆ ನಡೆದಿದೆ.

ರಾತ್ರಿ 9 ಗಂಟೆ ಸುಮಾರಿಗೆ ಪ್ರೇಮಿಗಳು ತೆರಳುತ್ತಿದ್ದರು. ಮದ್ಯದ ಅಮಲಿನಲ್ಲಿದ್ದ ಯುವಕನೊಬ್ಬ ಯುವತಿ ಮೈಮುಟ್ಟಿದ ಎನ್ನಲಾಗಿದೆ.

ಇದರಿಂದ ಆಕ್ರೋಶಗೊಂಡ ಪ್ರಿಯತಮ, ಪ್ರೇಯಸಿ ಮೈಮುಟ್ಟಿದ ಯುವಕನಿಗೆ ಥಳಿಸಿದ್ದಾನೆ. ಭದ್ರತೆಗೆ ನಿಯೋಜಿಸಿದ್ದ ಪೊಲೀಸರು, ಅಸಭ್ಯವಾಗಿ ವರ್ತಿಸಿದ ಯುವಕನನ್ನು ವಶಕ್ಕೆ ಪಡೆದುಕೊಂಡರು. ಜನದಟ್ಟಣೆಯ ಕೆಲವು ಪ್ರದೇಶದಲ್ಲಿ ಗುಂಪು ಗುಂಪಾಗಿ ಬಂದಿದ್ದ ಯುವಕರು ಯುವತಿಯರನ್ನು ರೇಗಿಸುತ್ತಿದ್ದ ದೃಶ್ಯಗಳು ಕಂಡುಬಂದವು.

ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆಯಲ್ಲಿ ಮದ್ಯದ ಅಮಲಿನಲ್ಲಿ ಯುವಕನನ್ನು ಅಡ್ಡಗಟ್ಟಿ ಶರ್ಟ್ ಅನ್ನು ಹರಿದು ಹಲ್ಲೆ ನಡೆಸಲಾಗಿದೆ. ಹಲ್ಲೆ ನಡೆಸಿದ ಗುಂಪಿನಲ್ಲಿದ್ದವರು ಸಹ ಮದ್ಯ ಸೇವಿಸಿ ತೂರಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ರಾತ್ರಿ 1 ಗಂಟೆ ನಂತರ ಏಕಕಾಲದಲ್ಲಿ ಜನರು ಅಪಾರ ಸಂಖ್ಯೆಯಲ್ಲಿ ವಾಪಸ್ ಆಗಲು ಮುಂದಾದರು. ಆಗ ನೂಕುನುಗ್ಗಲು ಉಂಟಾಯಿತು. ಅಲ್ಲಲ್ಲಿ ತಳ್ಳಾಟ ನಡೆಯಿತು. ಪೊಲೀಸರು ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದ ದೃಶ್ಯ ಕಂಡುಬಂತು.

ಕಿಕ್ಕಿರಿದು ತುಂಬಿದ ಮೆಟ್ರೊ

ಹೊಸ ವರ್ಷಾಚರಣೆಯ ಸಂಭ್ರಮಕ್ಕಾಗಿ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಿಗೆ ಜನರು ಭಾನುವಾರ ಮಧ್ಯಾಹ್ನದಿಂದಲೇ ಬರತೊಡಗಿದ್ದ-ರಿಂದ 'ನಮ್ಮ ಮೆಟ್ರೊ' ಪ್ರಯಾಣಿಕರಿಂದ ತುಂಬಿ ಹೋಗಿತ್ತು. ಸಂಜೆಯಾಗುತ್ತಿದ್ದಂತೆ ನಿಂತುಕೊಳ್ಳುವುದಕ್ಕೂ ಜಾಗ ಇಲ್ಲದಷ್ಟು ಜನರ ಪ್ರವಾಹ ಹರಿದು ಬಂತು. ಪ್ರತಿ ನಾಲ್ಕು ನಿಮಿಷಕ್ಕೊಂದು ರೈಲಿನಂತೆ ಸಂಚರಿಸಿದವು.

ರಾತ್ರಿ 11 ಗಂಟೆಯವರೆಗೂ ಜನರು ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣಕ್ಕೆ ಬಂದು ಇಳಿಯುತ್ತಿದ್ದರು. ಇದರಲ್ಲಿ ಯುವಜನರ ಪ್ರಮಾಣವೇ ಹೆಚ್ಚಿತ್ತು. 11 ಗಂಟೆಯಾಗುತ್ತಿದ್ದಂತೆ ಮೆಟ್ರೊ ರೈಲು ಎಂ.ಜಿ. ರೋಡ್ ನಿಲ್ದಾಣದಲ್ಲಿ ನಿಲುಗಡೆ ನೀಡುವುದನ್ನು ನಿಲ್ಲಿಸಲಾಯಿತು. ಬಳಿಕ ಬರುವವರು ಟ್ರಿನಿಟಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಇಳಿದು ಆಗಮಿಸಿದರು.

ರಾತ್ರಿ 12 ಗಂಟೆಗೆ ಹೊಸ ವರ್ಷವನ್ನು ಬರಮಾಡಿಕೊಂಡ ಜನರು ವಾಪಸಾಗಲು ಮೆಟ್ರೊ ಹಿಡಿಯಲು ಮತ್ತೆ ಟ್ರಿನಿಟಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳ ಕಡೆಗೆ ಸಾಗಿದರು.

ರಾತ್ರಿ 2 ಗಂಟೆಯವರೆಗೆ ಮೆಟ್ರೊ ಸೇವೆಯನ್ನು ವಿಸ್ತರಿಸಲಾಗಿತ್ತು. ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸಿದವು. ಎಲ್ಲ ನಾಲ್ಕು ಟರ್ಮಿನಲ್‌ಗಳಿಂದ ರಾತ್ರಿ 1.30ಕ್ಕೆ ಕೊನೆಯ ಮೆಟ್ರೊ ರೈಲುಗಳು ಹೊರಟವು. ನಾಡಪ್ರಭು ಕೆಂಪೇಗೌಡ ಮೆಜೆಸ್ಟಿಕ್ ನಿಲ್ದಾಣದಿಂದ ನಾಲ್ಕು ಟರ್ಮಿನಲ್‌ಗಳಿಗೆ 2.15ಕ್ಕೆ ಕೊನೇ ಮೆಟ್ರೊಗಳು ಸಂಚರಿಸಿದವು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್‌ನಿಂದ ಕವಯಿತ್ರಿ ಜ. ನಾ. ತೇಜಶ್ರೀ ಅವರಿಗೆ 'ಕಾವ್ಯಾನಂದ ಪುರಸ್ಕಾರ' ಪ್ರದಾನ ಮಾಡಲಾಯಿತು. ಟ್ರಸ್ಟ್ ಅಧ್ಯಕ್ಷೆ ವಿಜಯ ನಂದೀಶ್ವರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಭಾರತಿ ಮೃತ್ಯುಂಜಯ, ರೇಣುಕಾಚಾರ್ಯ ಕಾಲೇಜಿನ ಪ್ರಾಂಶುಪಾಲೆ ಪ್ರೇಮ ಸಿದ್ದರಾಜು, ವಿಮರ್ಶಕ ಬಸವರಾಜ ಕಲ್ಗುಡಿ, ಟ್ರಸ್ಟಿ ಪ್ರಸನ್ನಕುಮಾರ್ ಪುರಾಣಿಕ ಉಪಸ್ಥಿತರಿದ್ದರು.

ವರುಣ: ಜೈನ ಮೂರ್ತಿಗಳು ಪತ್ತೆ

ಮೈಸೂರು: ತಾಲ್ಲೂಕಿನ ವರುಣ ಗ್ರಾಮದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ವೇಳೆ ಗಂಗರು– ಹೊಯ್ಸಳರ ಕಾಲದ ಮೂರು ಜೈನ ವಿಗ್ರಹಗಳು ಪತ್ತೆಯಾಗಿದ್ದು, ಅವನ್ನು ವೆಲ್ಲಿಂಗ್ಟನ್ ಬಂಗಲೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ.

'ಜನರ ಮಧ್ಯೆ ದ್ವೇಷ ಬಿತ್ತುವ ಕೆಲಸ'

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರ ನಡುವೆ ದ್ವೇಷ ಹಾಗೂ ಅಸೂಯೆ ಬಿತ್ತುವ ಕೆಲಸಗಳು ಹೆಚ್ಚುತ್ತಿವೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಕೊಡಮಾಡುವ 'ವರ್ಷದ ವ್ಯಕ್ತಿ', 'ವಿಶೇಷ ಪ್ರಶಸ್ತಿ' ಹಾಗೂ 'ವಾರ್ಷಿಕ ಪ್ರಶಸ್ತಿ'ಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.


'ಸಂವಿಧಾನದ ಆಶಯದಂತೆ ಜನರ ನಡುವೆ ಪ್ರೀತಿ, ವಿಶ್ವಾಸದ ಸೇತುವೆ ನಿರ್ಮಿಸುವ ಕೆಲಸ ಆಗಬೇಕಿದೆ. ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸುವ ಕೆಲಸವನ್ನೂ ಮಾಧ್ಯಮಗಳೂ ಮಾಡಬೇಕು' ಎಂದು ಸಲಹೆ ನೀಡಿದರು.

'ಮಾಧ್ಯಮಗಳು ಜನಹಿತವಾಗಿ ಕೆಲಸ ಮಾಡಬೇಕು. ಸರ್ಕಾರದ ಸೌಲಭ್ಯಗಳು ತಲುಪಬೇಕಿದ್ದರೆ ಸಮಾಜ ಸಹ ಜಾಗೃತವಾಗಿರಬೇಕು. ಕ್ರಿಯಾಶೀಲ ನ್ಯಾಯಾಂಗ ವ್ಯವಸ್ಥೆಯ ಅಗತ್ಯವೂ ಇದೆ' ಎಂದರು.

'ನ್ಯಾಯಾಂಗದ ಕಾವಲುಗಾರ ಯಾರು ಎಂಬ ಪ್ರಶ್ನೆಯನ್ನು ಹಲವರು ಎತ್ತುತ್ತಿದ್ದಾರೆ. ನ್ಯಾಯಾಧೀಶರು ತೆಗೆದುಕೊಂಡ ಪ್ರಮಾಣವಚನವೇ ಧರ್ಮ ಆಗಬೇಕು. ಅವರ ಆತ್ಮಸಾಕ್ಷಿಯೇ ಕಾವಲುಗಾರ ಆಗಬೇಕು. ಆಗ ಒಳ್ಳೆಯ ತೀರ್ಪುಗಳು ಬಂದು ದೇಶಕ್ಕೂ ಒಳಿತಾಗಲಿದೆ' ಎಂದು ಆಶಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 'ಮಾಧ್ಯಮಗಳು ಅವಕಾಶ ವಂಚಿತರ ಪರವಾಗಿ ಕೆಲಸ ಮಾಡಬೇಕು. ಧ್ವನಿ ಇಲ್ಲದವರ ಪರವಾಗಿ ಧ್ವನಿಯೆತ್ತಿ ಬೆಂಬಲಿಸುವುದು, ವಸ್ತುನಿಷ್ಠವಾಗಿ ವರದಿ ಮಾಡುವುದೇ ಪತ್ರಿಕಾ ವೃತ್ತಿಯ ಮೂಲ ಉದ್ದೇಶ ಆಗಬೇಕು' ಎಂದರು.

'ಸರ್ಕಾರ ತಪ್ಪು ಮಾಡಿದರೂ ಅದನ್ನು ಹೇಳುವ ಧೈರ್ಯ ಪತ್ರಕರ್ತರಿಗೆ ಇರಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಅಭಿವೃದ್ಧಿಯ ಚರ್ಚೆ, ಕನಸಿತ್ತು. ಈಗ ಮಾಧ್ಯಮಗಳು ಉದ್ಯಮಿಗಳ ಕೈಗೆ ಸಿಕ್ಕಿಕೊಂಡಿವೆ. ಉದ್ಯಮಿಗಳಿಗೆ ಸಮಾಜಮುಖಿಯಾದ ಯಾವ ಕಾಳಜಿಗಳೂ ಇರುವುದಿಲ್ಲ. ಈ ಬಗ್ಗೆ ಪತ್ರಕರ್ತ ಸಮೂಹ ಎಚ್ಚರ ವಹಿಸಬೇಕು' ಎಂದರು.



ನಗರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಕೊಡಮಾಡುವ 'ವರ್ಷದ ವ್ಯಕ್ತಿ ಪ್ರಶಸ್ತಿ'ಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪ್ರದಾನ ಮಾಡಲಾಯಿತು

ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಕೊಡಮಾಡುವ 'ವರ್ಷದ ವ್ಯಕ್ತಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಹೊಗಳುವವರ ಮೇಲೆ ನನಗೆ ನಂಬಿಕೆ ಇಲ್ಲ. ಮಾಧ್ಯಮಗಳು ರಾಜಕಾರಣಿಗಳನ್ನು ಎಚ್ಚರಿಸುವ ಕೆಲಸ ಮಾಡಬೇಕು' ಎಂದು ಹೇಳಿದರು.

'ನನ್ನನ್ನು 'ಬಂಡೆ', 'ಟ್ರಬಲ್ ಶೂಟರ್' ಎಂದು ಮಾಧ್ಯಮಗಳೇ ಕರೆದವು. 43 ವರ್ಷಗಳ ರಾಜಕೀಯ ಜೀವನದಲ್ಲಿ ಎಂದೂ ಕೂಡ ಸನ್ಮಾನ ಒಪ್ಪಿ, ಮಾಡಿಸಿಕೊಂಡಿರಲಿಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳನ್ನು ಬಿಟ್ಟು ನಮ್ಮ ಬದುಕಿಲ್ಲ. ಹೀಗಾಗಿ ನಾನು ಒಪ್ಪಿ ಈ ಗೌರವ ಸ್ವೀಕರಿಸಿದ್ದೇನೆ. ನೀವು ಒಳ್ಳೆಯದಾದರೂ ಹೇಳಿ, ಕೆಟ್ಟದಾದರೂ ಹೇಳಿ. ಸಂಸಾರದಂತೆ ನಿಮ್ಮ ಜತೆ ಬದುಕಬೇಕು' ಎಂದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, 'ದೇವನಹಳ್ಳಿ ಬಳಿ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಮಂಜೂರಾಗಿದೆ. ಅಲ್ಲದೇ ಎಲ್ಲ ಕ್ರೀಡಾಪಟುಗಳಿಗೂ ಜೀವ ವಿಮೆ ಜಾರಿಗೆ ತರಬೇಕು. ಕ್ರೀಡಾ ಗ್ರಾಮ ನಿರ್ಮಿಸಬೇಕು' ಎಂದು ಕೋರಿದರು.

ವಿಶೇಷ ಪ್ರಶಸ್ತಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಕಾರ್ಮಿಕ ಸಚಿವ ಸಂತೋಷ ಎಸ್. ಲಾಡ್, ಕೆ.ಗೋವಿಂದರಾಜು ಅವರಿಗೆ ಪ್ರದಾನ ಮಾಡಲಾಯಿತು. ಇದೇ ವೇಳೆ 'ಪ್ರಜಾವಾಣಿ'ಯ ಡೆಪ್ಯುಟಿ ಎಡಿಟರ್ ಎಂ.ನಾಗರಾಜ ಸೇರಿದಂತೆ 29 ಮಂದಿ ಪತ್ರಕರ್ತರಿಗೆ ಪ್ರೆಸ್‌ಕ್ಲಬ್‌ನ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಡಿಕೆಶಿ ಹೊಗಳಿದ ಮುಖ್ಯಮಂತ್ರಿ

'ಡಿ.ಕೆ.ಶಿವಕುಮಾರ್ ಅವರು ಕ್ರಿಯಾಶೀಲ ರಾಜಕಾರಣಿ; ಸಂಘಟನಾ ಚತುರ. ಸಂಘಟನೆಯಲ್ಲಿ ಅವರು ನನಗಿಂತ ಒಂದು ಹೆಜ್ಜೆ ಮುಂದಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಗಳಿದರು.

ನಾಳೆಯಿಂದ ಭಾರತ ಕಥಾಮಂಜರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರವ್ಯಾಸ ಮತ್ತು ಆತ ರಚಿಸಿದ ಕನ್ನಡದ ಮೇರುಕಾವ್ಯ 'ಕರ್ಣಾಟ ಭಾರತ ಕಥಾಮಂಜರಿ' ಕುರಿತು ನಗರದ ದೊಮ್ಮಲೂರಿನಲ್ಲಿ-ರುವ ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಜ. 2, 3 ಮತ್ತು 5ರಂದು ಸಂಜೆ 6.30ಕ್ಕೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ.

ನ್ಯೂಯಾರ್ಕ್‌ನ ಸ್ಟೋನಿ ಬ್ರೂಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್.ಎನ್. ಶ್ರೀಧರ್ ಹಾಗೂ ಕುಮಾರವ್ಯಾಸ ಭಾರತದ ಕುರಿತು ವಿಶೇಷ ಅಧ್ಯಯನ ನಡೆಸಿರುವ ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು ಅವರು ಈ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಹದಿನೈದನೇ ಶತಮಾನದ ಕನ್ನಡದ ಕ್ಲಾಸಿಕ್ ಕೃತಿ ಎನಿಸಿದ ಕುಮಾರವ್ಯಾಸ ಭಾರತವು ತನ್ನ ಅನನ್ಯತೆಯಿಂದ ಓದುಗರ ಮನವನ್ನು ಸೂರೆಗೊಂಡಿದೆ. ಸಾವಿರಾರು ಕನ್ನಡಿಗರ ಮನೆಯಲ್ಲಿ ನಿತ್ಯವೂ ಪಾರಾಯಣ ಮಾಡುತ್ತಿದ್ದ ಮಹಾಕಾವ್ಯವೂ ಇದಾಗಿದೆ. ಕುಮಾರವ್ಯಾಸ ಕವಿಯನ್ನು ಶೇಕ್ಸ್‌ಪಿಯರ್, ಕಾಳಿದಾಸ ಅವರಂತಹ ಮಹಾನ್ ಕವಿಗಳ ಜತೆಗೆ ಹೋಲಿಕೆ ಮಾಡಲಾಗುತ್ತದೆ. ಬಿಐಸಿಯಲ್ಲಿ ನಡೆಯಲಿರುವ ಉಪನ್ಯಾಸ ಸರಣಿಯಲ್ಲಿ ಶ್ರೀಧರ್ ಮತ್ತು ಹನೂರು ಅವರು, ಕುಮಾರವ್ಯಾಸ ಕವಿಯ ಮೇರು ವ್ಯಕ್ತಿತ್ವ, ಆತನ ಕಾಲಘಟ್ಟ, ಕವಿಯ ಕಾಣ್ಕೆ ಮತ್ತು ಮಹಾಭಾರತದ ಪಾತ್ರಪ್ರಪಂಚದ 'ಉದ್ಯಾನ'ದಲ್ಲಿ ಕೇಳುಗರನ್ನು ಸುತ್ತಾಡಿಸಲಿದ್ದಾರೆ.

ತನ್ನ ಜೀವಿತಾವಧಿಗಿಂತ ಮುಂಚೆ ಬಂದಿದ್ದ ಮಹಾಭಾರತದ ವಿವಿಧ ಕಾವ್ಯಗಳು, ಅದರಲ್ಲೂ ಪಂಪ ಕಾವ್ಯವು ತುಳಿದ ಹೆಜ್ಜೆ ಜಾಡಿನಿಂದ ಹೊರಬಂದ ಕುಮಾರವ್ಯಾಸ ಹೇಗೆ ಹೊಸ'ಮಾರ್ಗ'ವನ್ನೇ ರೂಪಿಸಿದ ಎಂಬುದನ್ನೂ ವಿವರಿಸಲಿದ್ದಾರೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ನಡೆಯುವ ಈ ಉಪನ್ಯಾಸವು ಮಹಾಭಾರತ ಕಥಾಜಗತ್ತಿನಲ್ಲಿ ಶ್ರೋತೃಗಳನ್ನು ವಿಹರಿಸುವಂತೆ ಮಾಡಲಿದೆ ಎಂದು ಬಿಐಸಿ ಪ್ರಕಟಣೆ ತಿಳಿಸಿದೆ.

ಕುಣಿಗಲ್: ರೌಡಿಶೀಟರ್ ಹತ್ಯೆ

ಕುಣಿಗಲ್: ತಾಲ್ಲೂಕಿನ ಹುಲಿಯೂರುದುರ್ಗ ಪೊಲೀಸ್ ಠಾಣೆ ವ್ಯಾಪ್ತಿಯ ಕಂಪಲಪುರದ ಬಳಿ ಶನಿವಾರ ರಾತ್ರಿ ರೌಡಿಶೀಟರ್ ಸುರೇಶ ಅಲಿಯಾಸ್ ಕ್ಯಾಪ್ಟನ್ ಸೂರಿ (45) ಹತ್ಯೆಯಾಗಿದೆ. ಈತ ಬೆಂಗಳೂರಿನ ಹನುಮಂತನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೊಲೆ ಮತ್ತು ಅಪಹರಣ ಕೃತ್ಯಗಳಲ್ಲಿ ಭಾಗಿಯಾಗಿದ್ದ.

₹2 ಕೋಟಿ ಮೌಲ್ಯದ 3 ಕೆ.ಜಿ ಚಿನ್ನ ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿ.25ರಿಂದ ಡಿ.29ರವರೆಗೆ ನಡೆಸಿದ ತಪಾಸಣೆಯಲ್ಲಿ, ಚಿನ್ನ ಕಳ್ಳಸಾಗಣೆಗೆ ಯತ್ನಿಸಿದ 16 ಮಂದಿ ಪ್ರಯಾಣಿಕರಿಂದ ಮೂರು ಕೆ.ಜಿಗೂ ಅಧಿಕ ಚಿನ್ನವನ್ನು ಬೆಂಗಳೂರು ಏರ್ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಕೌಲಾಲಂಪುರ, ಜೆಡ್ಡಾ, ಶಾರ್ಜಾ, ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರ ಸಾಕ್ಸ್, ಜೇಬಿನಲ್ಲಿ ಕರವಸ್ತ್ರ, ಒಳ ಉಡುಪಿನಲ್ಲಿ ತಂದಿದ್ದ 3ಕೆ.ಜಿ. 311 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ.

ಐದು ದಿನಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಕ್ಕ ಚಿನ್ನದ ಒಟ್ಟು ಮೌಲ್ಯ ₹2 ಕೋಟಿಗೂ ಅಧಿಕ. ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿದೆ.

ಲಾಲ್‌ಬಾಗ್‌ನಲ್ಲೊಂದು ವಿಶೇಷ ಜನಜಾಗೃತಿ ಕಾರ್ಯಕ್ರಮ

'ಕೃತಕ ಹೂವು ತ್ಯಜಿಸಿ, ನೈಸರ್ಗಿಕ ಹೂವು ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಹೂವುಗಳ ಬಳಕೆಯಿಂದ ಪರಿಸರದ ಮೇಲಾಗುವ ಪರಿಣಾಮ, ಪುಷ್ಪ ಕೃಷಿಕರಿಗೆ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಜನಜಾಗೃತಿ ಮೂಡಿಸಲು ಭಾನುವಾರ ಲಾಲ್‌ಬಾಗ್‌ನಲ್ಲಿ ವಿನೂತನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತೋಟಗಾರಿಕೆ ಇಲಾಖೆ, ಹೆಬ್ಬಾಳದ ಅಂತರರಾಷ್ಟ್ರೀಯ ಪುಷ್ಪ ಹರಾಜು ನಿಗಮ, ಜಿ.ಎಫ್.ಸಿ.ಐ. ಅಗ್ರಿ ಪ್ಲಾಸ್ಟ್, ರಾಜ್ಯದ ಹೂ ಬೆಳೆಗಾರರು ಹಾಗೂ ಖರೀದಾರರ ಸಹಯೋಗದಲ್ಲಿ ಲಾಲ್‌ಬಾಗ್‌ನ ಬೋನ್ಸಾಯ್ ಪಾರ್ಕ್‌ನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ರಾಜ್ಯದ ರೈತರು ಬೆಳೆದಿರುವ ವಿವಿಧ ತಳಿಗಳ ಹೂವಿನ ಬೆಳೆಗಳನ್ನು ಸಾಂಕೇತಿಕವಾಗಿ ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಲಾಗಿತ್ತು. ಮುಂಜಾನೆ ಲಾಲ್‌ಬಾಗ್‌ಗೆ ಬಂದ ನಡಿಗೆದಾರರಿಗೆ ಹೂ ಬೆಳೆಗಾರರ ಪರವಾಗಿ ಒಂದು ಗುಲಾಬಿ ಹೂವನ್ನು ಉಚಿತವಾಗಿ ನೀಡಿ, 'ನಿಮ್ಮ ಕಾರ್ಯಕ್ರಮಗಳಲ್ಲಿ ನೈಸರ್ಗಿಕ ಹೂವುಗಳನ್ನೇ ಬಳಸಿ ಹಾಗೂ ಕೃತಕ ಹೂಗಳನ್ನು ತ್ಯಜಿಸಿ' ಎಂದು ಮನವರಿಕೆ ಮಾಡಿಕೊಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, 'ಕೃತಕ ಹೂವುಗಳನ್ನು ಬಿಟ್ಟು ಹೆಚ್ಚಿನ ಪ್ರಮಾಣದಲ್ಲಿ ನೈಸರ್ಗಿಕ ಹೂವುಗಳನ್ನು ಬಳಸಬೇಕು. ಪ್ಲಾಸ್ಟಿಕ್ ಹಾಗೂ ಸಿಂಥೆಟಿಕ್ ಹೂವುಗಳ ಬಳಕೆಯಿಂದ ಪರಿಸರದ ಮೇಲೆ ಆಗುವ ದುಷ್ಪರಿಣಾಮ ಉಂಟಾಗುತ್ತದೆ' ಎಂದು ವಿವರಿಸಿದರು.



ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿ ಶಾಮಲಾ ಇಕ್ಬಾಲ್ ಮತ್ತು ಅಧಿಕಾರಿಗಳು ನೈಸರ್ಗಿಕ ಪುಷ್ಪಗಳ ಉತ್ತೇಜನ ಕಾರ್ಯಕ್ರಮದಲ್ಲಿ ಹೂವುಗಳ ಬಗ್ಗೆ ಮಾಹಿತಿ ಪಡೆದರು

'ಪ್ರತಿವರ್ಷ ಹಬ್ಬ, ಮದುವೆ ಹಾಗೂ ಇನ್ನಿತರೆ ಸಮಾರಂಭಗಳಲ್ಲಿ ಕೃತಕ ಹೂಗಳ ಬಳಕೆ ಹೆಚ್ಚಾಗುತ್ತಿದೆ. ಇದರಿಂದ ನೈಸರ್ಗಿಕ ಹೂವು ಗಳನ್ನು ಕೊಳ್ಳುವರಿಲ್ಲದಂತಾಗಿದೆ. ಇದೇ ರೀತಿಯ ಬಳಕೆ ಹೆಚ್ಚಾದಲ್ಲಿ ನೈಸರ್ಗಿಕ ಹೂವುಗಳ ಬಳಕೆ ಕಡಿಮೆಯಾಗುತ್ತದೆ. ಬೆಳೆಗಾರರು ಸಂಕಷ್ಟಕ್ಕೆ ಸಿಲುಕುತ್ತಾರೆ. ಹೊಸ ವರ್ಷದ ಈ ಶುಭ ಸಂದರ್ಭದಲ್ಲಿ ಜನರು ನೈಸರ್ಗಿಕ ಹೂವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲು ಮುಂದಾಗಬೇಕು' ಎಂದು ದಕ್ಷಿಣ ಭಾರತ ಹೂ ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿ ಶಾಮಲಾ ಇಕ್ಬಾಲ್, ಲಾಲ್‌ಬಾಗ್ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ ಕುಸುಮ ಹಾಗೂ ಐ ಫ್ಯಾಬ್ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥ್ ಮುನಿಯಪ್ಪ, ದಕ್ಷಿಣ ಭಾರತ ಹೂ ಬೆಳೆಗಾರರ ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್, ನಿರ್ದೇಶಕ ಶ್ರೀಕಾಂತ್ ಭಾಗವಹಿಸಿದ್ದರು.

ತೇಗದ ಮರ ಕಡಿದ ಪ್ರಕರಣ: ಡಿಸಿಎಫ್ ನೇತೃತ್ವದ ಅಧಿಕಾರಿಗಳ ತಂಡ ನಡೆಸಿದ ಪರಿಶೀಲನೆಯಿಂದ ಅಕ್ರಮ ಬಹಿರಂಗ

ಮನವಿಗಿಂತ ಹೆಚ್ಚು ಮರ ಕಡಿಯಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಕುಟ್ಟ ಗ್ರಾಮದ ಎಂ.ಎನ್.ರಮೇಶ್ ಅವರ ಜಮೀನಿನಲ್ಲಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ತೇಗದ ಮರಗಳನ್ನು ಕಡಿದ ಪ್ರಕರಣದಲ್ಲಷ್ಟೇ ಹಗರಣ ನಡೆದಿಲ್ಲ. ಈ ಬಗ್ಗೆ ತನಿಖೆ ನಡೆಸಿರುವ ಅರಣ್ಯ ಇಲಾಖೆಯ ನಾಲ್ವರು ಸದಸ್ಯರ ತಂಡ, ವಿಭಾಗದ ಮೂರು ವಲಯಗಳಲ್ಲಿ 14 ಭಾರಿ ಲೋಪಗಳಾಗಿರುವುದನ್ನು ಪತ್ತೆ ಹಚ್ಚಿದೆ. ಇಲಾಖೆಗೆ ವರದಿಯನ್ನು ಸಲ್ಲಿಸಿದೆ.

ವಿರಾಜಪೇಟೆ ವ್ಯಾಪ್ತಿಯಲ್ಲಿ ನೂರು ವರ್ಷದ ಹಳೆಯ ಮರಗಳು ಸೇರಿ 66 ತೇಗದ ಮರಗಳನ್ನು ಅಕ್ರಮವಾಗಿ ಕಡಿಯಲಾಗಿತ್ತು. ಇದು ಜ.20ರಂದು 'ಪ್ರಜಾವಾಣಿ' ಸಹೋದರ ಪತ್ರಿಕೆ 'ಡೆಕ್ಕನ್ ಹೆರಾಲ್ಡ್'ನಲ್ಲಿ ವರದಿಯಾಗಿತ್ತು. ಈ ಪ್ರಕರಣದಲ್ಲಿ, ಕೆಲವು ಅಧಿಕಾರಿಗಳ ಜೊತೆ ಭಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿದ್ದರಿಂದಾಗಿ, ಪ್ರಕರಣ ನಡೆದಾಗ ವಿರಾಜಪೇಟೆಯಲ್ಲಿ ಉಪ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ (ಡಿಸಿಎಫ್) ವೈ. ಚಕ್ರಪಾಣಿ ಅವರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿತ್ತು.

ಈ ಪ್ರಕರಣದ ತನಿಖೆಗಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ದಳದ ಮುಖ್ಯಸ್ಥ) ಕೆ.ಆರ್. ಸಿಂಗ್ ಅವರು, ಐಎಫ್ಎಸ್ ಅಧಿಕಾರಿ ಸೌರಭ್‌ಕುಮಾರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಿದ್ದರು. ವಿರಾಜಪೇಟೆ ಡಿಸಿಎಫ್ 2020ರ ಏಪ್ರಿಲ್‌ನಿಂದ 2023ರ ಏಪ್ರಿಲ್‌ವರೆಗೆ ಮರ ಕಡಿಯಲು ನೀಡಿದ್ದ ಆದೇಶಗಳ ಸಮಗ್ರ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಮುಖ್ಯಾಂಶಗಳು

- ವಿರಾಜಪೇಟೆ ವಿಭಾಗದಲ್ಲಿ ನಡೆದಿರುವ ಪ್ರಕರಣ
- ಸೌರಭ್‌ಕುಮಾರ್ ನೇತೃತ್ವದಲ್ಲಿ ಪರಿಶೀಲನೆ
- ಕಡಿಯಲಾದ ಮರಗಳ ಮೌಲ್ಯ ₹ 100 ಕೋಟಿಗೂ ಹೆಚ್ಚು



ಪ್ರತಿ ಫೈಲ್ ಅನ್ನೂ ಸಮಗ್ರವಾಗಿ ಪರಿಶೀಲಿಸಿ ದಸರಾಗೂ ಮುನ್ನವೇ ಎಪಿಸಿಸಿಎಫ್ ಅವರಿಗೆ ವರದಿ ಸಲ್ಲಿಸಲಾಗಿದೆ. ಹೆಚ್ಚಿನ ವಿವರ ನೀಡಲಾಗದು

ಸೌರಭ್‌ಕುಮಾರ್, ಡಿಸಿಎಫ್

71 ಕಡತ ಪರಿಶೀಲನೆ: ತಂಡವು, ತಿತಿಮತಿ, ವಿರಾಜಪೇಟೆ ಹಾಗೂ ಪೊನ್ನಂಪೇಟೆ ವಿಭಾಗದಲ್ಲಿ ನೀಡಲಾದ ಮರ ಕಡಿತಲೆ ಆದೇಶಗಳಿಗೆ ಸಂಬಂಧಿಸಿದ 71 ಕಡಗಳನ್ನು ಪರಿಶೀಲಿಸಿದ್ದು, ಆದೇಶ ನೀಡುವಲ್ಲಿ ಆಗಿರುವ ಲೋಪಗಳು ಮತ್ತು ನಿಯಮ ಉಲ್ಲಂಘನೆ ಆಗಿರುವುದನ್ನು ಪತ್ತೆ ಹಚ್ಚಿದೆ.

ವಿಭಾಗದಲ್ಲಿನ ಮರಗಳ ರಕ್ಷಣೆ ಆಯಾ ಡಿಸಿಎಫ್ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಅವರಿಗೆ ಅಧಿಕಾರದ ಬಲವೂ ಇರುತ್ತದೆ. ನಿಯಮದ ಪ್ರಕಾರ, ಸಾರ್ವಜನಿಕರು ತಮ್ಮ ಜಾಗ ಅಥವಾ ಜಮೀನಿನಲ್ಲಿ ಬೆಳೆದಿರುವ ಮರ ಕಡಿಯುವ ಮುನ್ನ ಡಿಸಿಎಫ್ ಬಳಿ ಅನುಮತಿ ಪಡೆಯಬೇಕಾಗುತ್ತದೆ. ಕರ್ನಾಟಕ ಅರಣ್ಯ ನಿಯಮದ ಪ್ರಕಾರ, ಗುತ್ತಿಗೆ ಪಡೆದ ಭೂಮಿಯಲ್ಲಿ ಬೆಳೆದ ಎಲ್ಲಾ ಮರಗಳನ್ನು ಮತ್ತು ಸಾಗುವಳಿಗೆ ನೀಡಿದ ಭೂಮಿಯಲ್ಲಿರುವ ಎಲ್ಲಾ ಮರಗಳನ್ನೂ ಸರ್ಕಾರಿ ಆಸ್ತಿ ಎಂದು ಘೋಷಿಸುತ್ತದೆ. ಆದರೆ, ಡಿಸಿಎಫ್ ನೀಡಿದ ಕನಿಷ್ಠ 9 ಆದೇಶಗಳಲ್ಲಿ ಅನುಮತಿಗಿಂತಲೂ ಹೆಚ್ಚಿನ ತೇಗ, ರೋಸ್‌ವುಡ್ ಮೊದಲಾದ ಮರಗಳನ್ನು ಕಡಿದಿರುವುದನ್ನು ಗುರುತಿಸಲಾಗಿದೆ.

ಉದಾಹರಣೆಗೆ, ತಿತಿಮತಿ ವಲಯದ ಗಂಗಮ್ಮ ಎನ್ನುವವರು 5 ರೋಸ್‌ವುಡ್ (ಬೀಟೆ), 8 ಇತರ ಮರಗಳನ್ನು ಕಡಿಯಲು ಅನುಮತಿ ಕೇಳಿದ್ದರು. ಆದರೆ, ಡಿಸಿಎಫ್ 55 ರೋಸ್‌ವುಡ್ ಹಾಗೂ 65 ಇತರ ಮರಗಳನ್ನು ಕಡಿಯಲು ಆದೇಶ ನೀಡಿದ್ದಾರೆ!

ಇನ್ನೊಂದು ಪ್ರಕರಣದಲ್ಲಿ, ಮನುಸೋಮಯ್ಯ ಅವರು 40 ತೇಗದ ಮರಗಳನ್ನು ಕಡಿಯಲು ಅನುಮತಿ ಕೇಳಿದ್ದರೆ, ಡಿಸಿಎಫ್ 55 ಮರಗಳನ್ನು ಕತ್ತರಿಸಲು ಆದೇಶಿಸಿರುವುದನ್ನು ಗುರುತಿಸಲಾಗಿದೆ.

ಅಚ್ಚರಿಯೆಂದರೆ, ಡಿಸಿಎಫ್ ಕಂದಾಯ ಇಲಾಖೆ ಆದೇಶ ಧಿಕ್ಕರಿಸಿರುವುದೂ ಕಂಡುಬಂದಿದೆ. ಆ 40 ತೇಗದ ಮರಗಳೂ ಮನುಸೋಮಯ್ಯ ಅವರಿಗೆ ಸೇರಿದ್ದಲ್ಲ ಎಂದು ಕಂದಾಯ ಇಲಾಖೆ ಗಮನಕ್ಕೆ ತಂದಿತ್ತು. ಆದರೆ, ಈ ವಿಷಯವನ್ನು ಡಿಸಿಎಫ್ ಅನುಮತಿ ಪತ್ರದಲ್ಲಿ ದಾಖಲಿಸದೇ ಮರೆಮಾಚಿದ್ದರು ಎಂಬ ಸಂಗತಿಯೂ ಹೊರಬಿದ್ದಿದೆ.

'ಅಧಿಕಾರವೇ ಇಲ್ಲದವರಿಗೂ'

ಎರಡು ಪ್ರಕರಣಗಳಲ್ಲಿ, ಸಾಗುವಳಿ ಪತ್ರವಿಲ್ಲದ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದ ಇಬ್ಬರು, ಅಲ್ಲಿದ್ದ ಮರಗಳನ್ನು ಕಡಿಯಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನೂ ಡಿಸಿಎಫ್ ಪುರಸ್ಕರಿಸಿರುವುದನ್ನು ಗಮನಿಸಲಾಗಿದೆ. ಅಧಿಕಾರವೇ ಇಲ್ಲದವರಿಗೂ ಅವಕಾಶ ಕೊಟ್ಟಿರುವುದು ಕಂಡುಬಂದಿದೆ.

ಕೆಲವು ಪ್ರಕರಣಗಳಲ್ಲಿ ಜಮೀನು ಅಥವಾ ಜಾಗ ಹಾಗೂ ಮರಗಳ ಮಾಲೀಕತ್ವವನ್ನು ಖಚಿತಪಡಿಸಿಕೊಳ್ಳಲು ಕಂದಾಯ ಇಲಾಖೆಯ ದಾಖಲೆಗಳನ್ನು ಪರಿಶೀಲಿಸದೇ ಮತ್ತು ಸಂಬಂಧಿಸಿದ ಅಧಿಕಾರಿಗಳ ಅಭಿಪ್ರಾಯವನ್ನೂ ಕೇಳದೇ ಮರಗಳನ್ನು ಕಡಿಯಲು ಆದೇಶ ನೀಡಿರುವುದನ್ನು ಗುರುತಿಸಲಾಗಿದೆ.

ಇತರ ಪ್ರಕರಣಗಳಲ್ಲಿ, ಕೆಳಹಂತದ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡಿರುವ ಬಗ್ಗೆ ದಾಖಲೆಗಳು ದೊರೆತಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಹೊಸದಾಗಿ ಸಲ್ಲಿಕೆಯಾದ ಅರ್ಜಿಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಅಭಿಪ್ರಾಯ ಪಡೆಯುವ ಬದಲಿಗೆ, 10 ವರ್ಷಗಳ ಹಿಂದಿನ ಅಭಿಪ್ರಾಯವನ್ನು ಪರಿಗಣಿಸುವ ಚಮತ್ಕಾರವೂ ನಡೆದಿದೆ!

ಈ ಬಗ್ಗೆ ಪ್ರತಿಕ್ರಿಯಿಸಿದ ಅಧಿಕಾರಿಯೊಬ್ಬರು, 'ಹೀಗೆ ಕಡಿಯಲಾದ ತೇಗ, ರೋಸ್‌ವುಡ್ ಹಾಗೂ ಇತರ ಮರಗಳ ಒಟ್ಟು ಮೌಲ್ಯ ₹ 100 ಕೋಟಿಯನ್ನೂ ಮೀರಿದ್ದಾಗಿದೆ ಎಂದು ಅಂದಾಜಿಸಲಾಗಿದೆ. ಹಲವು ದಾಖಲೆಗಳನ್ನು ಪರಿಶೀಲಿಸಿದಾಗ, ಎಷ್ಟು ಮರಗಳನ್ನು ಕಡಿಯಲಾಗಿದೆ ಎಂಬ ನಿಖರ ಮಾಹಿತಿಯೇ ಇಲ್ಲದಿರುವುದನ್ನೂ ಗುರುತಿಸಲಾಗಿದೆ. ಪ್ರಕರಣದಲ್ಲಿ ಇನ್ನೂ ಹೆಚ್ಚಿನ ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕಾದ ಅಗತ್ಯವಿದೆ' ಎನ್ನುತ್ತಾರೆ ಅವರು.

'ಆ ವರದಿಯನ್ನು ಪರಿಶೀಲಿಸಲಾಗುವುದು. ನಿಯಮ ಉಲ್ಲಂಘನೆ ಆಗಿರುವುದು ಕಂಡುಬಂದಿದ್ದರೆ ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಪ್ರತಿಕ್ರಿಯಿಸಿದರು. ನಿಯಮ ಉಲ್ಲಂಘನೆ ಆಗಿರುವ ಬಗ್ಗೆ ಚಕ್ರಪಾಣಿ ಪ್ರತಿಕ್ರಿಯಿಸಲಿಲ್ಲ.

ಕೋವಿಡ್: ಸಾವಿರ ತಲುಪಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಭಾನುವಾರ 229 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ ಒಂದು ಸಾವಿರಕ್ಕೆ ಏರಿಕೆಯಾಗಿದೆ.

24 ಗಂಟೆಗಳ ಅವಧಿಯಲ್ಲಿ 3,527 ಪರೀಕ್ಷೆಗಳನ್ನು ನಡೆಸಲಾಗಿದೆ. ಶೇ 6.49ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 943 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 22 ಮಂದಿ ತೀವ್ರ ನಿಗಾ ಘಟಕ ಹಾಗೂ 35 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 62 ಮಂದಿ ಚೇತರಿಸಿಕೊಂಡಿದ್ದಾರೆ.

22 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ 646 ಪರೀಕ್ಷೆಗಳನ್ನು ನಡೆಸಲಾಗಿದೆ. 42 ಹೊಸ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 517 ಕ್ಕೆ ಏರಿಕೆಯಾಗಿದೆ. ವಿಜಯಪುರ ಬಿಟ್ಟು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳಿವೆ.

ಡಿ.15 ರಿಂದ ಈವರೆಗೆ ರಾಜ್ಯದಲ್ಲಿ 247 ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. 60 ಮಾದರಿಗಳ ಫಲಿತಾಂಶ ಬಂದಿದ್ದು, 34 ಮಾದರಿಗಳಲ್ಲಿ ಜೆಎನ್.1, 18 ಮಾದರಿಗಳಲ್ಲಿ ಎಕ್ಸ್‌ಬಿಬಿ ಹಾಗೂ 8 ಮಾದರಿಗಳಲ್ಲಿ ಕೊರೊನಾ ವೈರಾಣುವಿನ ಇತರ ರೂಪಾಂತರಿ ಪತ್ತೆಯಾಗಿವೆ.

ವೈಟಿಪಿಎಸ್: ಉತ್ಪಾದನೆ ಸ್ಥಗಿತ

ಶಕ್ತಿನಗರ (ರಾಯಚೂರು): ತಾಂತ್ರಿಕ ಸಮಸ್ಯೆಗಳಿಂದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ವೈಟಿಪಿಎಸ್) ಎರಡು ವಿದ್ಯುತ್ ಘಟಕಗಳಿಂದ ಉತ್ಪಾದನೆ ಸ್ಥಗಿತಗೊಂಡಿದೆ.

ವಾರ್ಷಿಕ ನಿರ್ವಹಣೆಗಾಗಿ 800 ಮೆಗಾವಾಟ್ ಸಾಮರ್ಥ್ಯದ 2ನೇ ಘಟಕದ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ. ಒಂದನೇ ಘಟಕವು ತಾಂತ್ರಿಕ ಸಮಸ್ಯೆಯಿಂದ ಸ್ಥಗಿತಗೊಂಡಿದೆ. ದುರಸ್ತಿ ಕಾರ್ಯ ನಡೆದಿದ್ದು, ಜ.2ರಂದು ಒಂದನೇ ವಿದ್ಯುತ್ ಘಟಕದ ಉತ್ಪಾದನೆ ಪ್ರಾರಂಭ ಮಾಡಲಾಗುವುದು ಎಂದು ವೈಟಿಪಿಎಸ್‌ನ ಅಧಿಕಾರಿಯೊಬ್ಬರು ತಿಳಿಸಿದರು.

'ಮಗನ ಎಂ.ಪಿ ಮಾಡಲು ಸಲ್ಲದ ಆರೋಪ'

ಅವರು ಬ್ರಿಲಿಯಂಟ್ ಫಾದರ್, ಪೊಲಿಟೀಷಿಯನ್ – ಸಿದ್ದರಾಮಯ್ಯ ವಿರುದ್ಧ ಪ್ರತಾಪ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿದ್ದರಾಮಯ್ಯ ಸರ್ ನೀವು ಬ್ರಿಲಿಯಂಟ್ ಫಾದರ್; ಬ್ರಿಲಿಯಂಟ್ ಪೊಲಿಟೀಷಿಯನ್. ಮಗನನ್ನು ಮೈಸೂರು–ಕೊಡಗು ಕ್ಷೇತ್ರದಿಂದ ಕಣಕ್ಕಿಳಿಸಿ ಸಂಸದನಾಗಿಸಲು ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದೀರಿ' ಎಂದು ಬಿಜೆಪಿ ಸಂಸದ ಪ್ರತಾಪ ಸಿಂಹ ಭಾನುವಾರ ವಾಗ್ದಾಳಿ ನಡೆಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನನ್ನನ್ನು ಮುಗಿಸಲು ಎಲ್ಲಾ ಪ್ರಯತ್ನ ಮಾಡುತ್ತಿದ್ದೀರಿ. ಕೊನೆಗೆ ನನ್ನ ಜೀವ ತೆಗೆಯಬಹುದಷ್ಟೆ' ಎಂದು ಹೇಳಿದರು. 'ಮರ ಕಡಿದ ಪ್ರಕರಣದಲ್ಲಿ ಎಫ್ಐಆರ್‌ನಲ್ಲಿ ಹೆಸರಿಲ್ಲದಿದ್ದರೂ ನನ್ನ ತಮ್ಮನನ್ನು ಅರೆಸ್ಟ್ ಮಾಡಿಸಿದ್ದೀರಿ. ಮನೆಯಲ್ಲಿ ವೃದ್ಧ ತಾಯಿ ಇದ್ದಾರೆ. ತಂಗಿ ಇದ್ದಾಳೆ. ಅವರನ್ನೂ ಅರೆಸ್ಟ್ ಮಾಡಿಸಿ. ಇದ್ಯಾವುದಕ್ಕೂ ಜಗ್ಗುವ ಮಗ ನಾನಲ್ಲ' ಎಂದು ಗುಡುಗಿದರು.

'ಮಗನ ರಾಜಕೀಯ ಭವಿಷ್ಯಕ್ಕಾಗಿ ಹಾಗೂ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸಲು ಯಾರನ್ನು ಬೇಕಾದರೂ ತುಳಿಯುತ್ತಾರೆ. ಇಂತಹ ತಂದೆ ಎಲ್ಲರಿಗೂ ಸಿಗುವುದಿಲ್ಲ. ನಿಮ್ಮನ್ನು ಮೆಚ್ಚಿದ್ದೇನೆ. ಅಡ್ಡಿಯಾಗಿದ್ದೇನೆಂದು ನನ್ನನ್ನು ಮುಗಿಸಲು ಮುಂದಾಗಿದ್ದೀರಿ. ನಿಮ್ಮ ಕುಟುಂಬದ ರಾಜಕಾರಣವೇ ಮುಂದುವರಿಯಲಿ. ನಿಮಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ, ಶ್ಲಾಘಿಸುತ್ತೇನೆ' ಎಂದು ಚುಚ್ಚಿದರು.

'ಬೆಳಗಾವಿಯಲ್ಲಿ ಮಹಿಳೆಯನ್ನು ಬೆತ್ತಲೆಯಾಗಿಸಿ ಮೆರವಣಿಗೆ ಮಾಡಿದ್ದಾರೆ. ಅದರ ಬಗ್ಗೆ ನೀವು ಮಾತನಾಡುವುದಿಲ್ಲ. ಲೋಕಸಭೆ ಪ್ರವೇಶಕ್ಕೆ ಪಾಸ್‌ಗೆ ಶಿಫಾರಸು ಮಾಡಿದ್ದನ್ನೇ ಆಧರವಾಗಿ ಇಟ್ಟುಕೊಂಡು ನೀವು, ನಿಮ್ಮ ಸಚಿವರು, ಮಾತನಾಡುತ್ತೀರಿ' ಎಂದು ಟೀಕಿಸಿದರು.

'ಸಚಿವ ಮಧು ಬಂಗಾರಪ್ಪ ಚೆಕ್ ಬೌನ್ಸ್ ಪ್ರಕರಣದಲ್ಲಿ ತಪ್ಪಿತಸ್ಥ. ಆದರೆ, ಬಂಧಿಸಿರುವುದು ನನ್ನ ತಮ್ಮನನ್ನು. ಸಿನಿಮೀಯ ಶೈಲಿಯಲ್ಲಿ ಚೇಸ್ ಮಾಡಿ ಬಂಧಿಸಿದ್ದಾರೆ. ಪ್ರಕರಣದಲ್ಲಿ ಜಯಮ್ಮ, ರಾಜೇಶ್ ಶೆಟ್ಟಿ ವಿರುದ್ಧ ಎಫ್ಐಆರ್ ದಾಖಲಾಗಿದೆ. ಈವರೆಗೆ ಅವರನ್ನು ಬಂಧಿಸಿಲ್ಲ' ಎಂದರು.

'ಹುಣಸೂರಿನಲ್ಲಿ ಹನುಮ ಜಯಂತಿ ವೇಳೆ, ಸಿದ್ದರಾಮಯ್ಯ ವಿರುದ್ಧ ಮಾತನಾಡಿದ್ದೆ. ಅದಾದ ಎರಡೇ ಗಂಟೆಯಲ್ಲಿ ನನ್ನ ತಮ್ಮ ಮರಗಳ್ಳ ಎಂದು ಕಾಂಗ್ರೆಸ್‌ನವರು ಪೋಸ್ಟ್ ಹಾಕಿದ್ದರು. ಆತನ ವಿರುದ್ಧ ಎಫ್ಐಆರ್ ಆಗಿಲ್ಲ. ಏಕೆ ದಾರಿ ತಪ್ಪಿಸುತ್ತಿದ್ದೀರಿ?' ಎಂದರು.

'ಸಿದ್ದರಾಮಯ್ಯನವರೇ ನಿಮಗೆ ಬಹಳಷ್ಟು ದಾರಿಗಳಿಲ್ಲ. ನನ್ನನ್ನು ಸೋಲಿಸಲು ತಾಯಿ ಚಾಮುಂಡಿ, ಕಾವೇರಿ ತಾಯಿ ಹಾಗೂ ಮೈಸೂರು–ಕೊಡಗು ಕ್ಷೇತ್ರದ ಜನರು ಬಿಡುವುದಿಲ್ಲ' ಎಂದರು.

ವಿಕ್ರಂ ಸಿಂಹಗೆ ಜಾಮೀನು

ಹಾಸನ: ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮರ ಕಡಿದಿದ್ದ ಪ್ರಕರಣಕ್ಕೆ ಸಂಬಂಧಿಸಿ ಶನಿವಾರ ಬಂಧಿತರಾಗಿದ್ದ ವಿಕ್ರಂ ಸಿಂಹ ಅವರಿಗೆ ಬೇಲೂರಿನ ಹಿರಿಯ ಸಿವಿಲ್ ನ್ಯಾಯಾಲಯ ಭಾನುವಾರ ಜಾಮೀನು ಮಂಜೂರು ಮಾಡಿದೆ.

ಬೆಂಗಳೂರಿನಲ್ಲಿ ಬಂಧಿಸಿದ್ದ ಅವರನ್ನು ಇಲ್ಲಿನ ಅರಣ್ಯ ಇಲಾಖೆ ಅತಿಥಿಗೃಹಕ್ಕೆ ಕರೆತಂದು ವಿಚಾರಣೆ ನಡೆಯಿತು. ಭಾನುವಾರ ಹಿಮ್ಸ್‌ನಲ್ಲಿ ಆರೋಗ್ಯ ತಪಾಸಣೆ ಮಾಡಿಸಲಾಯಿತು. ಬಳಿಕ ಘಟನಾ ಸ್ಥಳಕ್ಕೆ ಕರೆದೊಯ್ದು, ಮಹಜರು ಮಾಡಲಾಯಿತು. ಸಂಜೆ ನ್ಯಾಯಾಧೀಶ ಪ್ರಕಾಶ್ ನಾಯ್ಕ್ ಅವರ ನಿವಾಸದಲ್ಲಿ ಹಾಜರುಪಡಿಸಿದರು.

'ಎಫ್ಐಆರ್‌ನಲ್ಲಿ ವಿಕ್ರಂ ಸಿಂಹ ಹೆಸರಿಲ್ಲ. ಶಂಕಿತ ಆರೋಪಿ ಎಂದು ಬಂಧಿಸಲಾಗಿತ್ತು. ಯಾವುದೇ ಷರತ್ತಿಲ್ಲದೇ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದ್ದಾರೆ' ಎಂದು ವಿಕ್ರಂ ಪರ ವಕೀಲ ಚಂದ್ರೇಗೌಡ ತಿಳಿಸಿದರು.

ಬಳಿಕ ಮಾತನಾಡಿದ ವಿಕ್ರಂ, 'ಸತ್ಯಕ್ಕೆ ಜಯ ಸಿಕ್ಕಿದೆ. ನನ್ನ ಅಣ್ಣನನ್ನು (ಬಿಜೆಪಿಯ ಸಂಸದ ಪ್ರತಾಪ ಸಿಂಹ) ಟಾರ್ಗೆಟ್ ಮಾಡಲಾಗಿದ್ದು, ನಮ್ಮ ವಿರುದ್ಧ ಪಿತೂರಿ ನಡೆದಿದೆ' ಎಂದರು. ಇದಕ್ಕೂ ಮೊದಲು ಮಾತನಾಡಿದ್ದ ವಿಕ್ರಂ, 'ತುಂಬಾ ವಿಷಯಗಳಿವೆ. ಕಾಲ ಬರಲಿ, ಎಲ್ಲವನ್ನೂ ಹೇಳುತ್ತೇನೆ' ಎಂದರು.

ಎಲ್ಲದಕ್ಕೂ ರಾಜಕೀಯ ಬಣ್ಣ: ಪರಮೇಶ್ವರ ಟೀಕೆ

ಬೆಂಗಳೂರು: 'ಸಂಸದ ಪ್ರತಾಪ್ ಸಿಂಹ ತಮ್ಮ ವಿಕ್ರಂ ಸಿಂಹ ಕಾನೂನು ಉಲ್ಲಂಘಿಸಿ ಅಕ್ರಮವಾಗಿ ಮರ ಕಡಿದಿರುವುದಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ಇಲ್ಲಿ, ಸಿ.ಎಂ ಹೆಸರು ಎಳೆದುತರುವ ಅಗತ್ಯವಿಲ್ಲ. ಸಂಸದರು ಎಲ್ಲದಕ್ಕೂ ರಾಜಕೀಯ ಬಣ್ಣ ಬಳಿಯುತ್ತಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಆರೋಪಿಸಿದರು.

'ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗೃಹ ಸಚಿವರು, 'ವಿಕ್ರಂ ಸಿಂಹ ಅಕ್ರಮವಾಗಿ ಮರ ಕಡಿದಿರುವುದು ನಿಜ. ಕಾನೂನಿನ ಪ್ರಕಾರ ಅನುಮತಿ ಪಡೆಯದೆ ಮರ ಕಡಿಯಲಾಗಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ಮುಖ್ಯಮಂತ್ರಿಯವರ ಪಾತ್ರ ಏನಿದೆ? ಕಾನೂನು ಪ್ರಕಾರ ಕೆಲಸ ಮಾಡಬಾರದೇ' ಎಂದು ಪ್ರಶ್ನಿಸಿದರು.

ಯಾರೇ ತಪ್ಪು ಮಾಡಿದ್ದರೂ ಕ್ರಮ: ಸಿ.ಎಂ

ಬೆಂಗಳೂರು: 'ಸಂಸದ ಪ್ರತಾಪ್ ಸಿಂಹ ಸಹೋದರ ವಿಕ್ರಂ ಸಿಂಹ ತಪ್ಪೇ ಮಾಡಿಲ್ಲ ಎಂದರೆ ಯಾಕೆ ಶಿಕ್ಷೆ ಆಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ವಿಕ್ರಂ ಸಿಂಹ ಬಂಧನ ಸಂಬಂಧಿಸಿದಂತೆ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಮುಖ್ಯಮಂತ್ರಿ, 'ನಿರಾಪರಾಧಿಗಳಿಗೆ ಶಿಕ್ಷೆ ಆಗುವುದಿಲ್ಲ. ಯಾರೇ ತಪ್ಪು ಮಾಡಿದ್ದರೂ ಕ್ರಮ ಆಗುತ್ತದೆ. ಈ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ ಆಗಲಿದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಅರಣ್ಯ ಇಲಾಖೆ ಅನುಮತಿ ಇಲ್ಲದೆ ಮರ ಕಡಿದಿದ್ದರೆ ಕ್ರಮ ಆಗುತ್ತದೆ. ವಿಕ್ರಂ ಸಿಂಹ ಬಂಧನ ವಿಚಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಅವರ ಕೆಲಸ ಮಾಡುತ್ತಾರೆ' ಎಂದರು.



ರಥೋತ್ಸವ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ 2023ರ ಕೊನೆಯ ದಿನ ಭಾನುವಾರ ರಾತ್ರಿ ನಡೆದ ಚಿನ್ನದ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತಸ್ತೋಮ

ಪ್ರತಿಭಟನಕಾರರ ವಿರುದ್ಧವೇ ಪ್ರಕರಣ

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಮಹಿಳೆಯರ ಅವಹೇಳನ ಆರೋಪ ಸಂಬಂಧ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಬಂಧನಕ್ಕೆ ಆಗ್ರಹಿಸಿ ತೊಕ್ಕೊಟ್ಟಿನಲ್ಲಿ ಶನಿವಾರ ಪ್ರತಿಭಟಿಸಿದ್ದ ಡಿವೈಎಫ್ಐ ಮುಖಂಡನ ವಿರುದ್ಧ ಇಲ್ಲಿನ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಡಿವೈಎಫ್ಐ ಉಳ್ಳಾಲ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಶನಿವಾರ ತೊಕ್ಕೊಟ್ಟಿನಲ್ಲಿ ಪ್ರತಿಭಟನೆ ನಡೆದಿತ್ತು. 'ಪೊಲೀಸ್ ಇಲಾಖೆ ಅನುಮತಿ ಪಡೆಯದೇ ಪ್ರತಿಭಟಿಸುವುದು ಸರಿಯಲ್ಲ ಎಂದು ಹೇಳಿದರೂ ಪ್ರತಿಭಟನೆ ಮುಂದುವರಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಸಂತೋಷ್ ಕುಮಾರ್ ಉಳ್ಳಾಲ ಠಾಣೆಗೆ ನೀಡಿದ್ದ ದೂರು ಆಧರಿಸಿ ಎಫ್ಐಆರ್ ದಾಖಲಾಗಿದೆ. ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಸುನಿಲ್ ಕುಮಾರ್ ಬಜಾಲ್ ಸೇರಿದಂತೆ 17 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣ ದಾಖಲಿಸಿದ ಕ್ರಮವನ್ನು ಡಿವೈಎಫ್ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಖಂಡಿಸಿದ್ದಾರೆ.

'ಪ್ರತಿಭಟನೆಯಲ್ಲಿ ಧ್ವನಿವರ್ಧಕ ಬಳಸಲು ಪೊಲೀಸ್ ಇಲಾಖೆಯ ಅನುಮತಿ ಬೇಕು. ನಾವು ಧ್ವನಿವರ್ಧಕ ಬಳಸಿಲ್ಲ. ಆದರೂ ಪ್ರಕರಣ ದಾಖಲಿಸಿದ್ದಾರೆ. ಇದರ ವಿರುದ್ಧ ಹೋರಾಟ ನಡೆಸಲಿದ್ದೇವೆ' ಎಂದು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ತಿಳಿಸಿದೆ.

'ಅಶಾಂತಿ ಸೃಷ್ಟಿಸುವ ಕೋಮುವಾದಿಗಳನ್ನು ಬಂಧಿಸಲಾಗದ ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಇನ್ನೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದು ಡಿವೈಎಫ್ಐ ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ಮತ್ತು ಕಾರ್ಯದರ್ಶಿ ಸಂತೋಷ್ ಬಜಾಲ್ ಹೇಳಿದ್ದಾರೆ.

ಸ್ವಂತ ಹಣದಿಂದ ಪ್ರಯಾಣ ಹಿದಾಯತ್ ಉಲ್ಲಾ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ



ಹಿದಾಯತ್ ಉಲ್ಲಾ

ಬೆಂಗಳೂರು: 'ಸಚಿವರು ಇಲಾಖಾ ಕಾರ್ಯಕ್ರಮ ಹಾಗೂ ಕೋವಿಡ್ ಸಭೆಗಳಲ್ಲಿ ನಿರತರಾಗಿದ್ದರಿಂದ ಅವರ ಉಸ್ತುವಾರಿ ಜಿಲ್ಲೆಯಾದ ದಕ್ಷಿಣ ಕನ್ನಡಕ್ಕೆ ಸಾರ್ವಜನಿಕರ ಅಹವಾಲು ಸ್ವೀಕರಿಸಲು ತೆರಳಿದ್ದೆ. ಈ ಪ್ರಯಾಣದ ವೆಚ್ಚವನ್ನು ಸ್ವಂತ ಹಣದಿಂದಲೇ ಭರಿಸಿದ್ದೇನೆ' ಎಂದು ಆರೋಗ್ಯ ಸಚಿವರ ಆಪ್ತ ಕಾರ್ಯದರ್ಶಿ (ಪಿ.ಎಸ್) ಕೆ.ಎ. ಹಿದಾಯತ್ ಉಲ್ಲಾ ತಿಳಿಸಿದ್ದಾರೆ.

'ಕರ್ತವ್ಯ ನಿಮಿತ್ತ ಪ್ರವಾಸದ ವೇಳಾಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿತ್ತು. ಸರ್ಕಾರದಿಂದ ವೆಚ್ಚ ಭರಿಸಿಕೊಳ್ಳುವ ಉದ್ದೇಶ ಇಲ್ಲ' ಎಂದು ತಿಳಿಸಿದ್ದಾರೆ.

'ಸಚಿವರ ಪಿ.ಎಸ್‌ಗೆ ಸರ್ಕಾರದಲ್ಲಿ ಪ್ರಯಾಣ ಭತ್ಯೆಯನ್ನು ಮರುಪಾವತಿ ಮಾಡಿಕೊಳ್ಳಲು ಅವಕಾಶ ಇರುವುದಿಲ್ಲ. ಇದುವರೆಗೂ ಯಾವುದೇ ವೆಚ್ಚ ಪಡೆದಿಲ್ಲ' ಎಂದು ಹೇಳಿದ್ದಾರೆ.

'ಪ್ರವಾಸದ ವಿವರವನ್ನು ನೀಡದೇ ಅಧಿಕಾರಿಗಳು ಪ್ರವಾಸ ಕೈಗೊಳ್ಳುವುದು ಸರ್ಕಾರದ ನಿಯಮಕ್ಕೆ ವಿರುದ್ಧವಾದದ್ದು. ಆ ಕಾರಣಕ್ಕಾಗಿಯೇ ನಾನು ಸರ್ಕಾರಕ್ಕೆ ಮಾಹಿತಿ ನೀಡಿ ಪ್ರವಾಸ ಕೈಗೊಂಡಿದ್ದೇನೆ' ಎಂದು ತಿಳಿಸಿದ್ದಾರೆ.

ಯತ್ನಾಳಗೆ ವರಿಷ್ಠರಿಂದ ಶೀಘ್ರ ಬುಲಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ನಾಯಕರ ವಿರುದ್ಧ ನಿತ್ಯವೂ ವಾಗ್ದಾಳಿ ನಡೆಸುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ದೆಹಲಿಗೆ ಕರೆಸಿ ಮಾತುಕತೆ ನಡೆಸಿ ಸಮಾಧಾನಪಡಿಸಲು ಬಿಜೆಪಿ ವರಿಷ್ಠರು ಚಿಂತನೆ ನಡೆಸಿದ್ದಾರೆ.

ಪಕ್ಷದ ಹಿರಿಯ ನಾಯಕರೂ ಆಗಿರುವ ಯತ್ನಾಳ ವಿರುದ್ಧ ಏಕಾಏಕಿ ನೇರ ಕ್ರಮ ತೆಗೆದುಕೊಳ್ಳುವುದರ ಬದಲಿಗೆ ಅವರ ಅಹವಾಲುಗಳನ್ನು ಆಲಿಸಿ, ಅವರಿಗೆ ಸಮಾಧಾನವಾಗಬಹುದಾದ ಭರವಸೆಗಳನ್ನು ನೀಡಬಹುದು. ಅದಕ್ಕೂ ಬಗ್ಗದಿದ್ದರೆ ಆಗ ಬೇರೆ ತೀರ್ಮಾನ ತೆಗೆದುಕೊಳ್ಳಲೂ ಬಹುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಯತ್ನಾಳ ಅವರಿಗೆ ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ ಸೇರಿ ಹಲವರ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ಅಸಮಾಧಾನವಿದೆ. ಅಲ್ಲದೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದ ಅವರಿಗೆ ಯಾವುದೇ ಹುದ್ದೆಗಳನ್ನು ನೀಡಲಿಲ್ಲ. ಈ ಬಾರಿ ಅಧ್ಯಕ್ಷ ಸ್ಥಾನ ಮತ್ತು ವಿರೋಧ ಪಕ್ಷದ ನಾಯಕ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಇವೆರಡೂ ಸ್ಥಾನಗಳು ಸಿಗದ ಕಾರಣ ಅವರು ಸಿಟ್ಟಿಗೆದ್ದಿದ್ದಾರೆ ಎಂದು ಮೂಲಗಳು ಹೇಳಿವೆ.

ಯತ್ನಾಳ ಅವರನ್ನು ಕರೆದು ಮಾತನಾಡಿ, ಅವರದ್ದು ಯಾವುದೇ ಸಮಸ್ಯೆ ಇದ್ದರೆ ಬಗೆಹರಿಸಿ ಎಂದು ವರಿಷ್ಠರಿಗೆ ಮನವಿ ಮಾಡಿದ್ದೇನೆ

ಬಿ.ವೈ.ವಿಜಯೇಂದ್ರ, ರಾಜ್ಯ ಬಿಜೆಪಿ ಅಧ್ಯಕ್ಷ

'ಒಮ್ಮೆ ಬಿಜೆಪಿ ಬಿಟ್ಟು ಹೋಗಿದ್ದ ಯತ್ನಾಳ ಅವರನ್ನು ಹಲವು ನಾಯಕರ ವಿರೋಧದ ಮಧ್ಯೆಯೂ ಪುನಃ ಪಕ್ಷಕ್ಕೆ ಸೇರಿಸಿಕೊಳ್ಳಲು ಯಡಿಯೂರಪ್ಪ ಕಾರಣ. ಆಗ ಪಕ್ಷದ ಅಧ್ಯಕ್ಷರಾಗಿದ್ದ ಡಿ.ವಿ.ಸದಾನಂದಗೌಡ ಅವರು ಯತ್ನಾಳ ಅವರನ್ನು ಮತ್ತೆ ಸೇರಿಸಿಕೊಳ್ಳುವುದರಿಂದ ಲಾಭ ಆಗುವುದಿಲ್ಲ. ಅವರು ಪಕ್ಷಕ್ಕೆ ಹಾನಿ ಮಾಡುತ್ತಾರೆ ಎಂದು ಕಿವಿ ಮಾತು ಹೇಳಿದ್ದರು. ಅದ್ಯಾವುದನ್ನೂ ಕಿವಿಗೆ ಹಾಕಿಕೊಳ್ಳದ ಯಡಿಯೂರಪ್ಪ ಅವರು ಯತ್ನಾಳ ಅವರನ್ನು ಸೇರಿಸಿಕೊಳ್ಳಲು ಪಟ್ಟು ಹಿಡಿದಿದ್ದರು. ಈಗ ಅವರು ಯಡಿಯೂರಪ್ಪ ವಿರುದ್ಧವೇ ಸಮರಕ್ಕೆ ಇಳಿದಿದ್ದಾರೆ. ಯಡಿಯೂರಪ್ಪ ಮತ್ತು ಯತ್ನಾಳ ಮಧ್ಯೆ ಬಿರುಕು ಮೂಡಲು ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಂದರ್ಭ ಅವರಿಗೆ ವಿಶೇಷ ಕರ್ತವ್ಯಾಧಿಕಾರಿ ಆಗಿದ್ದ ವ್ಯಕ್ತಿಯೊಬ್ಬರು ಕಾರಣ' ಎಂದು ಯಡಿಯೂರಪ್ಪ ಆಪ್ತ ವಲಯ ಭಾವಿಸಿದೆ.

'ಈ ವಿಶೇಷ ಕರ್ತವ್ಯ ಅಧಿಕಾರಿಯನ್ನು ಯಡಿಯೂರಪ್ಪ ಅವರು ದೂರ ಇಟ್ಟ ಬಳಿಕ ಅವರು ಯತ್ನಾಳ ಜತೆ ಸೇರಿಕೊಂಡರು. ಇವರೇ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರು ಬಗ್ಗೆ ಅಸಮಾಧಾನದ ಬೀಜ ಬಿತ್ತಿದವರು. ಈ ವ್ಯಕ್ತಿಯನ್ನು ಯಡಿಯೂರಪ್ಪ ಬಳಿ ಸೇರಿಸಲು ಕೇಂದ್ರದ ಸಚಿವರೊಬ್ಬರು ಕಾರಣ' ಎಂದು ಯಡಿಯೂರಪ್ಪ ಆಪ್ತ ವಲಯ ಹೇಳಿದೆ.

ಯತ್ನಾಳ ಉತ್ತರಕರ್ನಾಟಕ ಜಿಲ್ಲೆಯ ಕೆಲವು ಜಿಲ್ಲೆಗಳಲ್ಲಿ ತಮ್ಮದೇ ಆದ ಪ್ರಭಾವ ಹೊಂದಿದ್ದಾರೆ. ಪ್ರಖರ ಹಿಂದುತ್ವವಾದಿಯೂ ಆಗಿರುವ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇಲ್ಲ. ಅವರನ್ನು ಸಮಾಧಾನಗೊಳಿಸಿ ಕಳಿಸಬಹುದು ಎನ್ನುವುದು ಬಿಜೆಪಿಯ ಒಂದು ಬಣದ ಅಭಿಪ್ರಾಯ.

ಅಂತರ್ಜಾತಿ ವಿವಾಹ:ಯುವಕನ ಪಾಲಕರ ಮೇಲೆ ತೀವ್ರ ಹಲ್ಲೆ

ಮಲೇಬೆನ್ನೂರು (ದಾವಣಗೆರೆ): ಅಂತರ್ಜಾತಿ ವಿವಾಹವಾಗಿದ್ದ ಯುವಕನ ತಂದೆ– ತಾಯಿ ಮೇಲೆ ಯುವತಿಯ ಸಂಬಂಧಿಕರು ಮನೆಗೆ ನುಗ್ಗಿ ಬಟ್ಟೆ ಹರಿದು, ತೀವ್ರ ಹಲ್ಲೆ ನಡೆಸಿದ ಘಟನೆ ಶನಿವಾರ ರಾತ್ರಿ ಸಮೀಪದ ಕಮಲಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕುರುಬ ಸಮುದಾಯದ ಸಿದ್ದಪ್ಪ ಹಾಗೂ ಪಂಚಮಸಾಲಿ ಲಿಂಗಾಯತ ಸಮುದಾಯದ ಸೃಷ್ಟಿ ಪರಸ್ಪರ ಪ್ರೀತಿಸಿ ಡಿಸೆಂಬರ್ 9ರಂದು ವಿವಾಹವಾಗಿದ್ದರು.

'ಹುಡುಗಿಯ ಮನೆಯವರಿಗೆ ಪ್ರೇಮ ವಿವಾಹ ಇಷ್ಟ ಇರಲಿಲ್ಲ. ಶನಿವಾರ ರಾತ್ರಿ ಮನೆಗೆ ನುಗ್ಗಿದ್ದ ಆರೇಳು ಮಂದಿ ಕಲ್ಲು, ಕಟ್ಟಿಗೆಯಿಂದ ಹಲ್ಲೆ ನಡೆಸಿದ್ದಾರೆ. ಬಿಡಿಸಲು ಬಂದ ನಮ್ಮ ಸಂಬಂಧಿಕರ ಮೇಲೂ ಹಲ್ಲೆ ನಡೆಸಿದ್ದಾರೆ' ಎಂದು ಯುವಕನ ತಾಯಿ ಮಲ್ಲಮ್ಮ ದೂರು ನೀಡಿದ್ದಾರೆ.

ಆರೋಪಿಗಳಾದ ಮಹಾದೇವ, ರವಿ, ದಾನನಗೌಡ, ಬಸವರಾಜ, ಸುರೇಶ್ ಎಂಬುವವರ ವಿರುದ್ಧ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಪೈಕಿ ಮಹಾದೇವ ಹಾಗೂ ದಾನನಗೌಡ ಅವರನ್ನು ಬಂಧಿಸಲಾಗಿದೆ.

ಗಾಯಾಳುಗಳನ್ನು ಹರಿಹರ ಹಾಗೂ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲ್ಲೆಯ ದೃಶ್ಯ ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.



ಬೆಂಗಳೂರಿನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಕೊಡಮಾಡುವ ಜೀವಮಾನ ಸಾಧನೆ ಪ್ರಶಸ್ತಿಯನ್ನು (ಎಡದಿಂದ) 'ಪ್ರಜಾವಾಣಿ' ಡೆಪ್ಯುಟಿ ಎಡಿಟರ್ ಎಂ.ನಾಗರಾಜ, ಪತ್ರಕರ್ತರಾದ ಆರ್. ಶಂಕರ, ಸದಾಶಿವ ಶೆಣೈ, ಕೂಡ್ಲಿ ಗುರುರಾಜ್ ಹಾಗೂ ಕೆ.ಕೆ.ಮೂರ್ತಿ ಅವರಿಗೆ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ, ಶಾಸಕ ಶಾಮನೂರು ಶಿವಶಂಕರಪ್ಪ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಭಾಗವಹಿಸಿದ್ದರು

'ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ಆದ್ಯತೆ'

ತೇಜ್‌ಪುರ (ಅಸ್ಸಾಂ): ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಗಾಗಿ ದೇಶೀಯ ರಕ್ಷಣಾ ಕೈಗಾರಿಕಾ ಪರಿಸರ ವ್ಯವಸ್ಥೆಯ ಭದ್ರ ನೆಲೆಯನ್ನು ಸರ್ಕಾರ ಅಭಿವೃದ್ಧಿಪಡಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದ್ದಾರೆ.

ತೇಜ್‌ಪುರ ವಿಶ್ವವಿದ್ಯಾಲಯದಲ್ಲಿ ನಡೆದ 21ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಶಸ್ತ್ರಾಸ್ತ್ರಗಳ ರಫ್ತು ಹೆಚ್ಚಾಗಿರುವ ಕಾರಣ ಆಮದು ಕಡಿಮೆಯಾಗಿದೆ ಎಂದಿದ್ದಾರೆ. 509 ರಕ್ಷಣಾ ಸಾಮಗ್ರಿಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ದೇಶಿಯವಾಗಿ ನಿರ್ಮಿಸಲಾಗುವುದು ಎಂದಿದ್ದಾರೆ.

ಚಿತ್ರದುರ್ಗ: ಪಾಳು ಮನೆಯಲ್ಲಿ ಐದು ಅಸ್ಥಿಪಂಜರ ಪತ್ತೆ ಪ್ರಕರಣಕ್ಕೆ ತಿರುವು

ಇಬ್ಬರ ಕಾಲಿಗೆ ಹಗ್ಗ ಬಿಗಿಯಲಾಗಿತ್ತೇ?

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಕಾರಾಗೃಹ ರಸ್ತೆಯ ಪಾಳು ಮನೆಯೊಂದರಲ್ಲಿ ಈಚೆಗೆ ಐವರ ಅಸ್ಥಿಪಂಜರಗಳು ಪತ್ತೆಯಾದ ಘಟನೆ ದಿನಕ್ಕೊಂದು ತಿರುವು ಪಡೆಯುತ್ತಿದೆ. ದಾವಣಗೆರೆಯ ವಿಧಿವಿಜ್ಞಾನ ತಜ್ಞರ ತಂಡ ಮನೆಯಲ್ಲಿ ಸಾಕ್ಷ್ಯಸಂಗ್ರಹದಲ್ಲಿ ನಿರತವಾಗಿದೆ.

ಮನೆಯ ಇಂಚಿಂಚನ್ನೂ ಪರಿಶೀಲಿಸುತ್ತಿರುವ ತಂಡಕ್ಕೆ ಸಾಕ್ಷ್ಯಗಳು ಲಭ್ಯವಾಗುತ್ತಿವೆ. ಬೆಳಕು ಬಾರದಂತೆ ಕಿಟಕಿ, ಬಾಗಿಲು ಸಂಪೂರ್ಣ ಮುಚ್ಚಿದ್ದ ಮನೆಯ ಕೊಠಡಿಯಲ್ಲಿ ಪತ್ತೆಯಾಗಿದ್ದ ಅಸ್ಥಿಪಂಜರಗಳು ಇದ್ದ ಸ್ಥಿತಿ ಅನುಮಾನಕ್ಕೆ ಎಡೆ ಮಾಡಿದೆ.

ಕೊಠಡಿಯೊಂದರಲ್ಲಿ ಮೂರು ಅಸ್ಥಿಪಂಜರಗಳು ಮಂಚದ ಮೇಲೆ, ಒಂದು ಮಂಚದ ಕೆಳಗೆ ಇದ್ದು, ಮತ್ತೊಂದು ನಡುಮನೆಯಲ್ಲಿ ಇತ್ತು. ಈ ಪೈಕಿ ಒಬ್ಬ ಪುರುಷ ಹಾಗೂ ಮಹಿಳೆಯ ಅಸ್ಥಿಪಂಜರದ ಕಾಲುಗಳು ಹಗ್ಗ ಬಿಗಿದ ಸ್ಥಿತಿಯಲ್ಲಿದ್ದವು ಎಂಬುದು ಬಸವೇಶ್ವರ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಶನಿವಾರ ನಡೆದ ಮರಣೋತ್ತರ ಪರೀಕ್ಷೆ ವೇಳೆ ಗೊತ್ತಾಗಿದೆ ಎನ್ನಲಾಗಿದೆ.



ಅಸ್ಥಿಪಂಜರ ಪತ್ತೆಯಾದ ಚಿತ್ರದುರ್ಗ ನಗರದ ಕಾರಾಗೃಹ ರಸ್ತೆಯ ಪಾಳು ಮನೆಯ ತಾರಸಿ ಮೇಲೆ ವಿಧಿವಿಜ್ಞಾನ ತಜ್ಞರ ತಂಡವು ಸಾಕ್ಷ್ಯ ಸಂಗ್ರಹಿಸಿತು

ಈ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿಲ್ಲ.

ಮನೆಯ ಮಾಲೀಕ ಜಗನ್ನಾಥ ರೆಡ್ಡಿ ಅವರ ಪುತ್ರ ಕೃಷ್ಣ ರೆಡ್ಡಿ ಯಾವಾಗಲೂ ಮಕಾಡೆಯಾಗಿ ಮಲಗುವ ಅಭ್ಯಾಸ ಹೊಂದಿದ್ದರು ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ. ಇದರ ಆಧಾರದಲ್ಲಿ, ಮಂಚದ ಕೆಳಗೆ ಮಕಾಡೆಯಾಗಿ ಮಲಗಿರುವ ಸ್ಥಿತಿಯಲ್ಲಿ ಪತ್ತೆಯಾಗಿರುವ ಅಸ್ಥಿಪಂಜರವನ್ನು ಕೃಷ್ಣ ಅವರದ್ದು ಎಂದು ಶಂಕಿಸಲಾಗಿದೆ.

ಮನೆಯ ಗೋಡೆಯೊಂದರ ಮೇಲೆ ಐವರ ಹಸ್ತದ ಮುದ್ರೆ ಗುರುತುಗಳಿರುವುದು ಕುತೂಹಲ ಹೆಚ್ಚಿಸಿದೆ. ಇವು ರಕ್ತದ ಮಾದರಿಯಲ್ಲಿವೆ ಎನ್ನಲಾಗಿದೆ. ಪಾಳು ಮನೆಯಲ್ಲಿ ಪೊಲೀಸರು, ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ, ಬೆರಳಚ್ಚು ತಜ್ಞರು ಬೀಡು ಬಿಟ್ಟಿದ್ದಾರೆ.

ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ನಿವೃತ್ತಿ ಹೊಂದಿದ್ದ ಜಗನ್ನಾಥ ರೆಡ್ಡಿ ಅವರು 2019 ಜನವರಿ ಬಳಿಕ ತಮ್ಮ ನಿವೃತ್ತಿ ವೇತನ ತೆಗೆದುಕೊಂಡಿಲ್ಲ. ಜತೆಗೆ ಜನವರಿ ತಿಂಗಳ ಬಳಿಕ ಈ ಮನೆಯವರಿಂದ ಯಾವುದೇ ಬಿಲ್ ಪಾವತಿ ಆಗಿಲ್ಲ ಎಂಬುದು ಬೆಳಕಿಗೆ ಬಂದಿದೆ. ಪ್ರಕರಣ ಭೇದಿಸಲು ಚಿತ್ರದುರ್ಗ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಅಕ್ಕಪಕ್ಕದ ಮನೆಗಳಿಗೆ ಬೀಗ

ಐವರ ಅಸ್ಥಿಪಂಜರ ಪತ್ತೆ ಆದ ಬಳಿಕ ಅಕ್ಕಪಕ್ಕದ ನಿವಾಸಿಗಳೂ ತಮ್ಮ ತಮ್ಮ ಮನೆಗಳಿಗೆ ಬೀಗ ಹಾಕಿದ್ದಾರೆ. ಜನನಿಬಿಡ ಪ್ರದೇಶವಾಗಿದ್ದ ರಸ್ತೆ ಈ ಘಟನೆ ಬಳಿಕ ಬಿಕೋ ಎನ್ನುತ್ತಿದೆ.

ಒಂದೇ ಮನೆಯಲ್ಲಿ ಐವರ ಅಸ್ಥಿಪಂಜರ ಪತ್ತೆ ತಿಳಿಯುತ್ತಿದ್ದಂತೆಯೇ ಸುತ್ತಮುತ್ತಲ ನಿವಾಸಿಗಳು ಭಯಭೀತರಾಗಿದ್ದಾರೆ. ನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದ ವಾಹನ ಸವಾರರು, ವಾಯುವಿಹಾರಿಗಳ ಸಂಖ್ಯೆಯೂ ಇಳಿಮುಖವಾಗಿದೆ.

2024ರಲ್ಲೂ ಇದೇ ಉತ್ಸಾಹ ಮುಂದುವರಿಯಲಿ: ದೇಶದ ನಾಗರಿಕರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ

‘ರಾಮ ಭಜನೆ, ಹಾಡು ಹಂಚಿಕೊಳ್ಳಿ’

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯ ದಿನ ಸಮೀಪಿಸುತ್ತಿರುವಂತೆಯೇ ದೇಶದೆಲ್ಲೆಡೆ ಸಡಗರ ಮನೆ ಮಾಡಿದೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ರಾಮನಿಗೆ ಸಂಬಂಧಿಸಿದ ಭಜನೆಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವಂತೆ ದೇಶದ ನಾಗರಿಕರಿಗೆ ಭಾನುವಾರ ಕರೆ ನೀಡಿದರು.



‘ಮನದ ಮಾತು’ ತಿಂಗಳ ರೇಡಿಯೊ ಕಾರ್ಯಕ್ರಮದ ಈ ವರ್ಷದ ಕೊನೆಯ ಹಾಗೂ 108ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ಅನೇಕ ಅನುಭವಿ ಹಾಗೂ ಉದಯೋನ್ಮುಖ ಕಲಾವಿದರು ಭಗವಾನ್ ರಾಮನ ಕುರಿತು ಹೃದಯಸ್ಪರ್ಶಿ ಭಜನೆಗಳನ್ನು ರಚಿಸಿದ್ದಾರೆ ಎಂದು ತಿಳಿಸಿದರು.

‘ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇಡೀ ದೇಶದಲ್ಲಿ ಸಂಭ್ರಮ ಮತ್ತು ಉತ್ಸಾಹ ಕಂಡುಬರುತ್ತಿದೆ. ಜನರು ತಮ್ಮ ಭಾವನೆಗಳನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಕಳೆದ ಕೆಲ ದಿನಗಳಲ್ಲಿ ಶ್ರೀರಾಮ ಮತ್ತು ಅಯೋಧ್ಯೆಯ ಕುರಿತು ಅನೇಕ ಹೊಸ ಹಾಡುಗಳು ಮತ್ತು ಭಜನೆಗಳನ್ನು ರಚಿಸಿರುವುದನ್ನು ನೀವು ಗಮನಿಸಿರಬಹುದು’ ಎಂದರು.

‘ರಾಮನಿಗೆ ಸಂಬಂಧಿಸಿದ ಕೆಲವು ಹೊಸ ಹಾಡು ಮತ್ತು ಭಜನೆಗಳನ್ನು ನಾನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದೇನೆ. ನೀವು ಕೂಡ ಶ್ರೀರಾಮ ಭಜನ್ (#shriRamBhajan) ಹ್ಯಾಷ್‌ಟ್ಯಾಗ್ ಅಡಿ ಹಂಚಿಕೊಳ್ಳಿ’ ಎಂದು ಮನವಿ ಮಾಡಿದರು.

‘ಇದೇ ಉತ್ಸಾಹವಿರಲಿ’: ಇಂದು ದೇಶದ ಮೂಲೆ ಮೂಲೆಗಳಲ್ಲೂ ‘ವಿಕಸಿತ ಭಾರತ’ ಮತ್ತು ಸ್ವಾವಲಂಬನೆಯ ಮನೋಭಾವವು ತುಂಬಿದ್ದು, 2024ರಲ್ಲೂ ಇದೇ ಉತ್ಸಾಹವನ್ನು ಕಾಯ್ದುಕೊಳ್ಳಬೇಕು ಎಂದು ಕರೆ ನೀಡಿದರು.

‘ನಾವು ಯಾವುದೇ ಕೆಲಸ ಅಥವಾ ಏನೇ ನಿರ್ಧಾರ ಮಾಡಿದರೂ, ಅದರಿಂದ ದೇಶಕ್ಕೆ ಏನು ಲಾಭವಾಗಲಿದೆ ಎಂದು ಯೋಚಿಸಬೇಕು. ದೇಶ ಮೊದಲು ಎನ್ನುವುದಕ್ಕಿಂತ ದೊಡ್ಡ ಮಂತ್ರ ಇನ್ನೊಂದಿಲ್ಲ’ ಎಂದರು.

2023ರಲ್ಲಿ ದೇಶವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿ ಮತ್ತು ಸಾಧನೆಯನ್ನು ಪ್ರಧಾನಿ ಸ್ಮರಿಸಿದರು. ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳ ಸಾಧನೆಯನ್ನು ಶ್ಲಾಘಿಸಿದರು. ಚಂದ್ರಯಾನ-3 ಯಶಸ್ಸಿನ ಹಿಂದಿರುವ ವಿಜ್ಞಾನಿಗಳು, ಅದರಲ್ಲೂ ಮುಖ್ಯವಾಗಿ ಮಹಿಳಾ ವಿಜ್ಞಾನಿಗಳ ಪಾತ್ರವನ್ನು ಪ್ರಧಾನ ಮಂತ್ರಿ ಮೋದಿ ಕೊಂಡಾಡಿದರು.

ಅಯೋಧ್ಯೆ: ವಂಚನೆ ದೂರು ನೀಡಿದ ವಿಎಚ್‌ಪಿ

ನವದೆಹಲಿ (ಪಿಟಿಐ): ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಅನುಮತಿ ಇಲ್ಲದೆ ದೇಣಿಗೆ ಕೇಳುತ್ತಿದ್ದಾರೆ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆರೋಪಿಸಿದೆ. ಅಂಥವರ ವಿರುದ್ಧ ತಕ್ಷಣವೇ ಕ್ರಮ ಜರುಗಿಸಬೇಕು ಎಂದು ಕೋರಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಕೇಂದ್ರ ಗೃಹ ಸಚಿವಾಲಯಕ್ಕೆ ದೂರು ನೀಡಿರುವುದಾಗಿ ತಿಳಿಸಿದೆ.

ಜನರನ್ನು ವಂಚಿಸಲು ಯತ್ನಿಸುತ್ತಿರುವ ಇಂಥವರ ಜಾಲಕ್ಕೆ ಸಿಲುಕಬಾರದು ಎಂದು ವಿಎಚ್‌ಪಿ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಲ್ ಅವರು ಎಕ್ಸ್ ವೇದಿಕೆಯ ಮೂಲಕ ಹೇಳಿದ್ದಾರೆ. ಉತ್ತರ ಪ್ರದೇಶ ಪೊಲೀಸ್ ಮುಖ್ಯಸ್ಥರಿಗೆ ದೂರನ್ನು ಸಲ್ಲಿಸಲಾಗಿದೆ. ದೂರಿನ ಪ್ರತಿಯನ್ನು ಯೋಗಿ ಆದಿತ್ಯನಾಥ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕಳುಹಿಸಲಾಗಿದೆ. ದೂರಿನ ಪ್ರತಿಯನ್ನು ಬನ್ಸಲ್ ಅವರು ಎಕ್ಸ್ ಮೂಲಕ ಹಂಚಿಕೊಂಡಿದ್ದಾರೆ.

‘ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ನಕಲಿ ಗುರುತಿನ ಚೀಟಿಗಳನ್ನು ಬಳಸಿ ಕೆಲವರು ಜನರಿಗೆ ಮೋಸ ಮಾಡಲು ಯತ್ನಿಸುತ್ತಿದ್ದಾರೆ, ಇವರ ಬಗ್ಗೆ ಎಚ್ಚರ’ ಎಂದು ಬನ್ಸಲ್ ಅವರು ಬರೆದಿದ್ದಾರೆ.

ಈಚೆಗೆ ಎಕ್ಸ್ ವೇದಿಕೆ ಮೂಲಕ ಸ್ಪಷ್ಟನೆಯೊಂದನ್ನು ನೀಡಿದ್ದ ವಿಎಚ್‌ಪಿ, ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ಪ್ರಾಣ ಪ್ರತಿಷ್ಠಾಪನೆಯ ಕಾರ್ಯಕ್ರಮಕ್ಕೆ ಹಣ ಸಂಗ್ರಹಿಸಲು ಪ್ರತ್ಯೇಕ ಸಮಿತಿ ರಚಿಸಿಕೊಳ್ಳಲು ಯಾರಿಗೂ ಅನುಮತಿ ನೀಡಿಲ್ಲ ಎಂದಿತ್ತು.

ಪ್ರಧಾನಿ ಮಾತು

- ‘ನಾಟು ನಾಟು’ ಗೀತೆಗೆ ಆಸ್ಕರ್ ಪ್ರಶಸ್ತಿ ಸಿಕ್ಕಾಗ ಇಡೀ ದೇಶವೇ ಸಂಭ್ರಮಿಸಿತ್ತು. ‘ದಿ ಎಲಿಫೆಂಟ್ ವಿಸ್ಪರರ್ಸ್’ಗೆ ದೊರೆತ ಗೌರವವನ್ನು ಕೇಳಿ ಯಾರಿಗೆ ಸಂತೋಷವಾಗಿಲ್ಲ ಹೇಳಿ? ಇವುಗಳ ಮೂಲಕ ಭಾರತದ ಸೃಜನಶೀಲತೆ ಇಡೀ ಜಗತ್ತಿಗೆ ತಿಳಿಯಿತು.
- 2015ರಲ್ಲಿ ‘ಜಾಗತಿಕ ನಾವೀನ್ಯ ಸೂಚ್ಯಂಕ’ದಲ್ಲಿ 81ನೇ ಸ್ಥಾನದಲ್ಲಿದ್ದ ಭಾರತ, ಈಗ 40ನೇ ಸ್ಥಾನಕ್ಕೇರಿದೆ.
- ಭಾರತವು ಅಭಿವೃದ್ಧಿ ಹೊಂದಿದರೆ ಯುವಜನರು ಅದರ ಲಾಭ ಪಡೆಯುತ್ತಾರೆ. ಯುವಜನರು ಫಿಟ್ ಆಗಿರುವುದು ಮುಖ್ಯ.

ಅಕ್ಷಯ್ ಫಿಟ್‌ನೆಸ್ ಟಿಪ್ಸ್

‘ಮನದ ಮಾತು’ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಾಲಿವುಡ್ ನಟ ಅಕ್ಷಯ್ ಕುಮಾರ್ ಫಿಟ್‌ನೆಸ್ ಬಗ್ಗೆ ಮಾತನಾಡಿದರು. ಇಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್, ಕ್ರಿಕೆಟರ್ ಹರ್ಮನ್‌ಪ್ರೀತ್ ಕೌರ್ ಮತ್ತು ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರೂ ಫಿಟ್‌ನೆಸ್ ಸಲಹೆಗಳನ್ನು ನೀಡಿದರು. ‘ನನಗೆ ಫಿಟ್‌ನೆಸ್ ಬಗ್ಗೆ ಕಾಳಜಿ ಹೆಚ್ಚು ಎಂಬುದು ನಿಮಗೆಲ್ಲರಿಗೂ ತಿಳಿದಿದೆ. ಆದರೆ ಸಹಜ ರೀತಿಯಲ್ಲಿ ಫಿಟ್ ಆಗಿರಲು ನಾನು ಇಷ್ಟಪಡುವೆ. ಜಿಮ್‌ಗಿಂತ ಈಜು, ಬ್ಯಾಡ್ಮಿಂಟನ್, ಮೆಟ್ಟಿಲು ಹತ್ತುವುದು ಮತ್ತು ಪೌಷ್ಟಿಕ ಆಹಾರ ಸೇವಿಸಿ ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವೆ’ ಎಂದು ಅಕ್ಷಯ್ ಹೇಳಿದರು.

ಸುದ್ದಿ 2 ನಿಮಿಷ

ಅರವಿಂದ್ ಪನಗಡಿಯಾ 16ನೇ ಹಣಕಾಸು ಆಯೋಗದ ಅಧ್ಯಕ್ಷ

ನವದೆಹಲಿ (ಪಿಟಿಐ): ಅರವಿಂದ್ ಪನಗಡಿಯಾ ಅವರನ್ನು 16ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ನೀತಿ ಆಯೋಗದ ಉಪಾಧ್ಯಕ್ಷರಾಗಿ ಅವರು ಈ ಹಿಂದೆ ಕಾರ್ಯನಿರ್ವಹಿಸಿದ್ದರು.

ಹಣಕಾಸು ಸಚಿವಾಲಯದ ಜಂಟಿ ಕಾರ್ಯದರ್ಶಿ ಋತ್ವಿಕ್ ರಂಜನಂ ಪಾಂಡೆ ಅವರು ಹಣಕಾಸು ಆಯೋಗದ ಕಾರ್ಯದರ್ಶಿ ಆಗಿರುತ್ತಾರೆ. ಈ ಸಂಬಂಧ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಅರವಿಂದ್ ಪನಗಡಿಯಾ ನೇತೃತ್ವದಲ್ಲಿ 16ನೇ ಹಣಕಾಸು ಆಯೋಗವನ್ನು ರಾಷ್ಟ್ರಪತಿಯವರು ರಚಿಸಿದ್ದಾರೆ. ಆಯೋಗಕ್ಕೆ ಸದಸ್ಯರ ನೇಮಕ ಕುರಿತಂತೆ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸಲಾಗಿದೆ.



2026-27ರಿಂದ 2030-31ರ ನಡುವಣ ಐದು ವರ್ಷಗಳಿಗೆ ಸಂಬಂಧಿಸಿದಂತೆ ಆಯೋಗವು ತನ್ನ ವರದಿಯನ್ನು ರಾಷ್ಟ್ರಪತಿಯವರಿಗೆ 2025ರ ಅಕ್ಟೋಬರ್ 31ರೊಳಗೆ ಸಲ್ಲಿಸಲಿದೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ ತಿಂಗಳು ನಡೆದಿದ್ದ ಕೇಂದ್ರ ಸಚಿವ ಸಂಪುಟ ಸಭೆಯು, ಆಯೋಗ ರಚನೆಗೆ ಸಂಬಂಧಿಸಿದ ಷರತ್ತು ಮತ್ತು ನಿಯಮಗಳಿಗೆ ಅನುಮೋದನೆ ನೀಡಿತ್ತು.

ರಾಜ್ಯಗಳಿಗೆ ತೆರಿಗೆ ಹಂಚಿಕೆ, ವರಮಾನವನ್ನು ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಆಯೋಗವು ವರದಿ ನೀಡಲಿದೆ. ಜೊತೆಗೆ ಪ್ರಾಕೃತಿಕ ವಿಕೋಪ ನಿರ್ವಹಣೆ ಕಾಯ್ದೆ 2005ರ ಅನ್ವಯ ವಿವಿಧ ವಿಕೋಪಗಳ ನಿರ್ವಹಣೆಗೆ ಆರ್ಥಿಕ ನೆರವು ಕುರಿತು ಈಗ ಅನುಸರಿಸಲಾಗುತ್ತಿರುವ ವ್ಯವಸ್ಥೆಯನ್ನು ಪರಿಶೀಲಿಸಲಿದೆ.

ವಿದ್ಯಾರ್ಥಿನಿ ಅತ್ಯಾಚಾರ ಪ್ರಕರಣ: ಮೂವರು ಆರೋಪಿಗಳ ಬಂಧನ

ವಾರಾಣಸಿ (ಉತ್ತರಪ್ರದೇಶ) (ಪಿಟಿಐ): ‘ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು) ಆವರಣದಲ್ಲಿರುವ ಐಐಟಿಯ ವಿದ್ಯಾರ್ಥಿನಿ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಲಂಕಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಭಾನುವಾರ ತಿಳಿಸಿದ್ದಾರೆ.

‘ಆರೋಪಿಗಳನ್ನು ಕುನಾಲ್ ಪಾಂಡೆ, ಆನಂದ್ ಅಲಿಯಾಸ್ ಅಭಿಷೇಕ್ ಚೌಹಾಣ್ ಹಾಗೂ ಸಕ್ಷಮ್ ಪಟೇಲ್ ಎಂದು ಗುರುತಿಸಲಾಗಿದೆ’ ಎಂದಿದ್ದಾರೆ.

ನವೆಂಬರ್ 1ರಂದು ಅತ್ಯಾಚಾರ ನಡೆದಿತ್ತು ಎಂದು ಹೇಳಲಾಗಿದೆ. ‘ತನ್ನ ಸ್ನೇಹಿತರೊಬ್ಬರೊಂದಿಗೆ ಹಾಸ್ಟೆಲ್‌ನಿಂದ ಆಚೆ ಹೋಗಿದ್ದಾಗ ಬೈಕ್‌ನಲ್ಲಿ ಮೂವರು ಆರೋಪಿಗಳು ಅವರ ಬಳಿ ಬಂದು, ಸ್ನೇಹಿತನಿಂದ ತನ್ನನ್ನು ಬೇರ್ಪಡಿಸಿ, ನಿರ್ಜನ ಪ್ರದೇಶಕ್ಕೆ ಕರೆದೊಯ್ದು ವಿವಸ್ತ್ರಗೊಳಿಸಿ ದೌರ್ಜನ್ಯ ಎಸಗಿದ್ದಾರೆ. ಬಳಿಕ ಫೋಟೊ ಹಾಗೂ ವಿಡಿಯೊ ತೆಗೆದುಕೊಂಡಿದ್ದಾರೆ’ ಎಂದು ವಿದ್ಯಾರ್ಥಿನಿ ನೀಡಿದ್ದ ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

‘ವಿದ್ಯಾರ್ಥಿನಿಯ ದೂರನ್ನು ಆಧರಿಸಿ ಐಪಿಸಿ ಸೆಕ್ಷನ್ 354ರ (ಮಾನಭಂಗ ಉದ್ದೇಶದಿಂದ ಮಹಿಳೆ ಮೇಲೆ ಬಲಪ್ರಯೋಗಿಸುವುದು) ಅಡಿಯಲ್ಲಿ ಲಂಕಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಬಳಿಕ, ಸಾಮೂಹಿಕ ಅತ್ಯಾಚಾರದ ಸೆಕ್ಷನ್ ಅನ್ನೂ ಪ್ರಕರಣದಲ್ಲಿ ಸೇರಿಸಲಾಗಿತ್ತು’ ಎಂದು ಪೊಲೀಸರು ಹೇಳಿದ್ದಾರೆ.



ಕೊನೆ ಆರತಿ... ವಾರಾಣಸಿಯ ದಶಾಶ್ವಮೇಧ ಘಾಟ್‌ನಲ್ಲಿ ಭಾನುವಾರ ನಡೆದ ವರ್ಷದ ಕೊನೆಯ ಆರತಿ ಕಾರ್ಯಕ್ರಮದಲ್ಲಿ ಜನರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಡಿಕೆಶಿ ಹೂಡಿಕೆ ವಿವರ ನೀಡಿ ಚಾನೆಲ್‌ಗೆ ಸಿಬಿಐ ನೋಟಿಸ್

ನವದೆಹಲಿ (ಪಿಟಿಐ): ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಚಾನೆಲ್‌ನಲ್ಲಿ ಮಾಡಿರುವ ಹೂಡಿಕೆಗಳ ವಿವರ ಒದಗಿಸಲು ಸೂಚಿಸಿ ಕೇರಳದ ‘ಜೈಹಿಂದ್’ ಚಾನಲ್‌ಗೆ ಸಿಬಿಐ ನೋಟಿಸ್ ಜಾರಿ ಮಾಡಿದೆ.

ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದಿಸಿದ ಪ್ರಕರಣದಲ್ಲಿ ನೋಟಿಸ್ ಜಾರಿಯಾಗಿದೆ. ಜ 11ರಂದು ವಿಚಾರಣೆಗೆ ಹಾಜರಾಗಿ ಎಂದು ಜೈಹಿಂದ್ ಕಮ್ಯುನಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ.

ಅಪರಾಧ ಪ್ರಕ್ರಿಯಾ ದಂಡ ಸಂಹಿತೆ ಸೆಕ್ಷನ್ 91ರ ಅನ್ವಯ ನೋಟಿಸ್ ನೀಡಿದೆ, ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಅವರು ಚಾನೆಲ್‌ನಲ್ಲಿ ಮಾಡಿರುವ ಹೂಡಿಕೆ, ಪ್ರತಿಯಾಗಿ ಪಡೆದಿರುವ ಲಾಭಾಂಶ, ಷೇರು ವಹಿವಾಟು, ಹೊಂದಿರುವ ಆಸ್ತಿಯ ವಿವರಗಳು, ಸಂಪರ್ಕದಲ್ಲಿದ್ದವರ ವಿವರಗಳನ್ನು ನೀಡಲು ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ದಾಖಲೆಗಳನ್ನು ಹಾಜರುಪಡಿಸುವಂತೆ ಸೂಚನೆ ನೀಡುವ ಅಧಿಕಾರವನ್ನು ತನಿಖಾಧಿಕಾರಿಗೆ ಸೆಕ್ಷನ್ 91 ನೀಡುತ್ತದೆ. ‘ಸಿಬಿಐನ ನೋಟಿಸ್ ತಲುಪಿದೆ. ಅದು ಬಯಸಿರುವ ಎಲ್ಲ ವಿವರಗಳನ್ನು ಒದಗಿಸಲಾಗುವುದು. ಎಲ್ಲ ದಾಖಲೆಗಳು ಇವೆ. ಯಾವುದೇ ಕಾನೂನುಬಾಹಿರ ವಹಿವಾಟುಗಳಿಲ್ಲ’ ಎಂದು ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಶಿಜು ಈ ಬಗ್ಗೆ ಪ್ರತಿಕ್ರಿಯಿಸಿದರು. ‘ಸಿಬಿಐಯ ಈ ಕ್ರಮ ಬಿಜೆಪಿಯ ದ್ವೇಷದ ರಾಜಕಾರಣಕ್ಕೆ ಸ್ಪಷ್ಟ ನಿದರ್ಶನ’ ಎಂದು ಟೀಕಿಸಿದರು.

ಶಿಜು, ಕರ್ನಾಟಕದ ಹಿಂದಿನ ಬಿಜೆಪಿ ಸರ್ಕಾರವೂ ತನಿಖೆ ನಡೆಸಿತ್ತು. ಅಕ್ರಮ ನಡೆದಿಲ್ಲದ ಕಾರಣ ತನಿಖೆಯನ್ನು ಅಂತಿಮಗೊಳಿಸಲಾಗಿತ್ತು ಎಂದು ಹೇಳಿದರು. ಈಗ, ಮತ್ತೆ ತನಿಖೆಯನ್ನು ಆರಂಭಿಸುವುದರ ಉದ್ದೇಶ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ‘ಕಿರುಕುಳ’ ನೀಡುವುದೇ ಆಗಿದೆ ಎಂದು ಹೇಳಿದರು.

ಡಿಕೆಶಿ ವಿರುದ್ಧ 2020ರಲ್ಲಿ ಸಿಬಿಐ ಪ್ರಕರಣ ದಾಖಲಿಸಿತ್ತು. 2013- 2018ರ ನಡುವೆ ₹ 74 ಕೋಟಿ ಮೊತ್ತದ ಆಸ್ತಿ ಗಳಿಸಿದ್ದು, ಇದು ಆದಾಯ ಮೀರಿದ್ದಾಗಿದೆ ಎಂದು ಸಿಬಿಐ ಪ್ರತಿಪಾದಿಸಿತ್ತು.

ಅಭ್ಯರ್ಥಿಗೆ ಸಚಿವ ಸ್ಥಾನ ಪ್ರಶ್ನಿಸಿ ಆಯೋಗಕ್ಕೆ ಕಾಂಗ್ರೆಸ್ ಪತ್ರ

ಪ್ರಜಾವಾಣಿ ವಾರ್ತೆ

ಜೈಪುರ: ಉಪ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿರುವ ಸುರೇಂದ್ರ ಪಾಲ್ ಸಿಂಗ್ ಟಿ.ಟಿ ಅವರನ್ನು ಉಪ ಚುನಾವಣೆಗೂ ಮುನ್ನ ರಾಜಸ್ಥಾನ ಸರ್ಕಾರದಲ್ಲಿ ಸಚಿವರನ್ನಾಗಿ ನೇಮಿಸಿರುವುದು ಮಾದರಿ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ ಎಂದು ಆರೋಪಿಸಿ ರಾಜ್ಯ ಕಾಂಗ್ರೆಸ್ ಘಟಕವು ಭಾನುವಾರ ಚುನಾವಣಾ ಆಯೋಗಕ್ಕೆ (ಇಸಿ) ಪತ್ರ ಬರೆದಿದೆ.

ಜನವರಿ 5ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಬಿಜೆಪಿ ಅಭ್ಯರ್ಥಿಯನ್ನು ಅನರ್ಹಗೊಳಿಸುವಂತೆಯೂ ಪತ್ರದಲ್ಲಿ ಕೋರಿದೆ.

ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ಡೊಟಸರಾ ಅವರು ಕೇಂದ್ರ ಚುನಾವಣಾ ಆಯೋಗ, ರಾಜ್ಯ ಚುನಾವಣಾ ಅಧಿಕಾರಿ ಮತ್ತು ಶ್ರೀಗಂಗಾನಗರದ ಜಿಲ್ಲಾ ಚುನಾವಣಾ ಅಧಿಕಾರಿಗೆ ಪತ್ರ ಬರೆದಿದ್ದಾರೆ. ಸುರೇಂದ್ರ ಪಾಲ್ ಸಿಂಗ್ ಅವರನ್ನು ಸಚಿವರಾಗಿ ನೇಮಿಸಿರುವುದು ಚುನಾವಣಾ ಕಾನೂನುಗಳು ಮತ್ತು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ; ವಿಶೇಷವಾಗಿ ಕಲಂ 32ರಲ್ಲಿ, ಚುನಾವಣೆಗಳನ್ನು ಘೋಷಿಸಿದ ಬಳಿಕ ತಾತ್ಕಾಲಿಕ ನೇಮಕಾತಿಗಳನ್ನು ಸರ್ಕಾರ ಮಾಡಬಾರದು ಎಂದು ಹೇಳಲಾಗಿದೆ. ಇಂತಹ ನೇಮಕವು ಮತದಾರರ ಮೇಲೆ ಪ್ರಭಾವ ಬೀರುತ್ತದೆ ಎನ್ನುವುದನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಶ್ರೀಗಂಗಾನಗರದ ಕರಣ್‌ಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸುರೇಂದ್ರ ಪಾಲ್ ಸಿಂಗ್ ಅವರನ್ನು ಭಜನ್‌ಲಾಲ್ ಶರ್ಮಾ ಅವರ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿ ಶನಿವಾರ ನೇಮಕ ಮಾಡಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಮತ್ತು ಹಾಲಿ ಶಾಸಕರಾಗಿದ್ದ ಗುರ್ಮೀತ್ ಸಿಂಗ್ ಕೂನರ್ ಅವರು ನವೆಂಬರ್ 15 ರಂದು ಮೃತಪಟ್ಟಿದ್ದರಿಂದ ಕರಣ್‌ಪುರ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು. ನವೆಂಬರ್ 25ರಂದು ರಾಜ್ಯದ ಉಳಿದ ಭಾಗಗಳ ಕ್ಷೇತ್ರಗಳ ಚುನಾವಣೆಯೊಂದಿಗೆ ಈ ಕ್ಷೇತ್ರಕ್ಕೆ ಚುನಾವಣೆ ನಡೆದಿರಲಿಲ್ಲ. ಕೂನರ್ ಅವರ ನಿಧನದಿಂದಾಗಿ ಈ ಕ್ಷೇತ್ರಕ್ಕೆ ಉಪ ಚುನಾವಣೆ ಎದುರಾಗಿದೆ.

ಬಿಜೆಪಿ ಸುಳ್ಳುಗಳು ಪ್ರಬಲ: ಖರ್ಗೆ

ನವದೆಹಲಿ (ಪಿಟಿಐ): ದೇಶದ ರೈತರ ಆದಾಯವನ್ನು 2022ರ ಹೊತ್ತಿಗೆ ದ್ವಿಗುಣಗೊಳಿಸುವುದಾಗಿ ವಾಗ್ದಾನ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಟೀಕಿಸಿದ್ದಾರೆ. ಜತೆಗೆ, ಬಿಜೆಪಿಯ ಸುಳ್ಳುಗಳು ಅತ್ಯಂತ ಪ್ರಬಲವಾಗಿವೆ ಎಂದು ಗೇಲಿ ಮಾಡಿದ್ದಾರೆ.

ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪೋಸ್ಟ್ ಪ್ರಕಟಿಸಿರುವ ಖರ್ಗೆ, ‘ನರೇಂದ್ರ ಮೋದಿ ಅವರೇ, ಇಂದು 2023ರ ಕೊನೇ ದಿನ. 2022ರ ಹೊತ್ತಿಗೆ ಪ್ರತಿ ರೈತನ ಆದಾಯ ದ್ವಿಗುಣವಾಗುವುದಾಗಿ ನೀವು ವಾಗ್ದಾನ ನೀಡಿದ್ದಿರಿ. ದೇಶದ ಪ್ರತಿಯೊಬ್ಬ ಪ್ರಜೆಯ ಮನೆಗೂ 24x7 ವಿದ್ಯುತ್ ನೀಡುವುದಾಗಿ ಹೇಳಿದ್ದಿರಿ. ದೇಶದ ಆರ್ಥಿಕತೆ 5 ಟ್ರಿಲಿಯನ್ ಡಾಲರ್‌ಗೆ ಏರುವುದಾಗಿ ಹೇಳಿದ್ದಿರಿ. ಇವು ಯಾವುವೂ ಆಗಲಿಲ್ಲ. ಬಿಜೆಪಿಯ ಸುಳ್ಳುಗಳು ಪ್ರಬಲವಾಗಿವೆ ಎಂದು ಈಗ ಪ್ರತಿಯೊಬ್ಬರಿಗೂ ಅರ್ಥವಾಗಿದೆ’ ಎಂದು ಅವರು ವ್ಯಂಗ್ಯವಾಡಿದ್ದಾರೆ.

ಉಲ್ಫಾ ಶಾಂತಿ ಒಪ್ಪಂದ ಟೀಕಿಸಿದ ಮತ್ತೊಂದು ಬಣ

ಗುವಾಹಟಿ (ಪಿಟಿಐ): ಉಲ್ಫಾ (ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ) ಸಂಘಟನೆಯ ಅರವಿಂದ ರಾಜಖೋವಾ ನೇತೃತ್ವದ ಬಣವು ಸರ್ಕಾರದ ಜೊತೆಗೆ ಮಾಡಿಕೊಂಡಿರುವ ತ್ರಿಪಕ್ಷೀಯ ಶಾಂತಿ ಒಪ್ಪಂದವನ್ನು ಸ್ವತಂತ್ರ ಬಣದ ನಾಯಕ ಪರೇಶ್ ಬರುವಾ ಭಾನುವಾರ ಟೀಕಿಸಿದ್ದಾರೆ.

ಕ್ರಾಂತಿಕಾರಿಗಳು ಗುರಿ ಮತ್ತು ಸಿದ್ಧಾಂತಗಳನ್ನು ತ್ಯಜಿಸಿದರೆ ರಾಜಕೀಯ ಪರಿಹಾರ ಸಿಗಲು ಸಾಧ್ಯವಿಲ್ಲ ಎಂದು ಬರುವಾ ಹೇಳಿದ್ದಾರೆ.


‘ಈ ಒಪ್ಪಂದ ನಮಗೆ ಅಚ್ಚರಿಯನ್ನಾಗಲಿ, ಆತಂಕ ಅಥವಾ ಆಕ್ರೋಶವನ್ನಾಗಲಿ ಉಂಟು ಮಾಡಿಲ್ಲ. ಆದರೆ, ನಾಚಿಕೆಯಾಗುವಂತೆ ಮಾಡಿದೆ. ಇಂತಹ ಒಪ್ಪಂದ ಆಗಬಹುದು ಎಂಬುದರ ಅರಿವು ನಮಗೆ ಇತ್ತು’ ಎಂದು ಬರುವಾ ಅವರು ಅಸ್ಸಾಂ ಸುದ್ದಿ ಮಾಧ್ಯಮ ‘ಪ್ರತಿದಿನ್ ಟೈಮ್’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸ್ವತಂತ್ರ ಬಣದೊಂದಿಗಿನ ಸಂಭಾವ್ಯ ಮಾತುಕತೆಗೆ ಸಂಬಂಧಿಸಿದಂತೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ನಡೆಸಿರುವ ಚರ್ಚೆಯ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಶರ್ಮಾ ನನ್ನ ಜೊತೆ ಮಾತನಾಡಿದ್ದಾರೆ. ಮಾತುಕತೆಗೆ ಅವರು ಒತ್ತಾಸೆಯಾಗಿದ್ದಾರೆ. ಸುಮ್ಮನೆ ಮಾತನಾಡುವುದು ನಮ್ಮ ಉದ್ದೇಶವಲ್ಲ. ನಾವು ರಾಜಕೀಯ ಪರಿಹಾರಕ್ಕೆ ಆಗ್ರಹಿಸಿದ್ದೇವೆ. ಈ ಗುರಿ ಅಚಲ. ನಾವು ರಾಜ್ಯದ ಜನರಿಗೆ ಮೋಸ ಮಾಡುವುದಿಲ್ಲ’ ಎಂದಿದ್ದಾರೆ.

ಹಿಂಸಾಚಾರವನ್ನು ತ್ಯಜಿಸಿ, ಪ್ರಜಾಪ್ರಭುತ್ವದ ಮುಖ್ಯವಾಹಿನಿ ಸೇರಲು ಸಮ್ಮತಿಸಿರುವ ನಿಷೇಧಿತ ಉಲ್ಫಾ (ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ) ಸಂಘಟನೆಯ ಅರವಿಂದ ರಾಜಖೋವಾ ನೇತೃತ್ವದ ಗುಂಪು, ಕೇಂದ್ರ ಮತ್ತು ಅಸ್ಸಾಂ ಸರ್ಕಾರದ ಜತೆ ಶಾಂತಿ ಒಪ್ಪಂದಕ್ಕೆ ಕಳೆದ ಶುಕ್ರವಾರ ಸಹಿ ಹಾಕಿದೆ.

ಹಿರಿಯ ನಟ, ತಬಲಾ ವಾದಕ ಜೊತೆ ಭಾಗವತ್ ಭೇಟಿ, ಚರ್ಚೆ

ಕೋಲ್ಕತ್ತ (ಪಿಟಿಐ): ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾನುವಾರ ಇಲ್ಲಿ ಹೆಸರಾಂತ ತಬಲಾ ವಾದಕ ವಿಕ್ರಂ ಘೋಷ್ ಮತ್ತು ಹಿರಿಯ ನಟ ವಿಕ್ಟರ್ ಬ್ಯಾನರ್ಜಿ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚಿಸಿದರು.



ಮೋಹನ್ ಭಾಗವತ್

ಘೋಷ್ ಅವರ ಇಲ್ಲಿನ ಸಾಲ್ಟ್ ಲೇಕ್ ನಿವಾಸಕ್ಕೆ ತೆರಳಿದ್ದ ಭಾಗವತ್ ಅವರು ಗೋಪ್ಯವಾಗಿ ಕೆಲಹೊತ್ತು ಮಾತುಕತೆ ನಡೆಸಿದರು.

‘ನನ್ನ ಹಾಗೂ ನನ್ನ ಗುರು ಪಂಡಿತ್ ಎಸ್.ಶೇಖರ್ ಜೀ (ಹೆಸರಾಂತ ಮೃದಂಗ ವಾದಕ), ಸಿತಾರ್ ವಾದಕ ಅಭಿಷೇಕ್ ಮಲ್ಲಿಕ್ ಅವರ ಕಲಾ ಪ್ರದರ್ಶನ ಆಲಿಸಿದರು. ಜೊತೆಗೆ ಊಟ ಮಾಡಿದರು’ ಎಂದು ಘೋಷ್ ಬಳಿಕ ತಿಳಿಸಿದರು. ನಂತರ ಭಾಗವತ್ ಅವರು ನಟ ವಿಕ್ಟರ್ ಬ್ಯಾನರ್ಜಿ ಅವರ ನಿವಾಸಕ್ಕೂ ತೆರಳಿ ಚರ್ಚಿಸಿದರು. ಬ್ಯಾನರ್ಜಿ ಅವರು 1991ರ ಲೋಕಸಭೆ ಚುನಾವಣೆಯಲ್ಲಿ ಕೋಲ್ಕತ್ತದ ನಾರ್ಥ್ ವೆಸ್ಟ್ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಪರಾಭವಗೊಂಡಿದ್ದರು.

ಭಾಗವತ್ ಅವರು, ಆಲ್ ಇಂಡಿಯಾ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ಅವರನ್ನು ಶನಿವಾರ ಭೇಟಿಯಾಗಿದ್ದರು. ಚೌಬೆ ಅವರು 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕೃಷ್ಣಾಂಗರ್ ಕ್ಷೇತ್ರದಿಂದ ಮಹುವಾ ಮೊಯಿತ್ರಾ ವಿರುದ್ಧ ಸ್ಪರ್ಧಿಸಿದ್ದರು.

ಮಹಾರಾಷ್ಟ್ರ: ಕಾರ್ಖಾನೆಯಲ್ಲಿ ಬೆಂಕಿ– 6 ಸಾವು

ಛತ್ರಪತಿ ಸಂಭಾಜಿನಗರ (ಪಿಟಿಐ): ‘ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರ ಜಿಲ್ಲೆಯ ಕೈಗವಸು ತಯಾರಿಕಾ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಆರು ಕಾರ್ಮಿಕರು ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಕಮಿಷನರ್ ಮನೋಜ್ ಲೋಹಿಯಾ ತಿಳಿಸಿದರು.

‘ವಾಲುಜ್ ಕೈಗಾರಿಕಾ ಪ್ರದೇಶದಲ್ಲಿರುವ ಕಾಟನ್ ಮತ್ತು ಚರ್ಮದ ಕೈಗವಸು ತಯಾರಿಕೆಯ ಸನ್‌ಶೈನ್ ಎಂಟರ್‌ಪ್ರೈಸಸ್ ಕಾರ್ಖಾನೆಯಲ್ಲಿ ಶನಿವಾರ ರಾತ್ರಿ 1 ಗಂಟೆಗೆ ಅವಘಡ ನಡೆದಿದೆ. ಘಟನಾ ಸ್ಥಳದ ಆವರಣದಲ್ಲಿ 13 ಮಂದಿ ಕಾರ್ಮಿಕರು ಮಲಗಿದ್ದರು. ಅವರಲ್ಲಿ ಏಳು ಮಂದಿ ತವರದ ಸೂರನ್ನು ಒಡೆದು ಆಚೆಗೆ ಬಂದಿದ್ದಾರೆ. ಅವರಿಗೆ ಗಾಯಗಳಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಅವರು ಹೇಳಿದರು.

‘ಸ್ಥಳಕ್ಕೆ ಅಗ್ನಿ ಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಬೆಂಕಿ ಅವಘಡಕ್ಕೆ ಕಾರಣವೇನು ಎಂಬುದರ ಕುರಿತು ಪ್ರಾಥಮಿಕ ತನಿಖೆ ನಡೆಸಲಾಗುತ್ತಿದೆ’ ಎಂದರು.

ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಸಂದೀಪನ್ ಭೂಮಾರೆ ಅವರು, ‘ಈ ಪ್ರದೇಶ ಕೇವಲ ಕೈಗಾರಿಕಾ ಬಳಕೆಯ ಉದ್ದೇಶಕ್ಕೆ ಮೀಸಲಾಗಿದೆ. ದುರದೃಷ್ಟವಶಾತ್ ಕಾರ್ಮಿಕರು ಕಾರ್ಖಾನೆಯಲ್ಲಿ ವಾಸಿಸುತ್ತಿದ್ದರು. ಅವಘಡಕ್ಕೆ ಕಾರಣವೇನೆಂಬುದನ್ನು ಪರಿಶೀಲಿಸಲು ಎಲೆಕ್ಟ್ರೀಷಿಯನ್‌ಗಳನ್ನು ಕರೆಸಲಾಗಿದೆ’ ಎಂದರು.

₹ 5 ಲಕ್ಷ ಪರಿಹಾರ: ಬೆಂಕಿ ಅವಘಡದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬದವರಿಗೆ ತಲಾ ₹ 5 ಲಕ್ಷ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಏಕನಾಥ ಶಿಂದೆ ಘೋಷಿಸಿದ್ದಾರೆ.

ಹೊಸ ವರ್ಷದ ನಿಮಿತ್ತ ವಿಡಿಯೊ ಹಂಚಿಕೊಂಡ ರಾಹುಲ್

ಆಹಾರ, ಅಭಿರುಚಿ: ಆಪ್ತ ಮಾತುಕತೆ

ನವದೆಹಲಿ (ಪಿಟಿಐ): ಪ್ರತಿ ಬಾರಿ ವಿದೇಶ ಪ್ರವಾಸ ಮುಗಿಸಿ ದೇಶಕ್ಕೆ ಮರಳಿದ ಬಳಿಕ, ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ತಿನ್ನಲು ಹೆಚ್ಚು ಹಂಬಲಿಸುವ ಆಹಾರವೆಂದರೆ ತೊಗರಿಬೇಳೆಯ ದಾಲ್ ಮತ್ತು ಅನ್ನ.

ಪುತ್ರ ರಾಹುಲ್ ಗಾಂಧಿ ಅವರ ಯೂಟ್ಯೂಬ್ ಚಾನಲ್‌ನಲ್ಲಿ ಹೊಸ ವರ್ಷದ ನಿಮಿತ್ತ ಹಂಚಿಕೊಂಡಿರುವ ವಿಡಿಯೊದಲ್ಲಿ ಸ್ವತಃ ಸೋನಿಯಾಗಾಂಧಿ ಅವರೇ ತಮ್ಮ ಆಹಾರದ ಆದ್ಯತೆಯನ್ನು ಹಂಚಿಕೊಂಡಿದ್ದಾರೆ.

ಪುತ್ರಿ ಪ್ರಿಯಾಂಕಾ ಗಾಂಧಿ ಅವರ ಪಾಕವಿಧಾನವನ್ನು ಅನುಸರಿಸಿ, ಪುತ್ರನ ಜೊತೆಗೂಡಿ ಸೋನಿಯಾಗಾಂಧಿ ಅವರು ಕಿತ್ತಳೆಯ ಜಾಮ್ ಸಿದ್ಧಪಡಿಸುವ ದೃಶ್ಯಗಳು ವಿಡಿಯೊದಲ್ಲಿವೆ.

‘ಮಮ್: ಮೆಮೊರೀಸ್ ಅಂಡ್ ಮಾರ್ಮಲೇಡ್’ ಶೀರ್ಷಿಕೆಯ, ತಾಯಿ–ಪುತ್ರರಿರುವ ಐದು ನಿಮಿಷದ ಈ ವಿಡಿಯೊದಲ್ಲಿ ಇಬ್ಬರೂ ಆಹಾರ ಕುರಿತಂತೆ ಆಪ್ತ ಮಾತುಕತೆ ನಡೆಸಿದ್ದಾರೆ.



ತಾಯಿ ಸೋನಿಯಾ ಗಾಂಧಿ ಜತೆ ಆಹಾರ ಸಿದ್ಧಪಡಿಸಿದ ರಾಹುಲ್

ರಾಹುಲ್ ಗಾಂಧಿ ಒಂದೆಡೆ, ‘ಅಕಸ್ಮಾತ್, ಬಿಜೆಪಿಯವರು ಬಯಸಿದರೆ ಈ ಜಾಮ್ ತೆಗೆದುಕೊಳ್ಳಬಹುದಲ್ಲವೇ? ಏನಂತೀರಾ ಅಮ್ಮ’ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ‘ಅವರಿದನ್ನು ನಮ್ಮ ಮೇಲೇ ಎಸೆಯುತ್ತಾರೆ’ ಎಂದು ಸೋನಿಯಾ ಉತ್ತರಿಸುತ್ತಾರೆ. ಈ ಮಾತಿಗೆ ನಕ್ಕ ರಾಹುಲ್, ‘ಹಾಗಿದ್ದರೆ ಒಳ್ಳೆಯದು. ನಾವು ಮತ್ತೆ ಎತ್ತಿಕೊಳ್ಳಬಹುದು’ ಎನ್ನುತ್ತಾರೆ.

‘ಜಾಮ್ ಸಿದ್ಧಪಡಿಸಲು ಕಿತ್ತಳೆ ಹಣ್ಣು ಸುಲಿಯುತ್ತಲೇ, ಇದು ತಂಗಿ ಪ್ರಿಯಾಂಕಾ ಪಾಕ ವಿಧಾನ (ರೆಸಿಪಿ). ಅದನ್ನು ಆಕೆಯೇ ರೂಪಿಸಿ, ಇನ್ನಷ್ಟು ಉತ್ತಮಪಡಿಸಿದ್ದಾಳೆ. ಅದರ ಆಧಾರದಲ್ಲಿ ನಾನು ಸಿದ್ಧಪಡಿಸುತ್ತಿದ್ದೇನೆ’ ಎನ್ನುತ್ತಾರೆ ರಾಹುಲ್.

ವಿಡಿಯೊದಲ್ಲಿ ರಾಹುಲ್‌ಗಾಂಧಿ ಅವರ ಸ್ವಭಾವ ಉಲ್ಲೇಖಿಸುತ್ತಾ, ‘ಅವನದು ಹಟಮಾರಿ ಸ್ವಭಾವ. ನಾನು ಕೂಡಾ. ಇಬ್ಬರೂ. ನಿಮಗೆ ಅರ್ಥವಾಗಬಹುದಲ್ಲವೇ ಎಂದು ಸೋನಿಯಾ ಹೇಳುತ್ತಾರೆ. ಅವನಲ್ಲಿ ನಾನು ಇಷ್ಟ ಪಡುವ ಸ್ವಭಾವವೆಂದರೆ, ಆತ ತುಂಬಾ ಕಾಳಜಿ ಮಾಡುತ್ತಾನೆ. ಆರೈಕೆ ಮಾಡುತ್ತಾನೆ. ಮುಖ್ಯವಾಗಿ ಅನಾರೋಗ್ಯವಿದ್ದಾಗ. ರಾಹುಲ್ ಮತ್ತು ಪ್ರಿಯಾಂಕಾ ಇಬ್ಬರೂ ಚೆನ್ನಾಗಿ ನೋಡಿಕೊಳ್ಳುತ್ತಾರೆ’ ಎಂದು ಸೋನಿಯಾ ಗಾಂಧಿ ಅವರು ಮೆಚ್ಚುಗೆ ಸೂಚಿಸುತ್ತಾರೆ.

ಸೋನಿಯಾ ಅವರು ತಮಗೆ ಇಷ್ಟವಾಗುವ ಹಾಗೂ ಇಷ್ಟವಾಗದ ಆಹಾರಗಳ ಕುರಿತು ಮಾತನಾಡುತ್ತಾರೆ. ಒಂದು ಹಂತದಲ್ಲಿ ‘ಆಹಾರ ಮತ್ತು ಪೌಷ್ಟಿಕತೆ ಕುರಿತು ಮಹಾತ್ಮಗಾಂಧಿ ಅವರಿಗೆ ಸ್ಪಷ್ಟ ಚಿಂತನೆ ಇತ್ತು’ ಎಂದು ರಾಹುಲ್ ಹೇಳುತ್ತಾರೆ.

ಕಿತ್ತಳೆಯ ಜಾಮ್ ಸಿದ್ಧವಾಗುವ ಮೂಲಕ ಈ ವಿಡಿಯೊ ಅಂತ್ಯವಾಗುತ್ತದೆ.

ರಾಹುಲ್‌ರನ್ನು ಪ್ರಮುಖವಾಗಿ ಬಿಂಬಿಸಬೇಡಿ: ಸಂಸದ

ಭೋಪಾಲ್ (ಮಧ್ಯಪ್ರದೇಶ) (ಪಿಟಿಐ): ‘ರಾಹುಲ್ ಗಾಂಧಿ ಅವರು ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತ ಮತ್ತು ಸಂಸದ. ಅವರನ್ನು ಪ್ರಮುಖವಾಗಿ ಬಿಂಬಿಸಬಾರದು’ ಎಂದು ಕಾಂಗ್ರೆಸ್‌ನ ಮಾಜಿ ಸಂಸದ ಲಕ್ಷ್ಮಣ್ ಸಿಂಗ್ ಹೇಳಿದ್ದಾರೆ.

ಗುನಾ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಚರ್ಚಿಸುವ ವೇಳೆ ಅವರು ಈ ಹೇಳಿಕೆ ನೀಡಿದ್ದಾರೆ.

‘ರಾಹುಲ್ ಗಾಂಧಿ ಲೋಕಸಭೆಯಲ್ಲಿ ಹೇಳಿಕೆ ನೀಡುವಾಗ ಟಿ.ವಿ.ಯಲ್ಲಿ ಅವರ ಮುಖವನ್ನು ತೋರಿಸುವುದು ಕಡಿಮೆ’ ಎಂಬ ಸುದ್ದಿಗಾರರ ಹೇಳಿಕೆಗೆ ಪ್ರತಿಕ್ರಿಯಿಸಿದ ಲಕ್ಷ್ಮಣ್ ಅವರು, ‘ರಾಹುಲ್ ಅವರು ಪಕ್ಷದ ಅಧ್ಯಕ್ಷರಲ್ಲ. ಒಬ್ಬ ಸಾಮಾನ್ಯ ಕಾರ್ಯಕರ್ತ. ಇದೊಂದನ್ನು ಬಿಟ್ಟು ಅವರು ಬೇರೇನೂ ಅಲ್ಲ’ ಎಂದಿದ್ದಾರೆ.

‘ಹುಟ್ಟಿನಿಂದ ಯಾರೊಬ್ಬರೂ ದೊಡ್ಡ ಮನುಷ್ಯರಾಗುವುದಿಲ್ಲ. ಆದರೆ ಅವರ ಕಾರ್ಯಗಳು ಅವರನ್ನು ದೊಡ್ಡ ಮನುಷ್ಯರನ್ನಾಗಿ ಮಾಡುತ್ತವೆ. ರಾಹುಲ್ ಅವರು ದೊಡ್ಡ ನಾಯಕ ಎಂದು ಪರಿಗಣಿಸಬೇಡಿ. ನಾನಂತೂ ಹಾಗೆ ಅಂದುಕೊಂಡಿಲ್ಲ. ಅವರು ಪಕ್ಷದ ಉಳಿದ ಸಂಸದರಿಗೆ ಸಮಾನರು’ ಎಂದಿದ್ದಾರೆ. ಲಕ್ಷ್ಮಣ್ ಅವರು ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರ ತಮ್ಮ.

ತೆಹ್ರೀಕ್ ಎ ಹುರಿಯತ್‌ಗೆ ಐದು ವರ್ಷಗಳ ನಿಷೇಧ

ನವದೆಹಲಿ (ಪಿಟಿಐ): ಪಾಕಿಸ್ತಾನ ಪರ ಪ್ರತ್ಯೇಕತಾವಾದಿ ಸಂಘಟನೆ ‘ತೆಹ್ರೀಕ್ ಎ ಹುರಿಯತ್’ (ಟಿಇಎಚ್) ಅನ್ನು ಐದು ವರ್ಷಗಳಿಗೆ ನಿಷೇಧಿಸಿರುವುದಾಗಿ ಕೇಂದ್ರ ಸರ್ಕಾರ ಭಾನುವಾರ ಘೋಷಿಸಿದೆ.

ಪ್ರತ್ಯೇಕತಾವಾದಿ ನಾಯಕ ಸೈಯದ್ ಅಲಿ ಶಾ ಗಿಲಾನಿ 2004ರಲ್ಲಿ ಈ ಸಂಘಟನೆಯನ್ನು ಸ್ಥಾಪನೆ ಮಾಡಿದ್ದರು. ಈ ಸಂಘಟನೆಯನ್ನು ನಿಷೇಧಿಸಿರುವುದಾಗಿ ಗೃಹ ಸಚಿವ ಅಮಿತ್ ಶಾ ಅವರು ಸಾಮಾಜಿಕ ಮಾಧ್ಯಮ ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತ ವಿರೋಧಿ ಭಾವನೆ ಕೆರಳಿಸಿ ಭಯೋತ್ಪಾದನೆ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದ ಕಾರಣದಿಂದ ತೆಹ್ರೀಕ್ ಎ ಹುರಿಯತ್ ಅನ್ನು ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆಯಡಿ ನಿಷೇಧಿಸಲಾಗಿದೆ ಎಂದು ಶಾ ತಿಳಿಸಿದ್ದಾರೆ.

ಮೀರ್ವೈಜ್ ಉಮರ್ ಫಾರೂಕ್ ನೇತೃತ್ವದ ಹುರಿಯತ್ ಬಣದಿಂದ ಹೊರಬಿದ್ದ ಬಳಿಕ 2004ರಲ್ಲಿ ಗಿಲಾನಿ ಈ ಸಂಘಟನೆಯನ್ನು ಸ್ಥಾಪಿಸಿದ್ದರು. ಇದರ ಹಲವು ಪದಾಧಿಕಾರಿಗಳ ವಿರುದ್ಧ ಕಾಶ್ಮೀರದಲ್ಲಿ ಭಯೋತ್ಪಾದನೆ ಚಟುವಟಿಕೆಗೆ ಉತ್ತೇಜನ ನೀಡಲು ಹಣಕಾಸು ಸಂಗ್ರಹಿಸಿದ ಆರೋಪ ಕುರಿತಂತೆ ಎನ್‌ಐಎ ಪ್ರಕರಣ ದಾಖಲಿಸಿದೆ.

ಉಗ್ರ ಪಟ್ಟಿಗೆ ಲಂಡಾ

ನವದೆಹಲಿ (ಪಿಟಿಐ): ನಿಷೇಧಿತ ‘ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್’ ಸಂಘಟನೆಯಲ್ಲಿ ಸಕ್ರಿಯನಾಗಿರುವ, ಕೆನಡಾದಲ್ಲಿ ನೆಲೆಸಿರುವ ಲಖ್ಬೀರ್ ಸಿಂಗ್ ಅಲಿಯಾಸ್ ಲಂಡಾನನ್ನು ಕೇಂದ್ರ ಸರ್ಕಾರವು ಭಾನುವಾರ ಭಯೋತ್ಪಾದಕ ಎಂದು ಘೋಷಿಸಿದೆ.

ಪಂಜಾಬ್ ಪೊಲೀಸ್ ಇಲಾಖೆ ಗುಪ್ತಚರ ಶಾಖೆ ಕಚೇರಿ ಮೇಲೆ 2022ರ ಮೇ ತಿಂಗಳಲ್ಲಿ ನಡೆದಿದ್ದ ರಾಕೆಟ್ ಗ್ರೆನೇಡ್ ದಾಳಿಯಲ್ಲಿ ಸಿಂಗ್ ಭಾಗಿಯಾಗಿದ್ದ. ಜೊತೆಗೆ, ದೇಶದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸಲು ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ಪೂರೈಕೆ ಮಾಡಿದ್ದ ಆರೋಪ ಹೊತ್ತಿದ್ದಾನೆ.

ಪಂಜಾಬ್‌ನ ತರ್ನ್ ತಾರನ್ ಜಿಲ್ಲೆಯ ಹರಿಕೆ ಮೂಲದ ಸಿಂಗ್, ಪ್ರಸ್ತುತ ಕೆನಡಾದ ಆಲ್ಬರ್ಟಾದ ಎಡ್ಮಂಟನ್‌ನಲ್ಲಿ ನೆಲೆಸಿದ್ದಾನೆ.

ಭಯೋತ್ಪಾದನಾ ಗುಂಪು ಸಂಘಟನೆ, ಸುಲಿಗೆ, ಹತ್ಯೆ, ಸ್ಫೋಟಕ ಪೂರೈಕೆ, ಶಸ್ತ್ರಾಸ್ತ್ರಗಳು ಮತ್ತು ಮಾದಕವಸ್ತುಗಳ ಕಳ್ಳಸಾಗಣೆ, ಪಂಜಾಬ್ ಮತ್ತು ದೇಶದ ಇತರ ಭಾಗಗಳಲ್ಲಿ ಭಯೋತ್ಪಾದಕ ಕೃತ್ಯಗಳಿಗೆ ಹಣದ ನೆರವು ಸೇರಿದಂತೆ ವಿವಿಧ ಕ್ರಿಮಿನಲ್ ಪ್ರಕರಣಗಳಲ್ಲಿ ಆತ ಭಾಗಿಯಾಗಿದ್ದ ಎನ್ನಲಾಗಿದೆ.

ಸಿಂಗ್ ಮತ್ತು ಆತನ ಸಹಚರರು ಪಂಜಾಬ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಹತ್ಯೆ, ಸುಲಿಗೆಗಳು ಮತ್ತು ಇತರ ದೇಶವಿರೋಧಿ ಚಟುವಟಿಕೆಗಳನ್ನು ನಡೆಸುವ ಮೂಲಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಹಾಳುಮಾಡಲು ಪಿತೂರಿ ನಡೆಸುತ್ತಿದ್ದಾರೆ ಎಂದು ಸರ್ಕಾರ ಹೇಳಿದೆ. ಈತನ ಪತ್ತೆಗಾಗಿ ವಾರಂಟ್, ಲುಕ್‌ಔಟ್ ನೋಟಿಸ್ ಹೊರಡಿಸಲಾಗಿತ್ತು.





ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) *ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?*

(A) 1, – 1, – 2, ... (B) 1, 5, 9, ...
(C) 2, – 2, 2, – 2, ... (D) 1, 2, 4, 8, ...

ಉತ್ತರ:– (ಬಿ) 1, 5, 9 (ಮಾರ್ಚ್ 2021)

2) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ (ಮಾರ್ಚ್ 2021)

(A) 7 (B) 2 7
(C) – 7 (D) 2

ಉತ್ತರ:– (ಸಿ) – 7

3) $a_1x + b_1y+C_1=0$ ಹಾಗೂ $a_2x + b_2y+C_2=0$ ರೂಪದ ರೇಖಾತ್ಮಕ ಸಮೀಕರಣಗಳಿಗೆ ಎಳೆದ ರೇಖೆಗಳು ಪರಸ್ಪರ ಐಕ್ಯಗೊಂಡರೆ ಕೆಳಗಿನವುಗಳಲ್ಲಿ ಸರಿಯಾದ ಸಂಬಂಧವು

(A) $\frac{a_1}{a_2} = \frac{b_1}{b_2} = \frac{c_1}{c_2}$ (B) $\frac{a_1}{a_2} \neq \frac{b_1}{b_2} \neq \frac{c_1}{c_2}$

(C) $\frac{a_1}{a_2} = \frac{b_1}{b_2} \neq \frac{c_1}{c_2}$ (D) $\frac{a_1}{a_2} \neq \frac{b_1}{b_2} = \frac{c_1}{c_2}$

ಉತ್ತರ:– (ಜೂನ್– 2019)

(A) $\frac{a_1}{a_2} = \frac{b_1}{b_2} = \frac{c_1}{c_2}$

4) 3, 8, 13, 18...ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

(A) 20 (B) 2 7
(C) 16 (D) 28

ಉತ್ತರ:– (ಸಿ) 16

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18……

ಇಲ್ಲಿ a=3 d=8-3=5 n^{th} ಪದ =78

Then
$$a_n = a + (n-1)d$$
$$78 = 3 + (n-1)(5)$$
$$5(n-1) = 78 - 3$$
$$5(n-1) = 75$$
$$n - 1 = \frac{75}{5}$$
$$n - 1 = 15$$
$$n = 15 + 1$$
$$n = 16$$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ

5) ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ. ನಾವು ಆ ಪೂರ್ಣಾಂಕಗಳನ್ನು ಕಂಡುಹಿಡಿಯಬೇಕಾಗಿದೆ.

ಈ ಸನ್ನಿವೇಶದ ವರ್ಗ ಸಮೀಕರಣಗಳ ರೂಪ ಯಾವುದು?

(A) $3x^2 + 2x - 306 = 0$
(B) $6x^2 + 9x - 706 = 0$
(C) $2x^2 + x - 360 = 0$
(D) $x^2 + x - 306 = 0$

ಉತ್ತರ:– (D) $x^2 + x - 306 = 0$

ಪರಿಹಾರ:– ಎರಡು ಅನುಕ್ರಮ ಧನ ಪೂರ್ಣಾಂಕಗಳು x ಮತ್ತು $x+1$ ಆಗಿರಲಿ

ಎರಡು ಅನುಕ್ರಮ ಧನಪೂರ್ಣಾಂಕಗಳ ಗುಣಲಬ್ಧವು $= x(x+1)$ ಆಗಿರಲಿ

ನೀಡಿರುವ ಸಮಸ್ಯೆಯ ಪ್ರಕಾರ
$$(x + 1) = 306$$
$$x^2 + x - 306 = 0$$

ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧವು 306 ಆಗಿದೆ.

ನಾವು ಆ ಪೂರ್ಣಾಂಕಗಳನ್ನು ಕಂಡು ಹಿಡಿಯಬೇಕಾದಾಗ ಬಳಸಬಹುದಾದ ವರ್ಗ ಸಮೀಕರಣ $x^2 + x - 306 = 0$

6) ಆಯತಾಕಾರದ ಒಂದು ಭೂಮಿಯ ಉದ್ದ ಮತ್ತು ಅಗಲ ಕ್ರಮವಾಗಿ 110ಮೀ ಮತ್ತು 30ಮೀ ಇದೆ. ಉದ್ದ ಮತ್ತು ಅಗಲಗಳೆರಡನ್ನೂ ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯ ಉದ್ದ ಎಷ್ಟು?

(A) 10 ಮೀ (B) 22 ಮೀ
(C) 17 ಮೀ (D) 18 ಮೀ

ಉತ್ತರ:–(ಎ) 10 ಮೀ

ಪರಿಹಾರ:– 110 ಮತ್ತು 30ನ್ನು ಅವಿಭಾಜ್ಯ ಅಪವರ್ತನಗಳಾಗಿ ಬರೆದಾಗ 110 = 2 x 5 x 11;

30 = 2 x 3 x 5

ಮ.ಸಾ.ಅ. (110, 30) = 2 x 5 = 10

∴ ಉದ್ದ ಮತ್ತು ಅಗಲ ಎರಡನ್ನು ನಿಖರವಾಗಿ ಅಳತೆ ಮಾಡುವ ಗರಿಷ್ಠ ಉದ್ದದ ಸಲಾಕೆಯು 10 ಮೀ.

7) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ ....

(A) $-\frac{5}{6}$ (B) $\frac{5}{6}$
(C) $-\frac{1}{6}$ (D) $\frac{1}{6}$

ಉತ್ತರ: (D)

8) ಯೂಕ್ಲಿಡ್‌ನ ಭಾಗಾಕಾರ ಸಿದ್ಧಾಂತ ಪ್ರತಿಜ್ಞೆಯನ್ನು ಉಪಯೋಗಿಸಿ, ಯಾವುದೇ ಧನಸಂಖ್ಯೆಯ ವರ್ಗವು 3m ಅಥವಾ 3m + 1 ರೂಪದಲ್ಲಿರುತ್ತದೆಂದು ಮತ್ತು 3m + 2 ರೂಪದಲ್ಲಿರುವುದಿಲ್ಲ ಎಂದು ತೋರಿಸಿ. ಇಲ್ಲಿ m ಒಂದು ಪೂರ್ಣಾಂಕ.

ಪರಿಹಾರ:–'a'ಯು ಒಂದು ಧನಪೂರ್ಣಾಂಕವಾರಲಿ. ಆಗ ಅದು 3q (or) 3q+1 (or) 3q+2 ರೂಪದಲ್ಲಿರುತ್ತದೆ.

ಆಗ ಈ ಪ್ರಕಾರದಲ್ಲಿರಬಹುದು

ಪ್ರಕಾರ 1: a = 3q ಆದಾಗ,

$a^2 = (3q)^2 = 9q^2 = 3q(3q) = 3m$ ಇಲ್ಲಿ $m = 3q^2$

ಪ್ರಕಾರ 2 : a = 3q + 1 ಆದಾಗ

$\Rightarrow a^2 = (3q+1)^2 = (3q)^2 + 2(3q)(1) + (1)^2 = 3q(3q+2) + 1$
$= 3m + 1$ ಇಲ್ಲಿ $m = q(3q+2)$

ಪ್ರಕಾರ 3: a = 3q + 2 ಆದಾಗ

$\Rightarrow a^2 = (3q+2)^2 = (3q)^2 + 2(3q)(2) + (2)^2$
$= 9q^2 + 12q + 4 = 9q^2 + 12q + 3 + 1$
$= 3(3q^2 + 4q + 1) + 1$
$= 3m + 1$ ಇಲ್ಲಿ $m = 3q^2 + 4q + 1$

ಆದ್ದರಿಂದ 'a' ಯು 3m ಅಥವಾ 3m+1 ಆಗಿದೆ.

9) ಒಂದು ನಾಣ್ಯವನ್ನು ಎರಡು ಬಾರಿ ಚಿಮ್ಮಿದಾಗ, ಕೆಳಗಿನ ಘಟನೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(i) ಎರಡು ಶಿರಗಳು (ii) ಕನಿಷ್ಠ ಒಂದು ಶಿರ
(iii) ಶಿರ ಇಲ್ಲದಂತೆ (iv) ನಿರ್ದಿಷ್ಟವಾಗಿ ಒಂದು ಪುಚ್ಛ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CHEMISTRY

MODEL QUESTIONS

Multipale Choice Questions


1) Which of the following medications is not classified according to the pharmacological effect criteria?

a) Analgesics b) Antiseptics
c) Antihistamines d) Antipyretics

Ans: c

Expln: The pharmacological effects of medications are a group of drugs that all have the same effect on a specific sort of problem. Analgesics relieve pain, antiseptics inhibit the spread of bacteria, and antipyretics aid to reduce body temperature during a fever.


2)



The IUPAC name of 'B' is

(a) 3-methylbutan-2-ol (b) 2-methylbutan-3-ol
(c) 2-methylbutan-2-ol (d) pentan-2-ol.

Soln:(a):



3) Any substance made up of multiple repeating units called polymers is referred to as a polymer.

a) Mers b) Plastic
c) Resins d) Blocks

Ans:- a

Expln: Any substance made up of multiple repeating units, known as mers, is referred to as a polymer. Polymers are made up of a large number of molecules connected together to form long chains.

4) The sharp melting point of crystalline solids is due to ....

a) a regular arrangement of constituent particles observed over a short distance in the crystal lattice.
b) a regular arrangement of constituent particles observed over a long distance in the crystal lattice.
c) Same arrangement of constituent particles in different directions.
d) different arrangement of constituent particles in different directions.

Ans:-C

5) A disaccharide is formed when two monosaccharides are bonded together by a bond.

a) glycosidic b) peptide
c) ionic d) phosphodiester

Ans: a

Expln: When two monosaccharide units come together, they lose a molecule of water and an oxide bond. The glycosidic linkage is a bond formed by an oxygen atom between two monosaccharide molecules

6) Which of the following is true about the value of refractive index of quartz glass?

a) Same in all directions
b) Different in different directions
c) Cannot be measured d) Always zero

Ans:-a

7) Which of the reactions below can result in ketones?

a) Oxidation of primary alcohols
b) Oxidation of secondary alcohols
c) Dehydrogenation of tertiary alcohols
d) Dehydrogenation of primary alcohols

Ans: b

Expln: Ketones are formed when secondary alcohols are oxidised and dehydrogenated. Aldehydes are produced by the same processes with primary alcohols.

8) Which of the following conditions favours the existence of a substance in the solid state?

a) High temperature b) Low temperature
c) High thermal energy d) weak cohesive forces

Ans:-b

9) Which of the reactions below can result in ketones?

a) Oxidation of primary alcohols
b) Oxidation of secondary alcohols
c) Dehydrogenation of tertiary alcohols
d) Dehydrogenation of primary alcohols

Ans: b

Expln: Ketones are formed when secondary alcohols are oxidised and dehydrogenated. Aldehydes are produced by the same processes with primary alcohols.

10) Which of the following is *not* a characteristic of a crystalline solid?

a) Definite and characteristic heat of fusion.
b) Isotropic nature.
c) A regular periodically repeated pattern of arrangement of constituent particles in the entire crystal.
d) A true solid.

Ans:- b

Fill in the blank

1) Graphite cannot be classified as …… solid.

Ans:- ionic

2) Iodine molecules are held in the crystal lattice by ………

Ans:- London forces

3) Cations are present in the interstitial sites in ………

Ans:- Frenkel defect

4) The total number of tetrahedral voids in the face centred unit cell is ……………..

Ans:- 8

5) The percentage of empty space in a body centered cubic arrangement is ……………

Ans:- 32

6) Silicon doped with election-rich impurity forms………….

Ans:- n-type semiconductor

ಸೋಲುವ ಭಯವೇ?

ಡಾ.ವಿರೂಪಾಕ್ಷ ದೇವರಮನಿ

ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ ಜನರ ದೃಷ್ಟಿಯಲ್ಲಿ ದೊಡ್ಡಮಟ್ಟದ ಯಶಸ್ಸನ್ನು ಗಳಿಸಿದವರೆಲ್ಲ ಹೆಚ್ಚು ಅಂಕ ಪಡೆದವರಲ್ಲ. ಈ ಸಾಂಪ್ರದಾಯಿಕ ಕಲಿಕೆಯಲ್ಲಿ ಮಿನುಗಲಿಲ್ಲ. ಆದರೆ, ತಮ್ಮದೇ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಯಶಸ್ಸು ಕಾಣಲು ಸಾಧ್ಯವಾಯಿತು.

ಇಂದಿಗೂ ಭೌತವಿಜ್ಞಾನದ ದಿಗ್ಗಜ, ಐನ್‌ಸ್ಟೀನ್ ಶಾಲಾ ದಿನಗಳಲ್ಲಿ ಬುದ್ಧಿವಂತರಾಗಿರಲಿಲ್ಲ. ಓದಿನಲ್ಲಿರಲಿ ಆರಂಭದ ನಾಲ್ಕು ವರ್ಷಗಳಲ್ಲಿ ಮಾತೇ ಆಡುತ್ತಿರಲಿಲ್ಲವಂತೆ. ಏಳನೇ ತರಗತಿಯವರೆಗೆ ಸಾಮಾನ್ಯರಲ್ಲಿ ಸಾಮಾನ್ಯ ವಿದ್ಯಾರ್ಥಿ. ಓದು ಮುಗಿಸಿ ಶಿಕ್ಷಕ ವೃತ್ತಿಗೆ ಸೇರಲು ಹೋಗುವಾಗ ಅವರ ಮೇಲೆ ನಂಬಿಕೆಯಿರದ ಶಿಕ್ಷಕರು ಶಿಫಾರಸು ಮಾಡಲು ಹಿಂಜರಿದಿದ್ದರಂತೆ.

ಆ್ಯಪಲ್ ಸಿಇಓ ಸ್ಟೀವ್ ಜಾಬ್ಸ್ ಕಥೆ ಇನ್ನೂ ರೋಚಕ. ಜನ್ಮ ನೀಡಿದ ಹೆತ್ತವರಿಂದ ದೂರವಾಗಿ ದತ್ತು ತೆಗೆದುಕೊಂಡ ಪಾಲಕರೊಡನೆ ಬೆಳೆದ ಜಾಬ್ಸ್ ಓದಿನಲ್ಲಿ ಬುದ್ಧಿವಂತರಾಗಿರಲಿಲ್ಲ. ಕಲಿಯಲು ಅಸಾಧ್ಯವೆನಿಸಿ ಶಾಲೆ ಬದಲಿಸಿದರು. ಹೊಸ ಶಾಲೆಯಲ್ಲಿ ಸ್ನೇಹಿತರಿಲ್ಲದೆ ಒಂಟಿತನ ಅನುಭವಿಸಿದರಯ. ಬದುಕಿಗಾಗಿ ಮೆಕಾನಿಕ್, ಕೋಸ್ಟ್ ಗಾರ್ಡ್, ಕಾರ್ ಸೇಲ್ಸ್ ಮ್ಯಾನ್ ಇನ್ನಿತರ ಕೆಲಸಗಳನ್ನು ಮಾಡಿದರು. ಹೆತ್ತವರ ಪ್ರೀತಿ ಶಾಲಾ ಶಿಕ್ಷಕಿಯ ಮಾರ್ಗದರ್ಶನ, ಮಡದಿಯ ಸಾಂಗತ್ಯ ಆತನನ್ನು ಯಶಸ್ಸಿನ ದಡ ಮುಟ್ಟುವವರೆಗೆ ಕಾಪಾಡಿದ ದೋಣಿಗಳು.

ಬರ್ಕ್ ಶೈನ್ ನಲ್ಲಿ ತಾನು ಕಲಿಯುತ್ತಿದ್ದ ಸೇಂಟ್ ಜಾರ್ಜ್ ಸ್ಕೂಲ್‌ನಲ್ಲಿ ದಡ್ಡ ಎನಿಸಿಕೊಂಡು, ಶಿಕ್ಷೆ ಪಡೆದ ವಿದ್ಯಾರ್ಥಿ ಆ ದೇಶದ ಪ್ರಧಾನಿ ಎಂದರೆ ನೀವು ನಂಬುತ್ತೀರಾ? ಎರಡು ಬಾರಿ ಯುನೈಟೆಡ್ ಕಿಂಗ್ ಡಮ್‌ನ ಪ್ರಧಾನಿಯಾಗಿದ್ದ ಮಹಾಯುದ್ಧದ ಸಮಯದಲ್ಲಿ ಸಮರ್ಥವಾಗಿ ಅಧಿಕಾರ ನಡೆಸಿದ ವಿನ್ ಸ್ಟನ್ ಚರ್ಚಿಲ್ ಕಥೆಯಿದು. ಅವರ ತಪ್ಪುಗಳನ್ನೇ ಗುರುತಿಸಿ, ಎತ್ತಿ ತೋರಿಸಿದ ಶಾಲೆಯನ್ನು, ತನ್ನ ವೈಫಲ್ಯಕ್ಕೆ ಕಾರಣವಾದ ಬಾಲ್ಯದ ಶಿಕ್ಷಣವನ್ನು ದ್ವೇಷಿಸಿದ. ಮಿಲಿಟರಿ ಅಕಾಡೆಮಿಗೆ ಸೇರಲು ಬರೆದ ಪರೀಕ್ಷೆಯಲ್ಲೂ ಎರಡು ಬಾರಿ ಫೇಲಾಗಿ ಮೂರನೇ ಬಾರಿಗೆ ಉತ್ತೀರ್ಣರಾದವರು.

ಚರ್ಚಿಲ್ ಹೇಳುವಂತೆ 'ಯಶಸ್ಸೆಂದರೆ ಒಂದು ಸೋಲಿನಿಂದ ಇನ್ನೊಂದು ಸೋಲಿನೆಡೆಗೆ ಉತ್ಸಾಹ ಕಳೆದುಕೊಳ್ಳದ ಪ್ರಯಾಣ. ಮುನ್ನುಗ್ಗುವ ಧೈರ್ಯ ಮಾತ್ರ ಮುಖ್ಯ' ಎನ್ನುತ್ತಾರೆ ಅವರು.

ಸಾವಿರಾರು ಸಂಶೋಧನೆಗಳಿಗೆ ಕಾರಣರಾದ ವಿಜ್ಞಾನಿ ಥಾಮಸ್ ಅಲ್ವಾ ಎಡಿಸನ್ ಬಾಲ್ಯದಲ್ಲಿ ನಿಧಾನ ಪ್ರವೃತ್ತಿಯ ಮಗು, ದಡ್ಡ, ಅಂತಹ ಸಾಧನೆಯನ್ನು ಮಾಡದವ ಎನಿಸಿಕೊಂಡವರು. ಅಬ್ರಾಹಂ ಲಿಂಕನ್ ಅಧ್ಯಕ್ಷರಾಗುವ ಮೊದಲು ವ್ಯವಹಾರದಲ್ಲಿ ಅನೇಕ ವೈಫಲ್ಯಗಳನ್ನು ಕಂಡವರು. ರಾಜಕೀಯದಲ್ಲಿ ಮುಗ್ಗರಿಸಿದರೂ ಸಾವರಿಸಿಕೊಂಡು ಅಧ್ಯಕ್ಷರಾಗಿ ಹಿರಿಯ ರಾಜಕೀಯ ಮುತ್ಸದ್ದಿಯೆನಿಸಿಕೊಂಡರು.

ವೈವಾಹಿಕ ಜೀವನದಲ್ಲಿ ವಿರಸ ಹೊಂದಿ, ಸಾಕಷ್ಟು ನೋವು ಅನುಭವಿಸಿ, ಸಣ್ಣ ಮಗುವಿನೊಂದಿಗೆ ಗಂಡನಿಂದ ಬೇರ್ಪಟ್ಟು ಅಕ್ಷರಶಃ ಬೀದಿ ಪಾಲಾದ ಜೆ.ಕೆ. ರೋಲಿಂಗ್ಸ್ ತನ್ನ ನೋವನ್ನು ಬರೆಯಲು ಬರವಣಿಗೆಯ ಮೊರೆ ಹೋದರು. ಜೀವನವೇ ಸಾಕೆನಿಸಿ ಆತ್ಮಹತ್ಯೆಗೂ ಪ್ರಯತ್ನಿಸಿದರು. ಆದರೆ ಆಕೆ ಬರೆದ 'ಹ್ಯಾರಿ ಪಾಟರ್ಸ್' ಕೃತಿ ಯಶಸ್ಸು ತಂದು ಕೊಟ್ಟು ಆಕೆಯನ್ನು ರಾತ್ರೋರಾತ್ರಿ ಆಗರ್ಭ ಶ್ರೀಮಂತಳನ್ನಾಗಿಸಿತು. ಆದರೆ ಅದಕ್ಕೂ ಮುನ್ನ ಹಲವಾರು ಪ್ರಕಾಶಕರು ಆ ಕೃತಿಯನ್ನು ಪ್ರಕಟಿಸಲು ನಿರಾಕರಿಸಿದ್ದು ಗಮನಾರ್ಹ.

ಮೈಕ್ರೋಸಾಫ್ಟ್ ನ ದಿಗ್ಗಜ ಬಿಲ್ ಗೇಟ್ಸ್, ಫೇಸ್‌ಬುಕ್ ಖ್ಯಾತಿಯ ಮಾರ್ಕ್ ಝುಕರ್ ಬರ್ಗ್, ತಮ್ಮ ಪದವಿಯನ್ನು ಮುಗಿಸಲು ಕಷ್ಟಪಟ್ಟು ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿಟ್ಟವರು. ಮಾನವ ವಿಕಾಸದ ಕುರಿತು ಚರಿತ್ರಾರ್ಹ ಪ್ರಬಂಧಗಳನ್ನು ಮಂಡಿಸಿದ ಚೌಲ್ರ್ಸ್ ಹಾರ್ದಿನ್ ಹೀಗೆ ಸೋತು ಗೆದ್ದವರ ಪಟ್ಟಿ ಮಾಡುತ್ತಾ ಕುಳಿತರೆ ನೂರಾರು ಉದಾಹರಣೆಗಳು ಸಿಗುತ್ತವೆ.

ಈ ಎಲ್ಲ ಉದಾಹರಣೆಗಳು, ಸೋಲನ್ನು ಸಮರ್ಥಿಸುವುದಿಲ್ಲ. ಆದರೆ ಗೆಲುವೆಂದರೆ ಅಂಕಗಳೇ ಅಂತಿಮ ಎಂದೂ ಹೇಳುವುದಿಲ್ಲ. ಸತತ ಪ್ರಯತ್ನ, ಸೋಲೊಪ್ಪದ ಅಚಲ ಛಲ ಇದ್ದರೆ ಗೆಲುವು ಕಟ್ಟಿಟ್ಟ ಬುತ್ತಿ ಎಂದು ಹೇಳುತ್ತವೆ ಈ ಕತೆಗಳು. ಇವರ ಬದುಕಿನಿಂದ ಕಲಿಯ ಬೇಕಾಗಿರುವುದು ಗೆಲುವಿನ ಮಂತ್ರಗಳನ್ನು.

ಗೆಲುವಿನ ಮಂತ್ರ

1 **ಒಪ್ಪಿಕೊಳ್ಳುವಿಕೆ:** ನನ್ನ ಸೋಲಿಗೆ ಕಾರಣ ನಾನೇ, ಇತರರನ್ನು ದೂರಿ ಪ್ರಯೋಜನವಿಲ್ಲ. ನನಗಿರುವ ವಿದ್ಯಾರ್ಹತೆ, ನನಗಿರದ ಕೌಶಲಗಳನ್ನು ಒಪ್ಪಿಕೊಳ್ಳಬೇಕು.

2 **ನವೀನ ಗುರಿಗಳ ಆಯ್ಕೆ:** ನನ್ನಲ್ಲಿರುವ ಕೌಶಲಗಳಿಗೆ ಬೇರೆಯದಾದ ಪ್ರಯತ್ನಗಳನ್ನು ಮಾಡಬೇಕು. ಕೊರತೆಗಳನ್ನು ಮನಗಂಡು ವಾಸ್ತವಕ್ಕೆ ಹತ್ತಿರದ ಗುರಿಗಳನ್ನು ನಿರ್ಧರಿಸುವುದು.

3 **ತಪ್ಪುಗಳಿಂದ ಕಲಿಯುವುದು:** ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ಪರಿಗಣಿಸುವುದು. ತಮಗಾದ ಸೋಲುಗಳಿಂದ ಪಾಠಗಳನ್ನು ಕಲಿಯುವುದು. ನಡೆದ ಘಟನೆಯನ್ನು ಕೂಲಂಕುಶವಾಗಿ ವಿಶ್ಲೇಷಿಸಿ ಸೋಲಿಗೆ ಕಾರಣಗಳನ್ನು ಪಟ್ಟಿ ಮಾಡುವುದು.

4 **ಉತ್ತಮ ಯೋಜನೆಗಳು** - ಅಧ್ಯಯನದಿಂದ, ಸ್ವಂತ ಅನುಭವದಿಂದ, ತಪ್ಪುಗಳಿಂದ ಕಲಿತ ಪಾಠಗಳಿಂದ ಹೊಸ ಯೋಜನೆಯನ್ನು ರೂಪಿಸಿಕೊಳ್ಳುವುದು.

5 **ಮರಳಿ ಯತ್ನವ ಮಾಡು:** ಗೆಲುವಿಗಾಗಿ ಪ್ರತಿಸಲವೂ ಹೊಸ ಉತ್ಸಾಹದಿಂದ ಪ್ರಯತ್ನಿಸುತ್ತಲೇ ಇರಬೇಕು.

ಓದು ವಿದ್ಯಾಭ್ಯಾಸವಿರಲಿ, ಉದ್ಯೋಗವಿರಲಿ, ಸಂಬಂಧಗಳಿರಲಿ ಮೊದಲ ಹಂತಗಳಲ್ಲಿ ಫೇಲಾಗುವುದು ಸಹಜ. ಆದರೆ ಆ ಸೋಲುಗಳನ್ನು ಯಶಸ್ಸಿನ ಮೆಟ್ಟಿಲುಗಳನ್ನಾಗಿಸಿಕೊಂಡು ಮುಂದುವರೆಯುವುದೇ ಬದುಕು.

ವಿದ್ಯಾರ್ಥಿ ವೇತನ ಕೈಪಿಡಿ

ಎನ್ ಜಿ ಎಸ್ ಎಫ್ (NGSF) ಇಂಟರ್ನ್‌ಶಿಪ್

ವಿವರ: ಜೀವವಿಜ್ಞಾನದಲ್ಲಿ ಸಂಶೋಧನಾ ಅನುಭವವನ್ನು ಪಡೆಯಲು ಇಚ್ಛಿಸುವ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ನೆಕ್ಸ್ಟ್ ಜೆನ್ ಸೈಂಟಿಸ್ಟ್ಸ್' ಫೌಂಡೇಷನ್ ಇಂಟರ್ನ್‌ಶಿಪ್ ಅವಕಾಶ ನೀಡುತ್ತಿದೆ.

ಅರ್ಹತೆ: ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ಭಾರತೀಯ ಸಂಸ್ಥೆಯಲ್ಲಿ ಪ್ರಧಾನ ತನಿಖಾಧಿಕಾರಿಯ ಪ್ರಯೋಗಾಲಯದಲ್ಲಿ 2 ರಿಂದ 3 ತಿಂಗಳವರೆಗೆ ಕೆಲಸ ಮಾಡಲು ಸಿದ್ಧರಿರಬೇಕು.

ಆರ್ಥಿಕ ಸಹಾಯ: ₹6,000 ವರೆಗೆ ಮಾಸಿಕ ಸ್ಟೈಫಂಡ್

ಅರ್ಜಿ ಸಲ್ಲಿಸಲು ಕೊನೆ ದಿನ: 31-03-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url:www.b4s.in/praja/NGF1

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ.
ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.
- ಬಿ.ಎಂ.ಶ್ರೀ.

ಭಾರತೀಯರಿಗೆ ಉದ್ಯೋಗ ಬೇಕು ಜಗತ್ತಿಗೆ ಭಾರತೀಯರು ಬೇಕು

ಕಾರ್ಮಿಕರ ಕೊರತೆಯನ್ನು ಎದುರಿಸುತ್ತಿರುವ ಹಾಗೂ ಜನಸಂಖ್ಯೆಯ ಇಳಿಕೆಯನ್ನು ಕಾಣುತ್ತಿರುವ ದೇಶಗಳಿಗೆ ಕಾರ್ಮಿಕರನ್ನು ಒದಗಿಸಲು ಕೇಂದ್ರ ಸರ್ಕಾರವು ಆ ದೇಶಗಳ ಜೊತೆ ಒಪ್ಪಂದ ಮಾಡಿಕೊಳ್ಳುವ ಯೋಜನೆ ಹೊಂದಿರುವುದು ಸ್ವಾಗತಾರ್ಹ. ಈ ಯೋಜನೆಯು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಲ್ಲಿ, ದೇಶಕ್ಕೆ ಪ್ರಯೋಜನ ತಂದುಕೊಡಬಹುದು. ಕಾರ್ಮಿಕರ ಕೊರತೆಯನ್ನು ಎದುರಿಸುತ್ತಿರುವ ಬಹುತೇಕ ದೇಶಗಳು ಅಭಿವೃದ್ಧಿ ಹೊಂದಿರುವ ದೇಶಗಳು. ಇವುಗಳ ಜೊತೆಯಲ್ಲೇ, ಇತರ ಕೆಲವು ದೇಶಗಳು ಕೂಡ ಈ ಸಮಸ್ಯೆಯನ್ನು ಎದುರಿಸುತ್ತಿವೆ. ಕಾರ್ಖಾನೆಗಳಲ್ಲಿ, ಕೃಷಿ ಜಮೀನಿನಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಕೆಲಸಕ್ಕೆ ಒಂದು ಲಕ್ಷ ಮಂದಿ ಭಾರತೀಯರನ್ನು ನೇಮಕ ಮಾಡಿಕೊಳ್ಳಲು ತೈವಾನ್ ಆಸಕ್ತಿ ತೋರಿಸಿದೆ. ಕಾರ್ಮಿಕರ ಪೂರೈಕೆಗೆ ಭಾರತವು ಜಪಾನ್ ಮತ್ತು ಫ್ರಾನ್ಸ್ ಸೇರಿದಂತೆ ಕೆಲವು ದೇಶಗಳ ಜೊತೆ ಒಪ್ಪಂದಕ್ಕೆ ಸಹಿ ಮಾಡಿದೆ. ನೆದರ್ಲೆಂಡ್ಸ್, ಗ್ರೀಸ್, ಡೆನ್ಮಾರ್ಕ್ ಮತ್ತು ಸ್ವಿಟ್ಜರ್ಲೆಂಡ್ ದೇಶಗಳ ಜೊತೆ ಮಾತುಕತೆ ನಡೆಯುತ್ತಿದೆ. ಇಸ್ರೇಲ್ ಜೊತೆಗಿನ ಒಪ್ಪಂದದ ಅನ್ವಯ ಭಾರತವು ಆ ದೇಶಕ್ಕೆ 42 ಸಾವಿರ ಮಂದಿ ಕಾರ್ಮಿಕರನ್ನು ಕಳುಹಿಸಿಕೊಡಲಿದೆ. ಇಸ್ರೇಲ್‌ನಲ್ಲಿ ಭಾರತದ 18 ಸಾವಿರ ಕಾರ್ಮಿಕರು ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಈ ದೇಶಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಇರುವುದು ತಯಾರಿಕೆ, ಕೃಷಿ, ನಿರ್ಮಾಣ ಮತ್ತು ಆರೋಗ್ಯಸೇವಾ ವಲಯಗಳಲ್ಲಿ.



ಅನ್ಯ ದೇಶಗಳಿಗೆ ಕಾರ್ಮಿಕರನ್ನು ಒದಗಿಸುವ ಸಂಬಂಧ ದಕ್ಷವಾದ ಹಾಗೂ ನ್ಯಾಯಸಮ್ಮತವಾದ ವ್ಯವಸ್ಥೆಯೊಂದನ್ನು ಭಾರತ ರೂಪಿಸಬೇಕು

ದೇಶದ ಕಾರ್ಮಿಕರು ಶತಮಾನಗಳ ಅವಧಿಯಲ್ಲಿ ಜಗತ್ತಿನ ಎಲ್ಲ ಭಾಗಗಳಿಗೂ ತೆರಳಿದ್ದಾರೆ, ಕೆಲಸ ಮಾಡಿದ್ದಾರೆ. ಆದರೆ ಈಗ ವಲಸೆಯ ಪ್ರಮಾಣ ಎಷ್ಟಿರಬೇಕು, ಅದನ್ನು ಕಾನೂನಿನ ಅಡಿಯಲ್ಲಿ ನಿಯಂತ್ರಿಸುವುದು ಹೇಗೆ ಎಂಬುದನ್ನು ಯೋಜಿಸಲು ಅವಕಾಶ ಇದೆ. ಇದರ ಜೊತೆಯಲ್ಲೇ, ದೇಶದ ನಿರುದ್ಯೋಗ ಸಮಸ್ಯೆಗೆ ಕೂಡ ಒಂದಿಷ್ಟು ಪರಿಹಾರ ಕಂಡುಕೊಳ್ಳಲು ಅವಕಾಶ ಇದೆ. ವಲಸೆಯ ವಿಚಾರದಲ್ಲಿ ಅಕ್ರಮವಾದ ಹಾಗೂ ಅನಧಿಕೃತವಾದ ಮಾರ್ಗಗಳು ಕೆಲವು ಇವೆ. ಇದನ್ನು ಈಚೆಗೆ ಫ್ರಾನ್ಸ್‌ನ ಪ್ರಕರಣವೊಂದು ಸ್ಪಷ್ಟವಾಗಿ ಹೇಳಿದೆ. ಕಾರ್ಮಿಕರಿಗೆ ಬೇಡಿಕೆಯು ಹೆಚ್ಚುತ್ತಲೇ ಇರಲಿದೆ. ಭವಿಷ್ಯದಲ್ಲಿ ಕೂಡ ಭಾರತವು ದೇಶಿ ಅಗತ್ಯಗಳಿಗೆ ತೊಂದರೆ ಆಗದ ರೀತಿಯಲ್ಲಿ, ವಿದೇಶಗಳಿಗೆ ಕಾರ್ಮಿಕರನ್ನು ಒದಗಿಸುವ ಕೆಲಸವನ್ನು ಸಮರ್ಥವಾಗಿಯೇ ನಿರ್ವಹಿಸುವ ನಿರೀಕ್ಷೆ ಇದೆ. ಕಾರ್ಮಿಕರನ್ನು ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಕೆಲವು ದೇಶಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರೆ, ವಾಣಿಜ್ಯ ಒಪ್ಪಂದಗಳು ಸೇವೆಗಳನ್ನು ಮತ್ತು ಕಾರ್ಮಿಕರ ಸಂಚಾರವನ್ನು ಕೂಡ ಒಳಗೊಳ್ಳುವಂತೆ ಇರಬೇಕು ಎಂದು ಭಾರತ ಹೇಳುತ್ತಿದೆ. ಎರಡು ದೇಶಗಳ ನಡುವೆ ಒಪ್ಪಂದಗಳು ಏರ್ಪಟ್ಟಾಗ, ಕಾರ್ಮಿಕರು ಶೋಷಣೆಗೆ ಗುರಿಯಾಗುವುದು ತಪ್ಪುತ್ತದೆ, ಸೇವಾ ನಿಯಮಗಳು ನ್ಯಾಯಸಮ್ಮತವಾಗಿ ಇರುತ್ತವೆ. ಬೇರೆ ದೇಶಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ದುಡಿದು, ಅಲ್ಲಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಅವರು ತವರಿಗೆ ಕಳುಹಿಸುವ ಹಣದಿಂದ ಭಾರತಕ್ಕೆ ಲಾಭವಾಗುತ್ತದೆ. ಇಂತಹ ಬಹುತೇಕ ಒಪ್ಪಂದಗಳು ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತವೆ. ಕೆಲಸ ಮಾಡಲು ತೆರಳಿದ ಕಾರ್ಮಿಕರು, ಒಂದಿಷ್ಟು ಹಣ ಉಳಿಸಿಕೊಂಡು ತವರಿಗೆ ಮರಳಲು ಸಾಧ್ಯವಾಗುತ್ತದೆ. ಕೆಲವು ಕಾರ್ಮಿಕರು ಅಲ್ಲಿಯೇ ಇರಲು ಕೂಡ ಸಾಧ್ಯವಾಗಬಹುದು. ಬೇರೆ ದೇಶಗಳಲ್ಲಿ ಭವಿಷ್ಯದಲ್ಲಿ ಕಾರ್ಮಿಕರ ಅಗತ್ಯ ಎಷ್ಟು ಪ್ರಮಾಣದಲ್ಲಿ ಎದುರಾಗಬಹುದು ಎಂಬ ಬಗ್ಗೆ ಕೇಂದ್ರವು ಒಂದಿಷ್ಟು ಲೆಕ್ಕಾಚಾರ ನಡೆಸಬೇಕಾಗಬಹುದು. ಅದಕ್ಕೆ ಅನುಗುಣವಾಗಿ ಭಾರತದಲ್ಲಿ ಕಾರ್ಮಿಕರಿಗೆ ತರಬೇತಿಯನ್ನು ನೀಡಬೇಕಾಗಬಹುದು.

ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ದಕ್ಷವಾದ, ನ್ಯಾಯಸಮ್ಮತವಾದ ವ್ಯವಸ್ಥೆಯೊಂದನ್ನು ರೂಪಿಸಬೇಕು. ಇಂತಹ ನೇಮಕಾತಿಗಳಲ್ಲಿ ಸ್ವಜನಪಕ್ಷಪಾತ, ಭ್ರಷ್ಟಾಚಾರ ಹೆಚ್ಚಿರುತ್ತವೆ. ಬೇರೆ ದೇಶಗಳಿಗೆ ಕೆಲಸಕ್ಕೆ ತೆರಳುವ ಕಾರ್ಮಿಕರು ಅಲ್ಲಿ ಎದುರಿಸಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಒಂದು ವ್ಯವಸ್ಥೆಯನ್ನು ರೂಪಿಸಿದರೆ ಚೆನ್ನ. ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರು, ಅಲ್ಲಿನ ಜನರ ಜೊತೆ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಬೇರೆ ದೇಶಗಳಲ್ಲಿ ಭಾರತೀಯರು ಒಳ್ಳೆಯ ಹೆಸರು ಸಂಪಾದಿಸಿದ್ದಾರೆ. ಆದರೆ ಈಚಿನ ದಿನಗಳಲ್ಲಿ ಕೆಲವು ಕಡೆಗಳಲ್ಲಿ ಭಾರತೀಯ ಮೂಲದವರಿಗೆ ಕೆಟ್ಟ ಅನುಭವ ಆಗುತ್ತಿರುವುದೂ ಇದೆ. ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾದಲ್ಲಿ ಇಂತಹ ಅನುಭವ ಆಗಿರುವುದು ಹೆಚ್ಚಾಗಿ ವರದಿಯಾಗಿದೆ. ಭಾರತದಲ್ಲಿನ ಸಾಮಾಜಿಕ ಹಾಗೂ ರಾಜಕೀಯ ವಿದ್ಯಮಾನಗಳು ಬೇರೆ ದೇಶಗಳಲ್ಲಿನ ಭಾರತೀಯರ ಮೇಲೆ ಪರಿಣಾಮ ಬೀರಿರುವುದೂ ಇದೆ. ಇವೇನೇ ಇದ್ದರೂ ಈಗ ದೇಶವು ತನ್ನ ಎದುರು ಇರುವ ಅವಕಾಶವನ್ನು ಚೆನ್ನಾಗಿ ಬಳಸಿಕೊಳ್ಳಲು ಮುಂದಡಿ ಇರಿಸಬೇಕು.

ದಿನದ ಟ್ವೀಟ್

ಸಹಬಾಳ್ವೆ ಮುಖ್ಯ



ರಾಜಸ್ಥಾನದಿಂದ ಬರಲಿ, ಬಿಹಾರದಿಂದ ಬರಲಿ, ಉತ್ತರಪ್ರದೇಶದಿಂದ ಬರಲಿ, ದೂರದ ಆಫ್ರಿಕಾದಿಂದ ಆದರೂ ಬರಲಿ- ನಮ್ಮ ಊರಿಗೆ ಬಂದು ನಮ್ಮ ಭಾಷೆ ಕಲಿತು ನಮ್ಮ ಜನರ ಜೊತೆಗೆ ಸಹಬಾಳ್ವೆ ನಡೆಸಿದರೆ ಅವರೆಲ್ಲರೂ ನಮ್ಮವರೇ, ಅವರೆಲ್ಲರೂ ಕನ್ನಡಿಗರೇ. ಅದರಲ್ಲಿ ಯಾವುದೇ ಅನುಮಾನವಿಲ್ಲ.

ಅಮರನಾಥ್ ಶಿವಶಂಕರ್
ಐ.ಟಿ. ಉದ್ಯೋಗಿ

ಕಿಡಿನುಡಿ



ವಿನೇಶಾ ಫೋಗಟ್ ಅವರು ತಮ್ಮ ಬಹುಮಾನದ ಹಣವನ್ನು ಮರಳಿಸಬೇಕು ಎಂದು ಕೇಳುತ್ತಿರುವವರು, ಆಕೆ ಬೆವರು ಸುರಿಸಿ ಕಷ್ಟಪಟ್ಟು ಅದನ್ನು ಗಳಿಸಿದ್ದಾರೆ ಎಂಬುದನ್ನು ಮರೆಯಬಾರದು. ಹಣ ಮರಳಿಸುವಂತೆ ಕೇಳುತ್ತಿರುವವರೇ ಏಕೆ ಅಖಾಡಕ್ಕೆ ಇಳಿದು ಭಾರತಕ್ಕೆ ಪದಕಗಳನ್ನು ತಂದುಕೊಡಬಾರದು... ಗಣ್ಯ ಕ್ರೀಡಾಪಟು ಆಗುವುದಕ್ಕೆ ಎಷ್ಟು ಕಠಿಣ ಶ್ರಮ ಮತ್ತು ತ್ಯಾಗ ಅಗತ್ಯ ಎಂಬುದು ಒಬ್ಬ ಕ್ರೀಡಾಪಟುವಿಗಷ್ಟೇ ಗೊತ್ತಿರುತ್ತದೆ. ಚಾರಿತ್ರ್ಯಹನನ ಸುಲಭ, ಭಾರತದ ಪರವಾಗಿ ಆಟವಾಡುವುದು ಖಂಡಿತವಾಗಿಯೂ ಕಷ್ಟ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 1-1-1999

• ಸುರತ್ಕಲ್: ಐವರ ಸಾವು ಸಚಿವರ ತಂಡ ಸ್ಥಳಕ್ಕೆ

ಮಂಗಳೂರು, ಡಿ. 31– ಸುರತ್ಕಲ್ ಪ್ರದೇಶದಲ್ಲಿ ಹಿಂಸಾಚಾರ ಇಂದೂ ಮುಂದುವರಿದಿದ್ದು ಮಾರಕಾಸ್ತ್ರಗಳಿಂದ ನಡೆದ ಹಲ್ಲೆಯಿಂದಾಗಿ ಮೂವರು, ಬಲಿಯಾಗಿದ್ದಾರೆ. ಈ ಮೂಲಕ ಗಲಭೆಯಲ್ಲಿ ಮೃತಪಟ್ಟವರ ಸಂಖ್ಯೆ ಐದಕ್ಕೆ ಏರಿದೆ. ರಥಬೀದಿ ಮತ್ತು ಕಾಟಿಗಳಲ್ಲಿ ಪೆಟ್ರೋಲ್ ಬಾಂಬ್‌ಗಳು ಸ್ಫೋಟಿಸಿವೆ. ಅಲ್ಲಲ್ಲಿ ಹೆದ್ದಾರಿ ತಡೆ, ಕಲ್ಲು ತೂರಾಟ ಮತ್ತು ಬೆಂಕಿ ಹಚ್ಚಿದ ಪ್ರಕರಣಗಳು ನಡೆದಿವೆ. ಉದ್ವಿಗ್ನ ಸ್ಥಿತಿಯನ್ನು ನಿಯಂತ್ರಿಸಲು ಬೆಂಗಳೂರಿನಿಂದ ಕ್ಷಿಪ್ರ ಕಾರ್ಯಾಚರಣೆ ಪಡೆಯ ಎಂಟು ತುಕಡಿಗಳು ರಾತ್ರಿ ಬಂದಿವೆ.

ಬೆಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ಕೈಗಾರಿಕಾ ಸಚಿವ ಬಿ.ಎ. ಮೊಯಿದ್ದೀನ್, ಕಾನೂನು ಸಚಿವ ಎಂ.ಸಿ. ನಾಣಯ್ಯ, ಸಾರಿಗೆ ಸಚಿವ ಪಿ.ಜಿ.ಆರ್. ಸಿಂಧ್ಯಾ ಮತ್ತು ಗೃಹ ಸಚಿವ ಆರ್. ರೋಷನ್ ಬೇಗ್ ಅವರು ಪರಿಸ್ಥಿತಿಯ ಅಧ್ಯಯನಕ್ಕಾಗಿ ಹಿಂಸಾಚಾರ ನಡೆದ ಸುರತ್ಕಲ್‌ಗೆ ನಾಳೆ ಭೇಟಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಪ್ರಕಟಿಸಿದರು.

‘ಸುರತ್ಕಲ್‌ನಲ್ಲಿ ನಡೆದಿರುವ ಹಿಂಸಾಚಾರ ಘಟನೆಗಳಲ್ಲಿ ಕೆಲವು ಸಮಾಜ ಘಾತುಕ ಶಕ್ತಿಗಳು ಭಾಗಿಯಾಗಿವೆ ಎಂದು ವರದಿಯಾಗಿದೆ. ಇಂಥ ಘಟನೆಗಳು ಮುಂದುವರಿದಲ್ಲಿ, ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ’ ಎಂದು ಅವರು ಎಚ್ಚರಿಕೆ ನೀಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 1-1-1974

• ಪಶು ಅಭಿವೃದ್ಧಿ ಕಡೆಗಣಿಸಿದ್ದೇ ಈಗಿನ ಸಂಕಷ್ಟಕ್ಕೆ ಕಾರಣ: ಗಿರಿ

ಬೆಂಗಳೂರು, ಡಿ. 31– ಕೃಷಿ ಕ್ಷೇತ್ರದಲ್ಲಿ ಪಶು ಅಭಿವೃದ್ಧಿಯನ್ನು ಕಡೆಗಣಿಸಿರುವುದೇ ಈಗಿನ ಸಂಕಷ್ಟಗಳಿಗೆ ಕಾರಣವೆಂದು ರಾಷ್ಟ್ರಪತಿ ವಿ.ವಿ. ಗಿರಿಯವರು ಇಂದು ಇಲ್ಲಿ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಡೈರಿ ಸಂಶೋಧನಾ ಸಂಸ್ಥೆಯ ಸ್ವರ್ಣಮಹೋತ್ಸವವನ್ನು ಉದ್ಘಾಟಿಸಿದ ಅವರು, ಭೂಮಿಯನ್ನು ವೈಜ್ಞಾನಿಕವಾಗಿ ಬಳಸುವ ಒಂದು ಸಂಯೋಜಿತ ಯೋಜನೆಯಾಗಿ ಹೈನು ಉದ್ಯಮವನ್ನು ಬೆಳೆಸದಿದ್ದರೆ, ಗ್ರಾಮಾಂತರ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ ಎಂದರು.

• ನಗರಸಭೆಗೆ ಪೊಲೀಸ್ ಪ್ರವೇಶ

ಬೆಂಗಳೂರು, ಡಿ. 31– ನಗರಸಭೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಇಂದು ಪೊಲೀಸರು ನಗರಸಭೆಯನ್ನು ಪ್ರವೇಶಿಸಿ, ಸಸ್ಪೆಂಡ್ ಆಗಿದ್ದರೂ ಕಲಾಪದಲ್ಲಿ ಭಾಗವಹಿಸಲು ಬಂದು, ಹೊರಗೆ ಹೋಗಲು ಒಪ್ಪದಿದ್ದ ಸದಸ್ಯರೊಬ್ಬರನ್ನು ಹೊರಕ್ಕೆ ಹಾಕಿದ ಪ್ರಸಂಗ ನಡೆಯಿತು.

ಜಿ. ನಾರಾಯಣಕುಮಾರ್ ಅವರು ಒಂದು ತಿಂಗಳು ಅಮಾನತು ಆಗಿದ್ದರೂ ಸಭೆಯನ್ನು ಪ್ರವೇಶಿಸಿದಾಗ, ಮೇಯರ್ ಎ.ಕೆ. ಅನಂತಕೃಷ್ಣ ಅವರ ಸೂಚನೆಯಂತೆ, ಪೊಲೀಸರು ಸಭಾಭವನವನ್ನು ಪ್ರವೇಶಿಸಿ ಕುಮಾರ್ ಅವರನ್ನು ಹೊರಕ್ಕೆ ಒಯ್ದರು.

ಶಿಕ್ಷಣ ಕ್ಷೇತ್ರದ ನ್ಯೂನತೆ ನಿವಾರಣೆಯು ಸರ್ಕಾರದ ಆದ್ಯತೆಯಾಗಲಿ

ಶಿಕ್ಷಣ ವ್ಯವಸ್ಥೆ: ಹೊಸ ದೃಷ್ಟಿಕೋನ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಶಿಕ್ಷಣ ಪ್ರತಿಯೊಬ್ಬರ ಮೂಲಭೂತ ಹಕ್ಕು. ಸುಸ್ಥಿರ ಅಭಿವೃದ್ಧಿಯ ಸಾಧನ. ಅಸಮಾನತೆ ಹಾಗೂ ತಾರತಮ್ಯ ನಿವಾರಣೆಗೆ ಪ್ರಬಲ ಅಸ್ತ್ರ. ರಾಷ್ಟ್ರ ನಿರ್ಮಾಣದ ಪ್ರಧಾನ ಅಂಶಗಳಲ್ಲಿ ಒಂದು. ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ತಾಂತ್ರಿಕ ಪ್ರಗತಿಯ ಚಾಲಕ ಶಕ್ತಿಯಾಗಿಯೂ ಕಾರ್ಯನಿರ್ವಹಿಸುತ್ತದೆ. ಇವೆಲ್ಲವೂ ಸಾರ್ವತ್ರಿಕವಾಗಿ ರುಜುವಾತಾಗಿರುವ ಅಂಶಗಳು. ಆದ್ದರಿಂದಲೇ, ಮಾನವ ಹಕ್ಕುಗಳ ಮೊದಲ ಸಾರ್ವತ್ರಿಕ ಘೋಷಣೆಯಲ್ಲಿಯೇ (ಯುಡಿಎಚ್‌ಆರ್) ಶಿಕ್ಷಣವನ್ನು ಅದರ ಭಾಗವನ್ನಾಗಿಸಲಾಗಿದೆ.

ಶಿಕ್ಷಣದ ಈ ನಿರ್ಣಾಯಕ ಪಾತ್ರದ ಬಗ್ಗೆ ಪೂರ್ಣ ಅರಿವಿದ್ದರೂ ಅದನ್ನು ಕೊಡಮಾಡಬೇಕಾದ ಸರ್ಕಾರಗಳು ಮಾತ್ರ ಗೊತ್ತಿದ್ದೂ ಗೊತ್ತಿಲ್ಲದಂತೆ ಜಾಣತನವನ್ನು ಪ್ರದರ್ಶಿಸುತ್ತಿವೆ. ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವಲ್ಲಿ ಸರ್ಕಾರಗಳು ದಯನೀಯವಾಗಿ ಸೋತಿವೆ. ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳ ಶೋಚನೀಯ ಪರಿಸ್ಥಿತಿ, ಶಿಕ್ಷಕರ ಕೊರತೆ, ಶೌಚಾಲಯಗಳ ದುಃಸ್ಥಿತಿ, ಕಡ್ಡಾಯ ಶಿಕ್ಷಣದ ಭಾಗವಾಗಿ 8ರಿಂದ 10 ವರ್ಷ ಶಾಲೆಯಲ್ಲಿ ಕಲಿತರೂ ಸರಿಯಾಗಿ ಓದಲಾರದ, ಬರೆಯಲಾರದ ಸ್ಥಿತಿ... ಇವೆಲ್ಲವೂ ಇದಕ್ಕೆ ನಿದರ್ಶನಗಳು.


ಬೇರೆ ಬೇರೆ ಪಠ್ಯಕ್ರಮಗಳಿಗೆ ಶಾಲೆಗಳು ಸಂಯೋಜನೆ ಹೊಂದಲು ಅವಕಾಶ ಕಲ್ಪಿಸುವ ಮೂಲಕ ಹೊಸ ಬಗೆಯ ಅಸಮಾನತೆಗೆ ಸರ್ಕಾರವೇ ಕಾರಣವಾಗಿದೆ. ಮಕ್ಕಳು ತಾಯ್ನುಡಿಯಲ್ಲಿ ಕಲಿಯಲಾಗದ ಸನ್ನಿವೇಶ ಸೃಷ್ಟಿಯಾಗಿದೆ. ಭಾಷೆಯ ಆಧಾರದ ಮೇಲೆ ರಾಜ್ಯಗಳು ರಚನೆಯಾದರೂ ಆಯಾ ರಾಜ್ಯದ ಆಡಳಿತ ಭಾಷೆಯನ್ನು ಒಂದು ಭಾಷೆಯನ್ನಾಗಿ ಸಮರ್ಪಕವಾಗಿ ಕಲಿಸಲು ಆಗದಂತಹ ಸ್ಥಿತಿ ನೆಲೆಗೊಂಡಿದೆ. ಬ್ರಿಟಿಷರು ನಮ್ಮನ್ನು ಬಿಟ್ಟುಹೋಗಿದ್ದರೂ ಅವರ ಆಡಳಿತದ ಪಳೆಯುಳಿಕೆಗಳು ಉಳಿದುಕೊಂಡಿವೆ. ವಸಾಹತುಶಾಹಿ ಮನಃಸ್ಥಿತಿ ಒಂದಲ್ಲ ಒಂದು ರೀತಿಯಲ್ಲಿ ಮುಂದುವರಿದಿದೆ.

ಶಾಲಾ ಕಾಲೇಜುಗಳು ಕೆಲವರ ಪಾಲಿಗೆ ವ್ಯಾಪಾರಿ ಕೇಂದ್ರಗಳಂತಾಗಿವೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಬಲವರ್ಧನೆಗೆ ಶ್ರಮಿಸಬೇಕಾದ ಕಾರ್ಯಾಂಗ ಮತ್ತು ಶಾಸಕಾಂಗದ ಪ್ರತಿನಿಧಿಗಳು ದೊಡ್ಡ ಮಟ್ಟದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿದ್ದಾರೆ. ಇದು, ಹೊಸ ಬಗೆಯ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ. ಇಂತಹ ಹತ್ತು ಹಲವು ಸಮಸ್ಯೆಗಳು ರಾಜ್ಯ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಭಾರಿ ಬಿಕ್ಕಟ್ಟಿಗೆ ಸಿಲುಕಿಸಿವೆ.

ಸಮಸ್ಯೆಯ ಮೂಲವನ್ನು ಗುರುತಿಸದೆ, ಸುಧಾರಣೆಗೆ ಸಂಬಂಧಿಸಿದಂತೆ ಆಡುವ ಮಾತುಗಳು ಸಮಸ್ಯೆ ಮತ್ತಷ್ಟು ಉಲ್ಬಣಿಸುವಂತೆ ಮಾಡುತ್ತವೆ. ಅನೇಕ ವರ್ಷಗಳಿಂದ ನಾವು ಇಂತಹ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೇವೆ. ಅದರಿಂದ ಕನಿಷ್ಠ ಪ್ರಯೋಜನವೂ ಆಗಿಲ್ಲ ಎಂಬುದು ಕಹಿಸತ್ಯ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಶಿಥಿಲ ಸ್ಥಿತಿಯಿಂದ ಪೂರ್ಣ ನಾಶದ ಕಡೆಗೆ ಮುಖ ಮಾಡಿದೆ. ಸರ್ಕಾರಿ ಶಾಲೆಗಳು ಮಕ್ಕಳಿಲ್ಲದೇ ಬಾಗಿಲು ಬಂದ್ ಮಾಡುತ್ತಿವೆ. ಖಾಸಗಿ ಶಾಲೆಗಳಿಗೆ ಮಕ್ಕಳ ಪ್ರವಾಹವೇ ಹರಿದುಬರುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ನಾವು ಎದುರಿಸುತ್ತಿರುವ ಅಸಮಾನತೆ, ತಾರತಮ್ಯ, ಹಾಗೂ ಗುಣಾತ್ಮಕತೆ ಕೊರತೆಯಂತಹವು ಗಂಭೀರವಾದ ಸಾಂಸ್ಥಿಕ ಬಿಕ್ಕಟ್ಟುಗಳು. ಅವುಗಳಿಗೆ ಸಮಗ್ರ ಸಾಂಸ್ಥಿಕ ಪರಿಹಾರವನ್ನೇ ಹುಡುಕಬೇಕು. ಮಹಾನಗರ ಪಾಲಿಕೆಯ ಸುಪರ್ದಿಯಲ್ಲಿರುವ ಶಾಲೆಗಳನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸುವುದು ಅಥವಾ ಶಿಕ್ಷಣ ಇಲಾಖೆಯ ಶಾಲೆಗಳನ್ನು ಪರೋಪಕಾರಿಗಳು ಅಥವಾ ಕಂಪನಿಗಳ ಸಿಎಸ್‌ಆರ್ ವ್ಯವಸ್ಥೆಗೆ ಒಳಪಡಿಸುವ ಅಥವಾ ಶಾಸಕರಿಗೆ ದತ್ತು ನೀಡುವಂತಹ ಉಪಕ್ರಮಗಳು ದೀರ್ಘಕಾಲಿಕ ಮತ್ತು ಶಾಶ್ವತ ಪರಿಹಾರಗಳು ಆಗುವುದಿಲ್ಲ. ಬದಲಿಗೆ, ವ್ಯವಸ್ಥೆ ಮತ್ತಷ್ಟು ದುರ್ಬಲವಾಗುವ ಸಾಧ್ಯತೆಯೇ ಹೆಚ್ಚು.

ಮಕ್ಕಳು ಉಚಿತ ಹಾಗೂ ಕಡ್ಡಾಯ ಶಿಕ್ಷಣ ಪಡೆಯುವ ಸಾಂವಿಧಾನಿಕ ಹಕ್ಕು ಮೊದಲು ರಾಜ್ಯ ನಿರ್ದೇಶಕ ತತ್ವಗಳ ಅಡಿಯಲ್ಲಿತ್ತು. ಅದು, ಆಶಯದ ಸ್ವರೂಪದ್ದಾಗಿತ್ತು. ನಂತರ 2002ರಲ್ಲಿ, ಸುಪ್ರೀಂ ಕೋರ್ಟ್‌ನ 1992 ಮತ್ತು 1993ರ ಐತಿಹಾಸಿಕ ತೀರ್ಪುಗಳನ್ನು ಆಧರಿಸಿ ಸಂವಿಧಾನ ತಿದ್ದುಪಡಿ ಮಾಡುವ ಮೂಲಕ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸೇರಿಸಲಾಯಿತು. ಈ ಹಕ್ಕಿನ ಉಲ್ಲಂಘನೆಯಾದ ಸಂದರ್ಭದಲ್ಲಿ ನ್ಯಾಯ ಕೇಳಿ ಕೋರ್ಟ್ ಮೆಟ್ಟಿಲೇರಬಹುದು. ಮೂಲಭೂತ ಹಕ್ಕನ್ನು ಸಾಕಾರಗೊಳಿಸಲು 2010ರಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಲಾಯಿತು.

ಕಾಯ್ದೆಯ ಆಶಯದಂತೆ, ಒಂದು ಶಾಲೆಯಲ್ಲಿ ಕನಿಷ್ಠ ಇರಲೇಬೇಕಾದ ಮೂಲ ಸೌಕರ್ಯಗಳನ್ನು 2013ರ ವೇಳೆಗೆ ಒದಗಿಸಲೇಬೇಕು. ಇಲ್ಲದಿದ್ದರೆ ನ್ಯಾಯಾಲಯದ ಮೊರೆ ಹೋಗಿ ಅಂತಹ ನ್ಯಾಯಸಮ್ಮತ ಸೌಕರ್ಯಗಳನ್ನು ಪಡೆಯಬಹುದಾದ ಹಕ್ಕನ್ನು ಸಂವಿಧಾನವು ಮಕ್ಕಳಿಗೆ, ಪಾಲಕರಿಗೆ ನೀಡಿತು. ಪ್ರತಿ ಶಾಲೆಯಲ್ಲಿ ಇರಲೇಬೇಕಾದ ಶಿಕ್ಷಕರ ಸಂಖ್ಯೆ, ಸರ್ವಋತು ಬಳಕೆಯ ಕಟ್ಟಡ, ಪ್ರತಿಯೊಬ್ಬ ಶಿಕ್ಷಕರಿಗೆ ಕಡೇಪಕ್ಷ ಒಂದು ತರಗತಿ ಕೊಠಡಿ, ಕಚೇರಿ, ಉಗ್ರಾಣ ಮತ್ತು ಮುಖ್ಯೋಪಾಧ್ಯಾಯರ ಕೊಠಡಿ, ತಡೆರಹಿತ ಪ್ರವೇಶ ಮಾರ್ಗ, ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಎಲ್ಲ ಮಕ್ಕಳಿಗೂ ಸುರಕ್ಷಿತ ಹಾಗೂ ಅಗತ್ಯ ಪ್ರಮಾಣದಲ್ಲಿ ಕುಡಿಯುವ ನೀರು, ಮಧ್ಯಾಹ್ನದ ಊಟ ತಯಾರಿಸುವುದಕ್ಕಾಗಿ ಶಾಲೆಯಲ್ಲಿ ಅಡುಗೆ ಮನೆ, ಆಟದ ಮೈದಾನ, ಕಾಂಪೌಂಡ್, ಪ್ರತಿ ತರಗತಿಗೂ ಅಗತ್ಯ ಇರುವಷ್ಟು ಬೋಧನಾ-ಕಲಿಕಾ ಸಾಧನ, ಪ್ರತಿ ಶಾಲೆಯಲ್ಲಿ ವೃತ್ತಪತ್ರಿಕೆ, ನಿಯತಕಾಲಿಕ ಮತ್ತು ಕಥೆ ಪುಸ್ತಕಗಳನ್ನು ಒಳಗೊಂಡಂತೆ ಎಲ್ಲ ವಿಷಯಗಳ ಕುರಿತಾದ ಪುಸ್ತಕಗಳನ್ನೂ ಒದಗಿಸಿರುವ ಗ್ರಂಥಾಲಯ, ಅಗತ್ಯವಿರುವಷ್ಟು ಆಟದ ಸಾಮಗ್ರಿ ಮತ್ತು ಕ್ರೀಡೋಪಕರಣಗಳನ್ನು ಒದಗಿಸಲೇಬೇಕೆಂದು ಕಾಯ್ದೆಯು ನಿಗದಿಗೊಳಿಸಿತು.



ಇವು ಕಾಯ್ದೆ ಜಾರಿಗೆ ಬಂದ ಮೂರು ವರ್ಷಗಳ ಒಳಗಾಗಿ ಪ್ರತಿ ಶಾಲೆಯೂ ಹೊಂದಿರಲೇಬೇಕಾದ ಸೌಕರ್ಯಗಳು. ಆದರೆ, ಕಾಯ್ದೆ ಜಾರಿಯಾಗಿ 13 ವರ್ಷಗಳು ಕಳೆದರೂ ರಾಜ್ಯದಲ್ಲಿ ಇದರ ಅನುಪಾಲನೆ ಶೇ 26.3ರಷ್ಟು. ಅಂದರೆ, 100 ಶಾಲೆಗಳನ್ನು ತೆಗೆದುಕೊಂಡರೆ, 23 ಸರ್ಕಾರಿ ಶಾಲೆಗಳಲ್ಲಿ ಮಾತ್ರ ಈ ಎಲ್ಲಾ ಸೌಲಭ್ಯಗಳಿವೆ. ಉಳಿದಂತೆ, 77 ಶಾಲೆಗಳಲ್ಲಿ ಈ ಸೌಲಭ್ಯಗಳು ಪೂರ್ಣ ಪ್ರಮಾಣದಲ್ಲಿ ಇಲ್ಲ. ಈ ಶಾಲೆಗಳನ್ನು ಕಾಯ್ದೆಯ ಅನ್ವಯ ಅಮಾನ್ಯಗೊಳಿಸಬಹುದಾಗಿದೆ.

ಇನ್ನು ಶಿಕ್ಷಣ ಅಥವಾ ಕಲಿಕೆಯ ವಿಷಯಕ್ಕೆ ಬಂದರೆ, ಇಂದಿಗೂ ಸಾವಿರಾರು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಾಲೆಯಲ್ಲಿರುವ ಮಕ್ಕಳು ಸಮರ್ಪಕವಾದ ಕಲಿಕೆಯಿಲ್ಲದೆ ತೊಳಲಾಡುತ್ತಿದ್ದಾರೆ. ಹೆಣ್ಣುಮಕ್ಕಳು ಹಲವು ಬಗೆಯ ತಾರತಮ್ಯಗಳನ್ನು ಎದುರಿಸುತ್ತಲೇ ಇದ್ದಾರೆ. ಅತ್ಯಂತ ದುರ್ಬಲ, ಅವಕಾಶವಂಚಿತ, ಕಡಿಮೆ ಆದಾಯ ವರ್ಗಕ್ಕೆ ಸೇರಿದ ಮಕ್ಕಳು ಹಾಗೂ ಅಂಗವಿಕಲ, ವಲಸೆ, ನಿರಾಶ್ರಿತ ಮತ್ತು ಸ್ಥಳಾಂತರಗೊಂಡ ಮಕ್ಕಳು ಶಿಕ್ಷಣ ಸೌಲಭ್ಯದ ಅವಕಾಶಕ್ಕಾಗಿ ಪರಿತಪಿಸುತ್ತಿದ್ದಾರೆ. ಇವೆಲ್ಲವೂ ಸಮಸ್ಯೆಯ ಸ್ವರೂಪ ಮತ್ತು ಆಳವನ್ನು ಸೂಚಿಸುತ್ತವೆ. ನಮ್ಮ ನ್ಯಾಯಾಲಯಗಳು ಈ ಬಗೆಯ ಉಲ್ಲಂಘನೆಯನ್ನು ಪದೇಪದೇ ಪ್ರಸ್ತಾಪಿಸಿವೆ.

ಈ ಸಮಸ್ಯೆಗಳು ಒಂದೆಡೆ ಇದ್ದರೆ, ಸಮಕಾಲೀನ ಶಿಕ್ಷಣದ ಪ್ರಸ್ತುತತೆಗೆ ಸವಾಲು ಒಡ್ಡುವ ಅನೇಕ ಬೆಳವಣಿಗೆಗಳು ಶಾಲಾ ಆವರಣದ ಹೊರಗೆ ಘಟಿಸುತ್ತಿವೆ. ಎಲ್ಲವನ್ನೂ ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವಂತಹ ತಾಂತ್ರಿಕ ಬದಲಾವಣೆ, ಹವಾಮಾನ ವೈಪರೀತ್ಯ ತಂದೊಡ್ಡಿರುವ ಬಿಕ್ಕಟ್ಟುಗಳು, ಸಂಪತ್ತಿನ ಆಧಾರದಲ್ಲಿ ಬೆಳೆಯುತ್ತಿರುವ ಅಸಮಾನತೆ, ಜಾತಿ, ಧರ್ಮ, ವರ್ಗದ ಹೆಸರಿನಲ್ಲಿ ನಡೆಯುತ್ತಿರುವ ಧ್ರುವೀಕರಣ, ತಾರತಮ್ಯಗಳಂಥವು ಸಮಕಾಲೀನ ಶಿಕ್ಷಣದ ಪ್ರಸ್ತುತತೆಗೆ ದೊಡ್ಡ ಸವಾಲನ್ನು ಒಡ್ಡಿವೆ, ಬದುಕನ್ನು ಮತ್ತಷ್ಟು ಸಂಕೀರ್ಣಗೊಳಿಸಿವೆ.

ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸುವ ಮೂಲಕ ಹೊಸ ಬಗೆಯ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕಿದೆ. ನಮ್ಮ ಸರ್ಕಾರದ ಹೊಸ ವರ್ಷದ ಕಾರ್ಯಸೂಚಿಯಲ್ಲಿ ಇದಕ್ಕೆ ಆದ್ಯತೆ ಸಿಗಬೇಕಿದೆ. ಯುವಪೀಳಿಗೆಯ ಭವಿಷ್ಯ ಉಜ್ವಲಗೊಳಿಸುವುದಕ್ಕೆ, ಸಾಮರಸ್ಯದ ಸಹಬಾಳ್ವೆಗೆ, ಅಸಮಾನತೆಯ ನಿವಾರಣೆಗೆ ಪೂರಕವಾಗುವಂತಹ ಶಿಕ್ಷಣ ವ್ಯವಸ್ಥೆ ರೂಪಿಸುವ ದಿಸೆಯಲ್ಲಿ ಸರ್ಕಾರ ದೃಢ ಹೆಜ್ಜೆ ಇಡಬೇಕಾಗಿದೆ.

ಚುರುಮುರಿ



ಹೊಸ ವರ್ಷದ ಕನಸು

• ಸುಮಂಗಲಾ

ವರ್ಷದ ಕೊನೆಯ ದಿನ ನಡುಮಧ್ಯಾಹ್ನ ಬೆಚ್ಚಗೆ ನಿದ್ರಿಸುತ್ತಿದ್ದ ಬೆಕ್ಕಣ್ಣ ಕಚಗುಳಿಯಿಟ್ಟಂತೆ ಕಿಲಕಿಲನೆ ನಗುತ್ತಿತ್ತು.

‘ಏಳಲೇ... ಹಗಲುಹೊತ್ತಿನಾಗೆ ಎಷ್ಟರ ಮಲಗತೀ?’ ಎಂದು ಕಿವಿ ಹಿಂಡಿದೆ.

ಕಣ್ಣುತೆರೆದ ಬೆಕ್ಕಣ್ಣ ನನ್ನ ನೋಡಿದ್ದೇ, ಮುಖ ಆ ಕಡಿಗೆ ತಿರುವಿ, ‘ಛೇ, ಎಷ್ಟ್ ಛಂದ ಕನಸು ಬೀಳಾಕೆ ಹತ್ತಿತ್ತು, ಎಲ್ಲ ಕೆಡಿಸಿದೆ’ ಎಂದು ಗುರುಗುಟ್ಟಿತು.

‘ಏನು ಕನಸು? ಚಂದ್ರನ ಮ್ಯಾಗೆ ಹೋಗಿ ಇಲಿ ಹಿಡಿದಂಗೆ ಕನಸು ಬಿತ್ತೇನಲೇ?’ ಎಂದು ಕಿಚಾಯಿಸಿದೆ.

‘ಅದಲ್ಲ... ಹೊಸ ವರ್ಷ ಎಷ್ಟ್ ಛಲೋ ಇರತೈತಂತ ಕನಸು ಬೀಳಾಕೆಹತ್ತಿತ್ತು. ಹೊಸ ವರ್ಷದಾಗೆ ನಮ್ ಯತ್ನಾಳಮಾಮನ ನಾಲಿಗಿ ಪೂರಾ ಹೊಸಾ ವರ್ಷನ್ ಆಗಿರತೈತಿ. ನುಡಿದರೆ ಮುತ್ತಿನ ಹಾರದಂತೆ ಮಾತಾಡಾಕೆ ಶುರುಮಾಡಿರತಾನೆ. ಕಮಲಕ್ಕನ ಮನಿಯವರು ಎಲ್ಲಾ ಥರದ ಭಿನ್ನಮತ ಮರೆತು, ನಮ್ ವಿಜಿಯಣ್ಣ ಅಶೋಕಣ್ಣ ಹೇಳಿದಂಗೆ ಕೇಳಿಕೆಂಡು, ನುಡಿದರೆ ಹೈಕಮಾಂಡು ಮೆಚ್ಚಿ ಅಹುದೆನ್ನುವ ಹಂಗೆ ಇರತಾರೆ. ಕೈಪಕ್ಷದವರ ಮನೆವಳಗೂ ಸಿದ್ರಾಮ ಅಂಕಲ್ಲು, ಡೀಕೇಶಣ್ಣ ಕಮಲಕ್ಕನ ಮನಿಯವರಿಗೆ ಮೂರೂಹೊತ್ತು ಬೈಯೂದು ಬಿಟ್ಟು, ಕರುನಾಡಿನ ಸಮಸ್ತಜನದ ಅಭಿವೃದ್ಧಿ ಮಂತ್ರ ಹಾಡತಿರತಾರೆ...’

‘ಹಗಲುಗನಸು ಕಾಣೋದಕ್ಕೆ ರೊಕ್ಕ ಬೇಡ, ಅದಕ್ಕೆ ಜಿಎಸ್‌ಟಿ ತೆರಿಗೇನೂ ಇಲ್ಲ, ಎಷ್ಟ್ ಬೇಕಾದ್ರೂ ಕಾಣಬೌದು! ಮತ್ತೆ ನಿನ್ನ ಕನಸಿನಾಗೆ ಕುಮಾರಣ್ಣ ಏನ್ ಮಾಡತಿದ್ದ’.

‘ನನ್ ಕನಸಿನಾಗೆ ಕುಮಾರಣ್ಣ ರಾಗಿತೆನೆಗಳ ಹಾಸಿಗೆ ಮ್ಯಾಗೆ ಮಲಗಿ, ಕೈಯಾಗೆ ಕಮಲದ ಹೂವು ಹಿಡಿದು ಕಣ್ಣುಮುಚ್ಚಿದ್ದ. ಆವಾಗ ಎಲ್ಲಾ ಕಡೆಯಿಂದ ಕಮಲಪುಷ್ಪವೃಷ್ಟಿಯಾಗಿ, ಕರುನಾಡಿನ ಮುಖ್ಯಮಂತ್ರಿ ಕುರ್ಚಿ ಮ್ಯಾಗೆ ಸುಖಾಸೀನನಾಗಿ ಕುಳಿತಂಗೆ ಅವನಿಗೆ ಕನಸು ಬಿತ್ತು’.

‘ಅಹಾಹಾ... ಕನಸಿನೊಳಗೆ ಕನಸು...! ಎಲ್ಲವೂ ನನಸಾಗದ ಕನಸುಗಳು!’

‘ಮತ್ತ ನನ್ ಕನಸಿನಾಗೆ ಮೋದಿಮಾಮ 2024ರ ಆಗಸ್ಟ್ ಹದಿನೈದಕ್ಕೆ ಕೆಂಪುಕೋಟೆ ಮ್ಯಾಗೆ ನಿಂತು ‘ಮಿತ್ರೋಂ...’ ಅಂತ ಭಾಷಣ ಮಾಡತಿದ್ದರು. ಇದೊಂದು ನಿಜ ಆಗಬೌದು!’ ಎಂದು ಬೆಕ್ಕಣ್ಣ ಕಣಿ ನುಡಿಯಿತು!

ಸಂಗತ

ಸ್ವಾತಂತ್ರ್ಯ ಮತ್ತು ಮಾನವೀಯ ಸ್ಪರ್ಶ

ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ‘ಇವ ನಮ್ಮವ’ ಎಂಬ ಕಾರುಣ್ಯದ ಭಾವ ಬೇಕಿದೆ. ಆ ಭಾವದಿಂದಲೇ ನಾವು ಸಮಾಜವನ್ನು ಕಟ್ಟಬೇಕಿದೆ

• ಸದಾಶಿವ್ ಸೊರಟೂರು

ನೋಡಲು ತುಂಬಾ ಸಭ್ಯರಂತಿದ್ದರು. ದುಬಾರಿಯಾದ ಆಧುನಿಕ ಉಡುಗೆ. ಬಸ್ಸಿನೊಳಗೆ ಕೂತು ಜೋರಾದ ಸದ್ದಿನೊಂದಿಗೆ ರೀಲ್ಸ್ ನೋಡುತ್ತಿದ್ದರು. ಆ ಕಿರಿಕಿರಿ ಸದ್ದಿಗೆ ಬಿ.ಪಿ. ಏರಿಳಿಯುವುದೊಂದು ಬಾಕಿ ಇತ್ತು. ಜೋರು ಮಾಡಿ ಅದನ್ನು ಬಂದ್ ಮಾಡಿಸುವಷ್ಟರಲ್ಲಿ ಸಾಕುಸಾಕಾಗಿ ಹೋಯಿತು. ಮೊಬೈಲ್ ಫೋನ್ ಅವರದೇ ಇರಬಹುದು. ಯಾವುದನ್ನು ನೋಡಬೇಕು, ಕೇಳಬೇಕು ಎಂಬುದನ್ನು ತೀರ್ಮಾನಿಸುವುದು ಅವರ ಸ್ವಾತಂತ್ರ್ಯವೇ ಆಗಿರಬಹುದು. ಆದರೆ, ಬೇರೆಯವರಿಗೆ ಕಿರಿಕಿರಿ ಉಂಟುಮಾಡುವಂತಹ ‘ಸ್ವಾತಂತ್ರ್ಯ’ಕ್ಕೆ ಲಗಾಮು ಬೇಡವೇ?


ರೈಲಿನಲ್ಲಿ ಗದ್ದಲ ಉಂಟುಮಾಡುವುದು, ರಸ್ತೆಯಲ್ಲಿ ಎರ್ರಾಬಿರ್ರಿ ವಾಹನ ಓಡಿಸುವುದು, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡುವುದು, ಕಂಡಲ್ಲಿ ಉಗುಳುವುದು, ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು, ನೀರು ಪೋಲಾಗುತ್ತಿದ್ದರೂ ನೋಡಿಯೂ ನೋಡದಂತೆ ಸುಮ್ಮನೆ ತಮ್ಮ ಪಾಡಿಗೆ ತಾವು ನಡೆದು ಹೋಗುವುದು, ವಿನಾಕಾರಣ ಗಲಾಟೆ ಎಬ್ಬಿಸುವುದು, ಅಪಾಯದಲ್ಲಿ ಇದ್ದವರನ್ನು ಕೈ ಕಟ್ಟಿಕೊಂಡು ಸುಮ್ಮನೆ ನಿಂತು ನೋಡುವುದು... ಇಂತಹವುಗಳನ್ನು ಪಟ್ಟಿ ಮಾಡುತ್ತಾ ಹೋದರೆ ಇಡೀ ಬದುಕು ಅಪಸವ್ಯದಂತೆ ತೋರುವುದಿಲ್ಲವೇ?

‘ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ನಾವು ನಮ್ಮನ್ನು ಆಳಿಕೊಳ್ಳಬಹುದು. ನಮ್ಮಿಷ್ಟದಂತೆ ಇರಬಹುದು. ರಸ್ತೆಯಲ್ಲಿ ಕೈ ಬೀಸಿಕೊಂಡು ಓಡಾಡಬಹುದು. ಆದರೆ ಹಾಗೆ ಬೀಸಿದ ಕೈ ನಮ್ಮದೇ ಹಾದಿಯಲ್ಲಿ ಓಡಾಡುತ್ತಿರುವವರ ಮೈ ಸೋಕದಂತೆ ಎಚ್ಚರದಿಂದ ನಡೆಯಬೇಕಾದುದು ನಮ್ಮ ಜವಾಬ್ದಾರಿ. ಬೇರೆಯವರಿಗೆ ತೊಂದರೆ ಆಗದಂತೆ ಎಚ್ಚರಿಕೆಯಿಂದ ವರ್ತಿಸುವುದೂ ಸ್ವಾತಂತ್ರ್ಯದ ಒಂದು ಭಾಗವೇ’ ಎಂದು ಸರ್ವೇಪಲ್ಲಿ ರಾಧಾಕೃಷ್ಣನ್ ಹೇಳುತ್ತಿದ್ದರು.

ಬದುಕಿನಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಲು ನಮ್ಮಿಂದ ಸಾಧ್ಯವಾಗದೇ ಇರಬಹುದು. ಆದರೆ ನಾವು ಮಾಡುವ ಕೆಲಸವನ್ನೇ ನಮ್ಮ ಮಿತಿಯಲ್ಲಿ ತುಂಬಾ ಆಸ್ಥೆಯಿಂದ, ಪ್ರೀತಿಯಿಂದ ಮಾಡಬೇಕು. ಕನಿಷ್ಠ ನಮ್ಮಿಂದ ಏನೂ ಆಗದೇ ಹೋದಾಗ ಸುಮ್ಮನೆ ಇರುವುದು ಕೂಡ ನಾವು ಬೇರೆಯವರಿಗೆ ಮಾಡುವ ಉಪಕಾರವಾದೀತು. ಗಾಂಧೀಜಿ ‘ರಸ್ತೆ ಸ್ವಚ್ಛ ಮಾಡುವುದು ನನ್ನ ಕೆಲಸವಾಗಿದ್ದರೆ, ನಾನು ಗುಡಿಸುವ ರಸ್ತೆ ಜಗತ್ತಿನ ಸ್ವಚ್ಛ ರಸ್ತೆಯಾಗಿರುತ್ತಿತ್ತು’ ಎಂದಿದ್ದಾರೆ. ನಾವು ನಮ್ಮ ಸ್ವಾತಂತ್ರ್ಯದ ಎಲ್ಲೆಯಲ್ಲೇ ಮಾಡುವ ಕೆಲಸಕ್ಕೆ, ಬದುಕುವ ಬದುಕಿಗೆ ಒಂದು ಮಾನವೀಯತೆಯ ಸ್ಪರ್ಶ ಇರಬೇಕು.

ಹೇಗಾದರೂ ಸರಿ, ನಾನು ಮಾತ್ರ ಚೆನ್ನಾಗಿರಬೇಕು ಅನ್ನುವ ಮನೋಭಾವವೇ ನಮ್ಮ ಈಗಿನ ಸ್ವಾತಂತ್ರ್ಯದ ವ್ಯಾಖ್ಯಾನದಂತಿದೆ. ರಸ್ತೆಯಲ್ಲಿ ಅಪಘಾತವಾಗಿ ಬಿದ್ದು ಒದ್ದಾಡುತ್ತಿರುವ ವ್ಯಕ್ತಿಯನ್ನು ರಕ್ಷಿಸಲು ಏನೂ ಮಾಡದೆ, ನನಗ್ಯಾಕೆ ಉಸಾಬರಿ ಎಂದು ಸುಮ್ಮನೆ ನಿಂತು ನೋಡುವುದು ಅನಾಗರಿಕತೆಯಲ್ಲದೆ ಬೇರೇನೂ ಅಲ್ಲ. ಅವನ ಪಾಡಿಗೆ ಅವನು ನಿಂತು ನೋಡುವುದು ಅವನ ಸ್ವಾತಂತ್ರ್ಯವೇ ಆಗಿದ್ದರೂ ಅದೆಂತಹ ಸ್ವಾತಂತ್ರ್ಯ? ಒಬ್ಬರು ಇನ್ನೊಬ್ಬರ ನೋವಿಗೆ ಮಿಡಿಯುವುದು ಹೃದಯವಂತಿಕೆ. ನಾವು ಅನುಭವಿಸುವ ಸ್ವಾತಂತ್ರ್ಯಕ್ಕೆ ಇಂತಹ ಹೃದಯವಂತಿಕೆ ಇರಬೇಕು. ತೊಡುವ ಬಟ್ಟೆ ಮಾತ್ರ ನಾಗರಿಕತೆಯ ಕಥೆ ಹೇಳಬಾರದು. ನಾವು ಚಲಾಯಿಸುವ ಸ್ವಾತಂತ್ರ್ಯಕ್ಕೆ, ಮಾಡುವ ಕೆಲಸಕ್ಕೆ ಬರೀ ಅದರ ಕುರಿತಾದ ತಿಳಿವಳಿಕೆ ಇದ್ದರೆ ಸಾಲದು, ಹೃದಯ ಇರಬೇಕು. ಅಂತಃಕರಣದ ಲೇಪನ, ಮಾನವೀಯ ನೆಲೆ ಇರಬೇಕು. ನಾವು ನಮ್ಮ ಸುತ್ತಲಿನವರನ್ನು ಬರೀ ಕಣ್ಣುಗಳಿಂದ ನೋಡಬಾರದು, ಹೃದಯದಿಂದ ನೋಡಬೇಕು.

ಮನೋವೈದ್ಯ ಅಶೋಕ ಪೈ ಅವರು ಹೇಳಿದ ಒಂದು ಸಂಶೋಧನಾ ಸತ್ಯವನ್ನು ದೇವನೂರ ಮಹಾದೇವ ತಮ್ಮ ‘ಎದೆಗೆ ಬಿದ್ದ ಅಕ್ಷರ’ ಪುಸ್ತಕದಲ್ಲಿ ಹೀಗೆ ಬರೆದುಕೊಂಡಿದ್ದಾರೆ: ಅಕ್ಕಪಕ್ಕದ ಎರಡು ಕೊಠಡಿಗಳಲ್ಲಿ ಪರಸ್ಪರ ಗೊತ್ತಿಲ್ಲದ ಒಂದಷ್ಟು ಜನರನ್ನು ಕೂರಿಸಲಾಗಿರುತ್ತದೆ. ಒಂದು ಕೊಠಡಿಯಲ್ಲಿ ಟಿ.ವಿಯಲ್ಲಿ ಕೊಲೆ ದೃಶ್ಯವನ್ನು ಪ್ರಸಾರ ಮಾಡಲಾಗುತ್ತದೆ. ಅದನ್ನು ನೋಡುತ್ತಿರುವವರ ಮನಸ್ಸಿನಲ್ಲಿ ಕೋಪ, ತಿರಸ್ಕಾರದ ಭಾವಗಳು ಮೂಡುತ್ತವೆ. ವಿಚಿತ್ರವೆಂದರೆ, ಪಕ್ಕದ ಕೊಠಡಿಯಲ್ಲಿ ಇದರ ಅರಿವಿಲ್ಲದೆ ತಮ್ಮ ಪಾಡಿಗೆ ತಾವಿರುವವರ ಮನಸ್ಸಿಗೂ ಈ ಭಾವಗಳು ತಲುಪುತ್ತವೆ. ಈ ಕೊಠಡಿಯಲ್ಲಿ ಟಿ.ವಿಯೊಳಗೆ ಹಾಡು-ನೃತ್ಯಗಳನ್ನು ಪ್ರಸಾರ ಮಾಡಿದಾಗ ಇಲ್ಲಿರುವವರ ಮನಸ್ಸಿನಲ್ಲಿ ಹುಟ್ಟುವ ಸಂತಸದ ಭಾವಗಳು ಪಕ್ಕದ ಕೊಠಡಿಯಲ್ಲಿ ಇರುವವರನ್ನೂ ತಲುಪುತ್ತವೆ ಎಂಬುದನ್ನು ಸಂಶೋಧನೆ ಹೇಳುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂಬುದನ್ನು ಇದು ತಿಳಿಸುತ್ತದೆ. ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ‘ಇವ ನಮ್ಮವ’ ಎಂಬ ಕಾರುಣ್ಯದ ಭಾವ ಬೇಕಿದೆ. ಆ ಭಾವದಿಂದಲೇ ನಾವು ಸಮಾಜವನ್ನು ಕಟ್ಟಬೇಕಿದೆ.



ನಾವು ಒಂದಾಗಿ ಬಾಳಲು ಕಾರಣವಾಗಬೇಕಿದ್ದ ನಮ್ಮ ಸ್ವಾತಂತ್ರ್ಯ ಈಗ ಅದರ ದುರ್ಬಳಕೆಯಿಂದ ಮನುಷ್ಯ, ಮನುಷ್ಯರನ್ನು ದೂರ ಮಾಡುತ್ತಿದೆ. ತಪ್ಪು ಇರುವುದು ಸ್ವಾತಂತ್ರ್ಯದಲ್ಲಿ ಅಲ್ಲ. ನಾವು ಅದನ್ನು ಸ್ವೇಚ್ಛೆಯಾಗಿ ಬಳಸುತ್ತಿರುವುದರಲ್ಲಿ. ಜಾತಿ, ಧರ್ಮ, ಭಾಷೆ, ಲಿಂಗ, ವರ್ಗದಂತಹವುಗಳಿಗೆ ನೀಡಲಾದ ದತ್ತಕ ಸ್ವಾತಂತ್ರ್ಯವೇ ಇಂದು ಒಬ್ಬೊಬ್ಬರನ್ನು ಒಂದೊಂದು ದ್ವೀಪವನ್ನಾಗಿ ಮಾಡಿಹಾಕಿದೆ. ನಾವು ಸ್ವಾತಂತ್ರ್ಯವನ್ನು ಅರ್ಥೈಸಿಕೊಳ್ಳಲು ಎಡವಿದ್ದೇವೆ.

ಒಂದು ಅಗಳನ್ನು ಕಂಡರೂ ತನ್ನ ಬಳಗವನ್ನು ಕೂಗಿ ಕರೆಯುವ ಕಾಗೆಯ ಅಂತಃಕರಣ ಮನುಷ್ಯನಿಗೆ ಇಲ್ಲವಾಗಿದೆ. ಸರಿಯಾದ ಶಿಕ್ಷಣ ಮಾತ್ರ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಸರಿದಾರಿಯಲ್ಲಿ ನಡೆಸಬಲ್ಲದು ಎಂದ ಅಂಬೇಡ್ಕರ್ ಅವರ ಮಾತು ಈಗ ಹೆಚ್ಚು ನೆನಪಾಗುತ್ತದೆ.

ವಾಚಕರ ವಾಣಿ

ಉದ್ಯೋಗ ಮೇಳ: ಉದ್ದೇಶ ಈಡೇರಲಿ

ಬೆಂಗಳೂರಿನಲ್ಲಿ ಜನವರಿ ಕೊನೆಯ ವಾರ ರಾಜ್ಯ ಮಟ್ಟದ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಅದಕ್ಕಾಗಿ ಸಚಿವರ ತಂಡ ರಚಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ ಸ್ನಾತಕ, ಸ್ನಾತಕೋತ್ತರ ಪದವಿ ಪಡೆದಿರುವ ವಿದ್ಯಾರ್ಥಿಗಳು ಉದ್ಯೋಗದ ಅನ್ವೇಷಣೆಯಲ್ಲಿದ್ದಾರೆ. ಈ ಉದ್ಯೋಗ ಮೇಳದಿಂದ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವ ನಿರೀಕ್ಷೆಯಿದೆ.

ಮೇಳಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಬರುವ ಅಭ್ಯರ್ಥಿಗಳಿಗೆ ಸರ್ಕಾರವು ಸಾರಿಗೆ, ವಸತಿ, ಊಟೋಪಚಾರದ ವ್ಯವಸ್ಥೆ ಮಾಡಬೇಕು. ಉದ್ಯೋಗದಾತರು ಉದ್ಯೋಗ ಮೇಳ ಮುಗಿದ ದಿನವೇ ತಾವು ಎಷ್ಟು ಮಂದಿಗೆ ಉದ್ಯೋಗ ನೀಡಿದ್ದೇವೆ ಎಂಬ ವಿವರವನ್ನು ಸರ್ಕಾರಕ್ಕೆ ತಿಳಿಸಬೇಕು. ನಂತರ, ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಉದ್ಯೋಗದಾತರು ಉದ್ಯೋಗ ನೀಡಿದ್ದಾರೆಯೇ ಎಂಬುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು. ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗ ದೊರೆತರೆ, ಯುವನಿಧಿ ಗ್ಯಾರಂಟಿಗೆ ಸರ್ಕಾರ ಮಾಡಬೇಕಾದ ವೆಚ್ಚ ಕಡಿಮೆ ಆಗುತ್ತದೆ. ಜೊತೆಗೆ, ನಿರುದ್ಯೋಗಿಗಳಿಗೆ ಉದ್ಯೋಗ ಸಿಗಲಿದೆ. ಉದ್ಯೋಗ ಮೇಳವನ್ನು ಕಾಟಾಚಾರಕ್ಕೆ ಮಾಡದೆ, ನಿರೀಕ್ಷೆ ಇಟ್ಟುಕೊಂಡು ಬಂದವರಿಗೆ ಉದ್ಯೋಗ ಕೊಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಭಿನ್ನವಾಗಲಿ 2024

ಜನನಾಯಕರ ಮುನಿಸು ಮಾತಿನ ಸಂಘರ್ಷ
ರಾಷ್ಟ್ರೀಯ ಹಾಗೂ ಪ್ರಾದೇಶಿಕ
ರಾಜಕೀಯ ಪಕ್ಷಗಳ ಏಳುಬೀಳು
ಆಟೋಟಗಳಲ್ಲಿ ಗೆಲುವು, ಸೋಲು
ಇದು, ಮೂರು ವಾಕ್ಯಗಳ 2023ರ ಹಿನ್ನೋಟ
ಆಶಿಸೋಣ, ಇವೆಲ್ಲಕ್ಕಿಂತ ಭಿನ್ನವಾದ 2024

ಕಡೂರು ಫಣಿಶಂಕರ್, ಬೆಂಗಳೂರು

ಜನಜಾಗೃತಿ: ಪ್ರಶಂಸನೀಯ ಕಾರ್ಯ

‘ನನ್ನ ಮೈತ್ರಿ’ ಎಂಬ ಯೋಜನೆಗೆ ಹಿರಿತೆರೆ ನಟಿ ಸಪ್ತಮಿ ಗೌಡ ಅವರನ್ನು ರಾಯಭಾರಿಯನ್ನಾಗಿ ಮಾಡಿ, ಬಿಗ್‌ಬಾಸ್ ರಿಯಾಲಿಟಿ ಷೋಗೆ ಕಳುಹಿಸುವ ಮೂಲಕ, ಆ ಯೋಜನೆಯ ಉಪಯೋಗ ಹಾಗೂ ಪೂರ್ಣ ಮಾಹಿತಿಯು ರಾಜ್ಯದ ಜನರಿಗೆ ತಿಳಿಯುವ ಹಾಗೆ ಮಾಡಿದ ಆರೋಗ್ಯ ಇಲಾಖೆಯ ಕಾರ್ಯ ಪ್ರಶಂಸನೀಯ. ಈ ಯೋಜನೆಯು ಮುಟ್ಟಿನ ಕಪ್ ಬಳಕೆಯನ್ನು ಉತ್ತೇಜಿಸುತ್ತದೆ. ಪುನರ್ಬಳಕೆ ಮಾಡಬಹುದಾದ ಈ ಕಪ್ ಪರಿಸರಸ್ನೇಹಿಯಾಗಿದ್ದು ಸರಳ ವಿಧಾನದಿಂದ ಕೂಡಿದೆ. ಇದರಿಂದ ಸಾಮಾನ್ಯವಾಗಿ ಹೆಣ್ಣುಮಕ್ಕಳು ಬಳಸುವ ನ್ಯಾಪ್ಕಿನ್‌ಗಿಂತ ದುಪ್ಪಟ್ಟು ನೈರ್ಮಲ್ಯ ಕಾಯ್ದುಕೊಳ್ಳಬಹುದಾಗಿದೆ.

ಮಹಿಳೆಯರ ಸುರಕ್ಷತೆಗೆ ಪೂರಕವಾದ ಇಂತಹ ಸೂಕ್ಷ್ಮ ವಿಚಾರದ ಬಗ್ಗೆ ರಿಯಾಲಿಟಿ ಷೋ ಮೂಲಕ ಅರಿವು ಮೂಡಿಸಿದ ಇಲಾಖೆಯ ಕಾರ್ಯ ಮಾದರಿಯದ್ದಾಗಿದೆ. ಇದೇ ತೆರನಾಗಿ ಎಲ್ಲಾ ಇಲಾಖೆಗಳು ತಮ್ಮ ತಮ್ಮ ನವೀನ ಯೋಜನೆಗಳನ್ನು ಟಿ.ವಿ. ಷೋಗಳ ಮೂಲಕ ಬೆಳಕಿಗೆ ತರುವುದರಿಂದ, ಯೋಜನೆಗಳು ಸುಲಭವಾಗಿ ಜನರನ್ನು ತಲುಪಿ ಯಶಸ್ಸು ಕಾಣಲು ಸಾಧ್ಯ.

ಮಲ್ಲಮ್ಮ ಪೂಜಾರಿ, ವಿಜಯಪುರ

ಉಲ್ಫಾ ಜೊತೆಗಿನ ಒಪ್ಪಂದ: ಹಿಂಜರಿಕೆ ದೂರವಾಗಲಿ

ಕೇಂದ್ರ ಸರ್ಕಾರವು ಉಲ್ಫಾ ಸಂಘಟನೆಯೊಂದಿಗಿನ ಒಪ್ಪಂದಕ್ಕೆ ಸಹಿ ಹಾಕಿರುವ ಸುದ್ದಿ (ಪ್ರ.ವಾ., ಡಿ.30) ಓದಿ ನೆಮ್ಮದಿ ಉಂಟಾಯಿತು. ಅದರ ಹಿರಿಯ ನಾಯಕ ಪರೇಶ್ ಬರೂವ ಇದರಿಂದ ಅಂತರ ಕಾಯ್ದುಕೊಂಡಿರುವುದು ಆತಂಕಕಾರಿ. ಅಸ್ಸಾಂ ಹೋರಾಟಗಾರರ ನಡುವೆಯೂ ಈ ಹಿಂದೆ ಭಿನ್ನಾಭಿಪ್ರಾಯಗಳು ಉಂಟಾಗಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. 2015ರಲ್ಲಿ ನಾಗಾ ಫ್ರೇಮ್‌ವರ್ಕ್ ಒಪ್ಪಂದ ಏರ್ಪಟ್ಟರೂ ಒಂದು ಬಣ ಅದರಿಂದ ದೂರ ಉಳಿಯಿತು, ಪ್ರಕ್ರಿಯೆಯೂ ಪೂರ್ಣಗೊಂಡಿಲ್ಲ. ಪ್ರಸ್ತುತ ಒಪ್ಪಂದದ ಅನುಷ್ಠಾನಕ್ಕೆ ಎನ್‌ಆರ್‌ಸಿ- ಸಿಎಎ ಬಗೆಗಿನ ಅಂತಿಮ ತೀರ್ಪು ಹಾಗೂ ಡಿಲಿಮಿಟೇಷನ್ ಸರಿಯಾಗಿ ನಡೆಯುವುದು ನಿರ್ಣಾಯಕ. ಆದ್ದರಿಂದ ‘ಸಾಧಿಸಿದ್ದೇವೆ, ಚರಿತ್ರಾರ್ಹ’ ಎಂದು ಈಗಲೇ ಹೇಳಿಕೊಳ್ಳುವುದು ಅವಸರದ ನಡೆಯಾದೀತು.

ಒಪ್ಪಂದ ಕಾರ್ಯಗತಗೊಂಡಾಗ ಹೊರಗಿನವರಿಗೆ (ಉದಾಹರಣೆಗೆ, ನಾನು ಎರಡು ಬಾರಿ ಹೋಗಿ ಬಂದಿದ್ದೇನೆ) ಈಶಾನ್ಯದ ರಾಜ್ಯಗಳಿಗೆ ಭೇಟಿ ನೀಡಲು ಹಿಂಜರಿಕೆ ಕಡಿಮೆಯಾಗುತ್ತದೆ. ಅಸ್ಸಾಮಿನ ಯುವಕರಿಗೆ ಜೀವನೋಪಾಯ ಅರಸಿ ಬೆಂಗಳೂರನ್ನೂ ಒಳಗೊಂಡಂತೆ ಬೇರೆ ರಾಜ್ಯಗಳ ಮಹಾನಗರಗಳನ್ನು ಸೇರಿಕೊಳ್ಳುವ ಅನಿವಾರ್ಯ ಇಲ್ಲವಾಗುತ್ತದೆ. ಸೇತುವೆಗಳು, ರೈಲು- ವಿಮಾನ ಮಾರ್ಗ ನಿರ್ಮಾಣಗಳಷ್ಟೇ ಬ್ರಹ್ಮಪುತ್ರ ನದಿಯ ಪ್ರವಾಹ ನಿಯಂತ್ರಣವೂ ಆ ಪ್ರದೇಶದ ಸುಸ್ಥಿತಿಗೆ ಮುಖ್ಯ. ಉಲ್ಫಾ ನಾಯಕರು ‘ನಮಗೆ ರಾಜಕೀಯ ಆಕಾಂಕ್ಷೆಗಳಿಲ್ಲ’ ಎಂದಿದ್ದಾರೆ, ಹಾಗೆಯೇ ನಡೆದುಕೊಳ್ಳಲಿ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಆಘಾತಕಾರಿ ಸುದ್ದಿ...

ಚಿತ್ರದುರ್ಗದಲ್ಲಿನ ಪಾಳುಮನೆಯೊಂದರಲ್ಲಿ ಐವರ ಅಸ್ಥಿಪಂಜರ ಪತ್ತೆಯಾಗಿದ್ದು, ಈ ವ್ಯಕ್ತಿಗಳು ಬಹುಶಃ 2019ರಲ್ಲಿಯೇ ಮೃತಪಟ್ಟಿರಬಹುದು ಎಂಬ ಸುದ್ದಿಯನ್ನು ಓದಿ ನಿಜಕ್ಕೂ ಆಘಾತವಾಯಿತು. ಜನನಿಬಿಡ ನಗರದ ಮನೆಯಿಂದ ಸತ್ತ ಜೀವಿಯ ಕೊಳೆತ ವಾಸನೆ ಬರುತ್ತಿದ್ದರೂ ಅದನ್ನು ನಿರ್ಲಕ್ಷಿಸಿದ ನೆರೆಹೊರೆಯವರು, ಇಡೀ ಸಮುದಾಯ, ಸಂಬಂಧಪಟ್ಟ ಇಲಾಖೆಗಳು, ಅಷ್ಟೇ ಏಕೆ ತನ್ನನ್ನು ಸಂವೇದನೆಯುಳ್ಳ ಸಮಾಜಜೀವಿ, ಸಂಘಜೀವಿ ಎಂದೆಲ್ಲ ಕರೆದುಕೊಳ್ಳುವ ಇಡೀ ಮನುಷ್ಯ ಕುಲವೇ ನಾಚಿಕೆಪಡುವಂತಹ ಪ್ರಕರಣ ಇದಾಗಿದೆ. ಇನ್ನು ಮುಂದಾದರೂ ಕನಿಷ್ಠ ನೆರೆಹೊರೆಯವರ ಬಗ್ಗೆ ಸ್ವಲ್ಪಮಟ್ಟಿನ ಕಾಳಜಿಯನ್ನು ಬೆಳೆಸಿಕೊಳ್ಳಬೇಕಾದುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ.

ಚಂದನಶಂಕರ, ವರಕೋಡು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

2024 ಒಂದು ಮುನ್ನೋಟ

ಶಾಂತಿ, ಸಮೃದ್ಧಿ, ಸೌಹಾರ್ದದ ನಿರೀಕ್ಷೆಯ ಹೊಸ ಬೆಳಗು

ಪ್ರಜಾವಾಣಿ ವಾರ್ತೆ

2024, ಲೋಕಸಭೆ ಚುನಾವಣೆಯ ವರ್ಷ. ಕಳೆದ ವರ್ಷ ರಾಜಕೀಯವಾಗಿ ಹಲವು ಬೆಳವಣಿಗೆಗಳು ನಡೆದವು. 2023ರ ಅಂತ್ಯಕ್ಕೆ ನಡೆದ ರಾಜ್ಯ ವಿಧಾನಸಭಾ ಚುನಾವಣೆಗಳು ಮತ್ತು ಅದರ ಫಲಿತಾಂಶ ಕೂಡ ಹಲವು ಚರ್ಚೆಗಳನ್ನು ಹುಟ್ಟುಹಾಕಿದೆ. ಲೋಕಸಭೆ ಚುನಾವಣೆಯು ಬರುತ್ತಿದ್ದಂತೆಯೇ ರಾಜಕೀಯ ಪಕ್ಷಗಳು ತಮ್ಮ ಒಲವು–ನಿಲುವುಗಳನ್ನು ಸ್ಪಷ್ಟವಾಗಿ ತೋರುತ್ತಿವೆ.

2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇದ್ದ ಸ್ಥಿತಿ ಈಗ ಇಲ್ಲ. 28 ವಿರೋಧ ಪಕ್ಷಗಳು 'ಇಂಡಿಯಾ' ಮೈತ್ರಿಕೂಟವನ್ನು ರೂಪಿಸಿಕೊಂಡಿವೆ. ಎನ್‌ಡಿಎ ಜೊತೆಗಿದ್ದ ಎಐಎಡಿಎಂಕೆ ಪಕ್ಷವು ಅದರಿಂದ ಹೊರಬಂದಿದೆ. ಜೆಡಿ (ಯು) ಹಾಗೂ ಅಕಾಲಿ ದಳವು ಈ ಹಿಂದೆಯೇ ಹೊರಬಂದಿದ್ದವು. 2019ರ ವೇಳೆಗೆ ಎಐಎಡಿಎಂಕೆ, ಜೆಡಿ(ಯು) ಹಾಗೂ ಅಕಾಲಿ ದಳವು ಎನ್‌ಡಿಎನ ಭಾಗವೇ ಆಗಿತ್ತು. ಆದರೆ, ಈ ಚುನಾವಣೆ ವೇಳೆಗೆ ಈ ಪಕ್ಷಗಳು ಬೇರೆ ಬೇರೆ ಹಾದಿ ಹಿಡಿದಿವೆ. ಆದ್ದರಿಂದ, ಈ ಎಲ್ಲ ಕಾರಣಗಳಿಗಾಗಿ ಈ ಬಾರಿಯ ಚುನಾವಣೆಯಲ್ಲಿ ಈ ಹಿಂದಿನ ಚುನಾವಣೆಗಳಿಗಿಂತ ಭಿನ್ನ ಹೋರಾಟ, ಭಿನ್ನ ಸಂಕಥನಗಳು ರೂಪುಗೊಳ್ಳುವ ಲಕ್ಷಣಗಳು ಕಾಣಿಸುತ್ತಿವೆ.

ಈ ಬಾರಿಯ ಚುನಾವಣೆಯನ್ನು ಒಂದು ರೂಪಕವಾಗಿ ನೋಡುವುದಾದರೆ ಅಥವಾ ಅದನ್ನು ಸೈದ್ಧಾಂತಿಕವಾಗಿ ಗಮನಿಸುವುದಾದರೆ ಎರಡು ಅಂಶಗಳು ಪ್ರಮುಖವಾಗುತ್ತವೆ. ಒಂದು, ಜನವರಿ 22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಯ್ಕೆ ಮಾಡಬೇಕು ಎನ್ನುವ ಚರ್ಚೆ ಮುನ್ನೆಲೆಗೆ ಬಂದಿದ್ದು. ಈ ಬಗ್ಗೆ ಈಗಾಗಲೇ ಚರ್ಚೆಗಳು, ಸಂಕಥನಗಳು ಆರಂಭವಾಗಿವೆ. ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಈ ಬಗ್ಗೆ ಇತ್ತೀಚೆಗೆ ಎಕ್ಸ್‌ನಲ್ಲಿ ಬರೆದುಕೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಹಿಂದೂ ಹೃದಯ ಸಾಮ್ರಾಟ' ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎಂದು ಅವರು ಹೇಳಿದ್ದರು. ಖರ್ಗೆ ಅವರ ರಾಜಕೀಯ ನಿಲುವು, ಅವರು ಪ್ರತಿನಿಧಿಸುವ ಜಾತಿ–ಸಮುದಾಯ, ಅವರ ಹಿರಿತನ... ಈ ಎಲ್ಲ ಕಾರಣಗಳಿಗಾಗಿ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿಸುವುದನ್ನು ಪ್ರತಿ–ರೂಪಕವಾಗಿ ನೋಡಬಹುದು.


ಇನ್ನೊಂದು, ಜನವರಿ 14ರಿಂದ ಆರಂಭವಾಗಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ ನ್ಯಾಯ ಯಾತ್ರೆ'. 2022–23ರಲ್ಲಿ ನಡೆದಿದ್ದ 'ಭಾರತ ಜೋಡೊ ಯಾತ್ರೆ'ಯು ಪಕ್ಷಕ್ಕೆ ದೊಡ್ಡ ಮಟ್ಟದ ಉತ್ಸಾಹ ಹಾಗೂ ವಿಶ್ವಾಸವನ್ನು ತಂದುಕೊಟ್ಟಿತ್ತು. ಲೋಕಸಭೆ ಚುನಾವಣೆಯ ಹೊತ್ತಿನಲ್ಲಿ ನಡೆಯುವ 'ನ್ಯಾಯ ಯಾತ್ರೆ' ಕೂಡ ಪಕ್ಷಕ್ಕೆ ಇನ್ನಷ್ಟು ಹುಮ್ಮಸ್ಸು ತಂದುಕೊಡಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಜೊತೆಗೆ, ಈ ಯಾತ್ರೆಯು ಮಣಿಪುರದಿಂದ ಆರಂಭವಾಗುವುದರಿಂದ ಹೊಸ ಹೊಸ ಚರ್ಚೆಗಳನ್ನೂ ಇದು ಹುಟ್ಟುಹಾಕಬಹುದು. ಯಾತ್ರೆಯ ಹಾದಿಯ ಬಗ್ಗೆ ಕಾಂಗ್ರೆಸ್‌ನಲ್ಲಿ ಅಪಸ್ವರವೂ ಎದ್ದಿದೆ. ವರ್ಷದ ಆರಂಭದಿಂದಲೇ ಈ ಎರಡು ರೂಪಕಗಳ ಅಥವಾ ಸಿದ್ಧಾಂತಗಳ ಚರ್ಚೆಗಳು ಹೆಚ್ಚು ಸ್ಪಷ್ಟವಾಗುತ್ತವೆ ಮತ್ತು ಇವೇ ಲೋಕಸಭೆ ಚುನಾವಣೆಯ ಫಲಿತಾಂಶ ನಿರ್ಧಾರದ ಅಂಶಗಳೂ ಆಗಬಹುದು.

ದಕ್ಷಿಣ ಮತ್ತು ಉತ್ತರ ಭಾರತ ಎಂಬ ವಿಭಜನೆ ಕಳೆದ ವರ್ಷದ ಅಂತ್ಯದಲ್ಲಿ ನಡೆದ ಐದು ರಾಜ್ಯಗಳ ಚುನಾವಣೆಯ ಫಲಿತಾಂಶದ ವಿಶ್ಲೇಷಣೆಯಲ್ಲಿ ಕಂಡುಬಂದ ಪ್ರಮುಖ ಅಂಶ. ಮೊದಲೇ ಹೇಳಿದ ಹಾಗೆ ಎನ್‌ಡಿಎ ಜೊತೆಯಲ್ಲಿ ಈಗ ಎಐಎಡಿಎಂಕೆ ಇಲ್ಲ. ಇದು ಕೂಡ ಪ್ರಮುಖ ಅಂಶವಾಗಲಿದೆ. ಈ ಎಲ್ಲ ಅಂಶಗಳು ಚುನಾವಣೆಯ ಫಲಿತಾಂಶದ ಮೇಲೆ ಹೇಗೆಲ್ಲಾ ಪರಿಣಾಮ ಬೀರಲಿದೆ ಎನ್ನುವುದು ಬೇರೆ ಚರ್ಚೆ. ಆದರೆ, ಈ ಬಾರಿಯ ಚುನಾವಣೆಯು ಒಂದು ವಿಷಯವನ್ನಂತೂ ಸ್ಪಷ್ಟಪಡಿಸಲಿದೆ. ಜನರು ಸೈದ್ಧಾಂತಿಕವಾಗಿ ಹೆಚ್ಚು ಹೆಚ್ಚು ಸ್ಪಷ್ಟತೆ ಪಡೆಯುತ್ತಾರೆ. ಒಂದು ವೇಳೆ, 'ಇಂಡಿಯಾ' ಮೈತ್ರಿಕೂಟವು ಅಧಿಕಾರ ಹಿಡಿಯಲು ಸಫಲವಾಗದಿದ್ದಲ್ಲಿ, ಮೈತ್ರಿಕೂಟದ ಪಕ್ಷಗಳಲ್ಲಿ ಹತಾಶೆ ಮೂಡಬಹುದು ಅಥವಾ ಆಯ್ಕೆಗೊಂಡ ಸರ್ಕಾರದ ವಿರುದ್ಧ ಇನ್ನಷ್ಟು ಪ್ರಬಲವಾಗಿ ಹೋರಾಡುವ ಸಂಕಲ್ಪವನ್ನು ಮೂಡಿಸಬಹುದು.

ವಿದೇಶಿ ಚುನಾವಣೆಗಳು: ಅಮೆರಿಕದ ಅಧ್ಯಕ್ಷೀಯ ಚುನಾವಣೆಯು ಇದೇ ವರ್ಷ ನಡೆಯಲಿದೆ. ಪ್ರಾಥಮಿಕ ಚುನಾವಣೆ ಮತ್ತು ಉಮೇದುವಾರಿಕೆ ಪ್ರಕ್ರಿಯೆಗಳು ಜನವರಿ ಮೊದಲನೇ ವಾರದಲ್ಲಿ ಆರಂಭವಾಗಲಿದೆ. ಹಾಲಿ ಅಧ್ಯಕ್ಷ ಜೋ ಬೈಡನ್ ಅವರಿಗೆ ಇದು ಮಹತ್ವದ ಚುನಾವಣೆಯಾಗಿದೆ. ಅವರ ಹಣಕಾಸು ನೀತಿಗಳು ಮತ್ತು ವಿದೇಶಾಂಗ ನೀತಿಗಳು ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸಲಿವೆ ಎಂದು ವಿಶ್ಲೇಷಿಸಲಾಗಿದೆ. ನವೆಂಬರ್‌ನಲ್ಲಿ ಫಲಿತಾಂಶ ಪ್ರಕಟವಾಗಲಿದೆ.

ಪಾಕಿಸ್ತಾನದಲ್ಲಿ ಈ ವರ್ಷ ಚುನಾವಣೆ ನಡೆಯಲಿದೆ, ಹಂಗಾಮಿ ಸರ್ಕಾರದ ಆಡಳಿತ ಕೊನೆಯಾಗಲಿದೆ. ಅಲ್ಲಿ ಆಯ್ಕೆಯಾಗುವ ಸರ್ಕಾರವು ಭಾರತದ ಜೊತೆಗಿನ ಸಂಬಂಧವನ್ನು ಯಾವ ರೀತಿ ನಿರ್ವಹಿಸಬಹುದು ಎಂಬುದು ಕುತೂಹಲಕರ. ಬ್ರಿಟನ್‌ನಲ್ಲಿ 2024ರಲ್ಲೇ ಚುನಾವಣೆಗೆ ಹೋಗುವುದಾಗಿ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ. ಸುನಕ್ ಅವರ ಸರ್ಕಾರದ ವೀಸಾ ನೀತಿಯು ಭಾರತೀಯ ವಿದ್ಯಾರ್ಥಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತ್ತು. ಬ್ರಿಟನ್‌ನಲ್ಲಿ ಈ ವರ್ಷವೇ ಚುನಾವಣೆ ನಡೆದರೆ, ಭಾರತಕ್ಕೂ ಅದು ಮಹತ್ವದ್ದಾಗಿರುತ್ತದೆ.

ಎಲ್ಲೆಲ್ಲಿದೆ ವಿಧಾನಸಭಾ ಚುನಾವಣೆ



'ಸುಪ್ರೀಂ' ಅಂಗಳ

ಸುಪ್ರೀಂ ಕೋರ್ಟ್ ಈ ವರ್ಷದಲ್ಲಿ ಮಹತ್ತರವಾದ ವಿಷಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ ಮತ್ತು ಕೆಲವು ಅರ್ಜಿಗಳಿಗೆ ಸಂಬಂಧಿಸಿದ ತೀರ್ಪನ್ನೂ ನೀಡಬೇಕಿದೆ. ಇಲ್ಲಿನ ಕೆಲವು ಅರ್ಜಿಗಳು ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತರುವಂತಹ ವಿಚಾರಗಳಿಗೆ ಸಂಬಂಧಿಸಿರುವುದಾದರೆ, ಕೆಲವು ಅರ್ಜಿಗಳು ರಾಜಕೀಯವಾಗಿ ಮಹತ್ವ ಪಡೆದವುಗಳಾಗಿವೆ.

ಹಣಕಾಸು ಮಸೂದೆ (ಮನಿ ಬಿಲ್): ತೆರಿಗೆ ಬದಲಾವಣೆ, ಸಾಲ ಮತ್ತು ಸರ್ಕಾರದ ವೆಚ್ಚಗಳಿಗೆ ಸಂಬಂಧಿಸಿದ ಹಣಕಾಸು ಮಸೂದೆಯ (ಮನಿ ಬಿಲ್) ಹೆಸರಿನಲ್ಲಿ ಕಾನೂನು ಮಸೂದೆಗಳನ್ನು ಪಾಸು ಮಾಡಿಕೊಳ್ಳುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಇದೇ ಜನವರಿಯಲ್ಲಿ ಕೈಗೆತ್ತಿಕೊಳ್ಳಲಿದೆ. ಹಣಕಾಸು ಮಸೂದೆಗಳನ್ನು ಲೋಕಸಭೆಯಲ್ಲಿ ಅಂಗೀಕರಿಸಿದರೆ ಸಾಕು, ರಾಜ್ಯ ಸಭೆಯ ಅಂಗೀಕಾರ ಅಗತ್ಯವಿಲ್ಲ.




ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯಕ್ಕೆ ಹೆಚ್ಚಿನ ಅಧಿಕಾರ ಕೊಡುವ ಮಸೂದೆಯನ್ನು ಎನ್‌ಡಿಎ ಸರ್ಕಾರವು ಹಣಕಾಸು ಮಸೂದೆಯ ಹೆಸರಿನಲ್ಲಿ ಅಂಗೀಕರಿಸಿಕೊಂಡು, ಜಾರಿಗೆ ತಂದಿತ್ತು. ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹಲವು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಜಾರಿ ನಿರ್ದೇಶನಾಲಯಕ್ಕೆ ಹೆಚ್ಚಿನ ಅಧಿಕಾರ ಕೊಟ್ಟ ಕ್ರಮವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಆದರೆ ಕಾನೂನು ಮಸೂದೆಗಳನ್ನು ಹಣಕಾಸು ಮಸೂದೆಗಳ ಹೆಸರಿನಲ್ಲಿ ಅಂಗೀಕರಿಸಿಕೊಳ್ಳುವ ಕ್ರಮದ ಸಾಂವಿಧಾನಿಕ ಸಿಂಧುತ್ವವನ್ನು ವಿಸ್ತೃತ ಪೀಠದ ಪರಿಶೀಲನೆಗೆ ನೀಡಿತ್ತು.

ಬಿಲ್ಕಿಸ್ ಬಾನು ಪ್ರಕರಣ: ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದ 11 ಅಪರಾಧಿಗಳನ್ನು ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮುನ್ನವೇ ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ಕ್ರಮದ ವಿರುದ್ಧದ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಈ ಅರ್ಜಿಗೆ ಸಂಬಂಧಿಸಿದ ತೀರ್ಪು ಈ ವರ್ಷ ಬರುವ ನಿರೀಕ್ಷೆ ಇದೆ.

ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳು: ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರ ಪ್ರದೇಶದ ಶೈಕ್ಷಣಿಕ ಸಂಸ್ಥೆಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಸಂಖ್ಯೆ ಶೇ25–ಶೇ50ರಷ್ಟು ಇದ್ದರೆ, ಅವುಗಳಿಗೆ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳ ಮಾನ್ಯತೆ ನೀಡಲಾಗುತ್ತದೆ. ಈ ಮಾನದಂಡವನ್ನು ಮರುಪರಿಶೀಲಿಸಿ ಎಂದು 2023ರಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗವು ಈ ನಾಲ್ಕೂ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿತ್ತು. ಆಯೋಗದ ಈ ಕ್ರಮದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳ ವಿಚಾರಣೆಯನ್ನು ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಜನವರಿ ಎರಡನೇ ವಾರದಲ್ಲಿ ನಡೆಸಲಿದೆ.

'ಕಲ್ಕಿ'ಯಿಂದ 'ಪುಷ್ಪ'ನ ರೂಲ್ ತನಕ...



'ಫೈಟರ್' ಚಿತ್ರದಲ್ಲಿ ಹೃತಿಕ್ ರೋಶನ್, ದೀಪಿಕಾ ಪಡುಕೋಣೆ

2023ರ ಅಂತ್ಯಕ್ಕೆ ಸ್ಯಾಂಡಲ್‌ವುಡ್‌ನಲ್ಲಿ 220ಕ್ಕೂ ಹೆಚ್ಚು ಸಿನಿಮಾಗಳು ತೆರೆ ಕಂಡರೂ ಗೆಲುವು ಕಂಡಿದ್ದು ಬೆರಳೆಣಿಕೆಯಷ್ಟು ಮಾತ್ರ. ಬಾಲಿವುಡ್, ಟಾಲಿವುಡ್, ಮಾಲಿವುಡ್‌ಗೂ ಈ ವರ್ಷ ಅಷ್ಟೇನೂ ಸಿಹಿಯಾಗಿರಲಿಲ್ಲ. ಆದಾಗ್ಯೂ 2024ರಲ್ಲಿ ಸೂಪರ್‌ಸ್ಟಾರ್‌ಗಳ ಸಾಲು,ಸಾಲು ಸಿನಿಮಾಗಳಿರುವುದು ಒಂದು ರೀತಿ ಆಶಾದಾಯಕವಾಗಿದೆ.

ಸತೀಶ್ ನೀನಾಸಂ ನಟನೆಯ 'ಮ್ಯಾಟ್ನಿ' 2023ರ ಡಿಸೆಂಬರ್‌ಗೆ ತೆರೆ ಕಾಣಬೇಕಿತ್ತು. ಕಾರಣಾಂತರಗಳಿಂದ 2024ರಲ್ಲಿ ಚಿತ್ರ ತೆರೆಗೆ ಬರಲಿದೆ. 'ದುನಿಯಾ' ವಿಜಯ್ ನಿರ್ದೇಶಿಸಿ, ನಟಿಸಿರುವ 'ಭೀಮ' ಸಿನಿಮಾ ಕೂಡ ತೆರೆಗೆ ಬರಲು ಸಿದ್ಧವಿದೆ. ಸುದೀಪ್ ಅಭಿನಯದ 'ಮ್ಯಾಕ್ಸ್' ಚಿತ್ರೀಕರಣ ಕೂಡ ಭರದಿಂದ ಸಾಗಿದ್ದು ಈ ವರ್ಷ ತೆರೆಗೆ ಬರುವುದು ಖಚಿತ. 'ಘೋಸ್ಟ್', 'ಜೈಲರ್' ಗೆಲುವಿನ ಬಳಿಕ ಶಿವರಾಜ್‌ಕುಮಾರ್ ನಟನೆಯ ಸಿನಿಮಾಗಳತ್ತ ನಿರೀಕ್ಷೆ ಹೆಚ್ಚಾಗಿದೆ. ಅವರ 'ಕರಟಕ ದಮನಕ', '45', 'ಭೈರತಿ ರಣಗಲ್' ಚಿತ್ರಗಳು 2024ರಲ್ಲಿ ತೆರೆ ಕಾಣುವ ಸಾಧ್ಯತೆಯಿದೆ. ಉಪೇಂದ್ರ ನಟಿಸಿ, ನಿರ್ದೇಶಿಸಿರುವ 'ಯುಐ' ಹಾಗೂ ನಟನೆಯ 'ಬುದ್ಧಿವಂತ-2' ಈ ವರ್ಷದ ಬಹುನಿರೀಕ್ಷಿತ ಚಿತ್ರಗಳು. ಧ್ರುವ ಸರ್ಜಾ ನಟನೆಯ 'ಮಾರ್ಟಿನ್', 'ಕೆಡಿ' ಸಿನಿಮಾಗಳ ಕುರಿತು ನಿರೀಕ್ಷೆ ಹೆಚ್ಚಿದೆ. ಡಾಲಿ ಧನಂಜಯ ನಟನೆಯ 'ಉತ್ತರಕಾಂಡ' ಕೂಡ ತೆರೆ ಕಾಣಲು ಸಿದ್ಧವಿದೆ. ಯಶ್ 'ಟಾಕ್ಸಿಕ್' ಹಾಗೂ ರಿಷಬ್ ಶೆಟ್ಟಿ ಅವರ 'ಕಾಂತಾರ–2' ಸಿನಿಮಾಗಳ ಕೆಲಸ ಪ್ರಾರಂಭವಾಗಲಿವೆ. 'ಸಪ್ತ ಸಾಗರದ' ಬಳಿಕ ರಕ್ಷಿತ್ ಶೆಟ್ಟಿ 'ರಿಚರ್ಡ್ ಆ್ಯಂಟನಿ'ಯಲ್ಲಿ ಮಗ್ನರಾಗಲಿದ್ದಾರೆ.

2024ರ ನಿರೀಕ್ಷಿತ ಸಿನಿಮಾಗಳು

ದಕ್ಷಿಣ ಭಾರತೀಯ ಸಿನಿಮಾಗಳೇ ಅಬ್ಬರಿಸುತ್ತಿರುವ ಹೊತ್ತಿನಲ್ಲಿ ಹೃತಿಕ್ ರೋಷನ್, ಕತ್ರಿನಾ ಕೈಫ್ ಅವರ 'ವಾರ್- 2' ಬಾಲಿವುಡ್‌ನಲ್ಲಿ ನಿರೀಕ್ಷೆ ಮೂಡಿಸಿರುವ ಚಿತ್ರ. ಹೃತಿಕ್ ರೋಶನ್, ದೀಪಿಕಾ ಪಡುಕೋಣೆ ಅಭಿನಯದ 'ಫೈಟರ್' ಜ.25ರಂದು ತೆರೆಗೆ ಬರುತ್ತಿದೆ. ಅಜಯ್ ದೇವಗನ್ ಅವರ 'ಸಿಂಗಂ ಅಗೇನ್', ಕತ್ರಿನಾ ಕೈಫ್, ವಿಜಯ್ ಸೇತುಪತಿ ಜೋಡಿಯ 'ಮೆರ್ರಿ ಕ್ರಿಸ್‌ಮಸ್', ಪಂಕಜ್ ತ್ರಿಪಾಠಿ ಅಭಿನಯದ ಅಟಲ್ ಬಿಹಾರಿ ವಾಜಪೇಯಿ ಅವರ ಜೀವನಗಾಥೆ 'ಮೇ ಅಟಲ್ ಹೂಂ' ಚಿತ್ರಗಳು ಈ ವರ್ಷ ತೆರೆಗೆ ಬರಲಿರುವ ಪ್ರಮುಖ ಸಿನಿಮಾಗಳು.

ತೆಲುಗು ಅಲ್ಲು ಅರ್ಜುನ್ ಅಭಿನಯದ 'ಪುಷ್ಪ 2: ದಿ ರೂಲ್' ಈ ವರ್ಷ ಟಾಲಿವುಡ್‌ನಲ್ಲಿ ಬಹುನಿರೀಕ್ಷಿತ ಚಿತ್ರ. ಮಹೇಶ್ ಬಾಬು ಅಭಿನಯದ 'ಗುಂಟೂರು ಕಾರಂ' ಚಿತ್ರದ ಘಾಟು ಜೋರಾಗಿದೆ. ಪ್ರಶಾಂತ್ ವರ್ಮಾ ನಿರ್ದೇಶನದ 'ಹನುಮಾನ್' ಚಿತ್ರ ಜ.12ಕ್ಕೆ ತೆರೆ ಕಾಣುತ್ತಿದ್ದು, ಸಖತ್ ಸುದ್ದಿಯಲ್ಲಿದೆ. ಜೂನಿಯರ್ ಎನ್‌ಟಿಆರ್ ನಟಿಸಿರುವ 'ದೇವರ–ಭಾಗ 1' ಕುರಿತು ನಿರೀಕ್ಷೆ ಹೆಚ್ಚಿದೆ. ಪ್ರಭಾಸ್–ದೀಪಿಕಾ ಪಡುಕೋಣೆ ಜೋಡಿಯ 'ಕಲ್ಕಿ 2898 ಎಡಿ' ಈ ವರ್ಷದ ಬಿಗ್‌ಬಜೆಟ್‌ನ ತೆಲುಗು ಸಿನಿಮಾ. ಕಮಲ್ ಹಾಸನ್, ದುಲ್ಕರ್ ಸಲ್ಮಾನ್, ಅಮಿತಾಭ್ ಬಚ್ಚನ್ ಕೂಡ ಈ ಚಿತ್ರದಲ್ಲಿರುವುದು ನಿರೀಕ್ಷೆಯನ್ನು ಇಮ್ಮಡಿಗೊಳಿಸಿದೆ.

ತಮಿಳಿನಲ್ಲಿ ಧನುಷ್ ಅಭಿನಯದ 'ಕ್ಯಾಪ್ಟನ್ ಮಿಲ್ಲರ್' ಈ ವರ್ಷ ಮೊದಲು ತೆರೆಗೆ ಬರಲಿರುವ ನಿರೀಕ್ಷಿತ ಸಿನಿಮಾ. ಶಿವರಾಜ್ ಕುಮಾರ್ ಕೂಡ ಈ ಚಿತ್ರದಲ್ಲಿದ್ದಾರೆ. ಪ.ರಂಜಿತ್ ನಿರ್ದೇಶಿಸಿ ವಿಕ್ರಂ, ಮಾಳವಿಕಾ ಮೋಹನ್ ಜೊತೆಯಾಗಿರುವ 'ತಂಗಾಲನ್' ಕೂಡ ಜನ ಕಾತುರತೆಯಿಂದ ಕಾಯುತ್ತಿರುವ ಚಿತ್ರ. ಕಮಲ್ ಹಾಸನ್, ಎಸ್.ಶಂಕರ್ ಜೋಡಿಯ 'ಇಂಡಿಯನ್–2', ರಜನಿಕಾಂತ್ ಅವರ 'ವೆಟ್ಟೈಯನ್' ಕೂಡ ಈ ವರ್ಷದ ಮಾಸ್ ಎಂಟರ್‌ಟೈನರ್ ಸಿನಿಮಾಗಳು. ವಿಜಯ್ ಸೇತುಪತಿ ಅವರ 'ವಿಡುದಲೈ–2' ಕೂಡ ತೆರೆಗೆ ಬರಲಿದೆ.

ಮೋಹನ್ ಲಾಲ್ ಅವರ 'ಮಲೈಕೋಟನ್ ವಾಲಿಬನ್', 'ಬರೋಜ್', ಪೃಥ್ವಿರಾಜ್ ಅವರ 'ಆಡುಜೀವಿತಂ' ಮೊದಲಾದವು ಮಲಯಾಳದಲ್ಲಿ ನಿರೀಕ್ಷೆ ಇರುವ ಚಿತ್ರಗಳು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಕ್ರೀಡಾಂಗಣ

ಜಗತ್ತಿನ ಕ್ರೀಡಾಪ್ರೇಮಿಗಳಿಗೆ ರಸದೌತಣ ನೀಡಲು 2024ನೇ ಇಸವಿಯು ಬಂದಿದೆ. ಇದು ಒಲಿಂಪಿಕ್ ವರ್ಷ. ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕೂಟವು ಶಾಂತಿ, ಸಹೋದರತ್ವ ಮತ್ತು ಮನೋಲ್ಲಾಸದ ಸಂದೇಶವನ್ನು ಹೊತ್ತು ತರಲಿದೆ. 2020ರ ಒಲಿಂಪಿಕ್ಸ್ ಟೋಕಿಯೊದಲ್ಲಿ ಕೋವಿಡ್ ಬಯೋಬಬಲ್‌ನಲ್ಲಿ ನಡೆದಿತ್ತು. ಇದೀಗ ಕೋವಿಡ್ ಭಯದಿಂದ ಬಹುತೇಕ ಮುಕ್ತವಾಗಿರುವ ಕಾಲಘಟ್ಟದಲ್ಲಿ ಪ್ಯಾರಿಸ್ ಒಲಿಂಪಿಕ್ ಕಣ್ಮನ ತುಂಬುವ ನಿರೀಕ್ಷೆ ಇದೆ. ಇದಲ್ಲದೇ ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ಪುರುಷರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯೂ ನಡೆಯಲಿದೆ. ಟೆನಿಸ್, ಫುಟ್‌ಬಾಲ್, ಹಾಕಿ, ಬ್ಯಾಡ್ಮಿಂಟನ್ ಸೇರಿದಂತೆ ಮತ್ತಿತರ ಕ್ರೀಡೆಗಳಲ್ಲಿಯೂ ಸಾಮರ್ಥ್ಯ ಮೆರೆಯಲು ಕ್ರೀಡಾಪಟುಗಳು ಸಿದ್ಧರಾಗಿದ್ದಾರೆ.

ಜನವರಿ	
5ರಿಂದ	ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ
8ರಿಂದ 28	ಇಂಡಿಯನ್ ಸೂಪರ್ ಕಪ್ ಫುಟ್‌ಬಾಲ್
9ರಿಂದ 14	ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್
14 ರಿಂದ 28	ಆಸ್ಟ್ರೇಲಿಯಾ ಓಪನ್ ಟೆನಿಸ್
ಫೆಬ್ರುವರಿ	
3 ಮತ್ತು 4	ಡೇವಿಸ್ ಕಪ್ ಟೆನಿಸ್: ಪಾಕಿಸ್ತಾನ–ಭಾರತ
19ರಿಂದ ಮಾ.22	ಪ್ರೈಮ್ ವಾಲಿಬಾಲ್ ಲೀಗ್
21ರಿಂದ ಮಾ.9	ಸಂತೋಷ್ ಟ್ರೋಫಿ ಫುಟ್‌ಬಾಲ್
22 ರಿಂದ ಮಾ. 17	ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್
ಮಾರ್ಚ್	
12ರಿಂದ 17	ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್
22 ರಿಂದ	ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್

ಏಪ್ರಿಲ್	
2ರಿಂದ 25	ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ (ಟೊರಾಂಟೊ)
20ರಿಂದ	ಡೈಮಂಡ್ ಲೀಗ್ ಅಥ್ಲೆಟಿಕ್ಸ್
27ರಿಂದ	ಥಾಮಸ್ ಕಪ್ ಬ್ಯಾಡ್ಮಿಂಟನ್
30 ರಿಂದ	ಇಂಡಿಯನ್ ಗ್ರ್ಯಾನ್‌ಪ್ರೀ ಅಥ್ಲೆಟಿಕ್ಸ್
ಮೇ	
25ರಂದು	ಎಫ್‌ಎ ಕಪ್ ಫುಟ್‌ಬಾಲ್ ಫೈನಲ್
26ರಿಂದ	ಫ್ರೆಂಚ್ ಓಪನ್ ಟೆನಿಸ್
ಜೂನ್	
4ರಿಂದ 30	ಐಸಿಸಿ ಪುರುಷರ ಟಿ20 ವಿಶ್ವಕಪ್ ಟೂರ್ನಿ
14ರಿಂದ	ಯೂರೊ ಫುಟ್‌ಬಾಲ್
20ರಿಂದ	ಕೊಪಾ ಅಮೆರಿಕ ಫುಟ್‌ಬಾಲ್
27ರಿಂದ	ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್

* ಕೊನೇ ಹಂತದಲ್ಲಿ ವೇಳಾಪಟ್ಟಿಯಲ್ಲಿ ಬದಲಾವಣೆಗಳ ಸಾಧ್ಯತೆಗಳು ಇರಬಹುದು

ಜುಲೈ	
1ರಿಂದ 14	ವಿಂಬಲ್ಡನ್ ಟೆನಿಸ್
26ರಿಂದ	ಪ್ಯಾರಿಸ್ ಒಲಿಂಪಿಕ್ಸ್ ಆರಂಭ
ಆಗಸ್ಟ್	
11ರಂದು	ಪ್ಯಾರಿಸ್ ಒಲಿಂಪಿಕ್ಸ್ ಮುಕ್ತಾಯ
26ರಿಂದ	ಅಮೆರಿಕ ಓಪನ್ ಟೆನಿಸ್
ಸೆಪ್ಟೆಂಬರ್	
ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್	
ಅಕ್ಟೋಬರ್	
4 ರಿಂದ 6	ಸ್ಯಾಫ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್
ನವೆಂಬರ್	
19ರಿಂದ ಡೇವಿಸ್ ಕಪ್ ಟೆನಿಸ್ ಫೈನಲ್	
ಡಿಸೆಂಬರ್	
11ರಿಂದ 15	ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್

ಯುದ್ಧದ ಕಾರ್ಮೋಡ



- 2022ರಲ್ಲಿ ಆರಂಭವಾಗಿದ್ದ ರಷ್ಯಾ–ಉಕ್ರೇನ್ ಯುದ್ಧವು ಈವರೆಗೂ ಮುಗಿದಿಲ್ಲ. 2023ರ ಡಿಸೆಂಬರ್ ಕೊನೆಯ ವಾರದಲ್ಲೂ ರಷ್ಯಾ ಉಕ್ರೇನ್‌ನ ಮೇಲೆ ದಾಳಿ ನಡೆಸಿದೆ. ಉಕ್ರೇನ್‌ಗೆ ಅಮೆರಿಕ, ಐರೋಪ್ಯ ಒಕ್ಕೂಟದ ದೇಶಗಳು ಶಸ್ತ್ರಾಸ್ತ್ರ ನೆರವು ಒದಗಿಸುತ್ತಿವೆ. ರಷ್ಯಾವು ಪದೇ–ಪದೇ ದಾಳಿ ನಡೆಸುತ್ತಲೇ ಇದೆ. 2024ರಲ್ಲೂ ಈ ಯುದ್ಧ ಮುಂದುವರಿಯಲಿದೆ
- ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ವಿರುದ್ಧ ಇಸ್ರೇಲ್ ನಡೆಸುತ್ತಿರುವ ಯುದ್ಧವು ಈ ವರ್ಷವೂ ಮುಂದುವರಿಯುತ್ತದೆ ಎಂದು ಅಂದಾಜಿಸಲಾಗಿದೆ. ಸಶಸ್ತ್ರ ಸಂಘರ್ಷದಿಂದ ಹಿಂದೆ ಸರಿಯುವ ಬಗ್ಗೆ ಎರಡೂ ಕಡೆ ಒಲವು ಇಲ್ಲದೇ ಇರುವುದರಿಂದ ಈ ಪ್ರದೇಶದಲ್ಲಿ ಮತ್ತಷ್ಟು ಸಾವು–ನೋವು ಸಂಭವಿಸಬಹುದು
- ಕೆಂಪು ಸಮುದ್ರ, ಅರಬ್ಬಿ ಸಮುದ್ರದ ವ್ಯಾಪ್ತಿಯಲ್ಲಿ ವ್ಯಾಪಾರಿ–ಸರಕು ಸಾಗಣೆ ಹಡಗುಗಳ ಮೇಲೆ ಡ್ರೋನ್ ದಾಳಿ ನಡೆದಿದೆ. ಕೆಲವು ಹಡಗುಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದ ಕೆಲವು ದೋಣಿಗಳನ್ನು ಅಮೆರಿಕದ ನೌಕಾಪಡೆ ಧ್ವಂಸಮಾಡಿದೆ. ಭಾರತದ ನೌಕಾಪಡೆಯೂ ದೊಡ್ಡ ಮಟ್ಟದಲ್ಲಿಯೇ ರಕ್ಷಣಾ ಕಾರ್ಯಾಚರಣೆಗೆ ಇಳಿದಿದೆ
- ಉತ್ತರ ಕೊರಿಯಾವು ದಕ್ಷಿಣ ಕೊರಿಯಾದ ಮೇಲೆ ಯುದ್ಧ ನಡೆಸುವ ಬೆದರಿಕೆಯನ್ನು ಹಾಕಿದೆ. 2022, 2023ರ ಯುದ್ಧೋನ್ಮಾನ ಮತ್ತೊಂದು ಹೊಸ ಯುದ್ಧಕ್ಕೆ ಕಾರಣವಾಗುವ ಅಪಾಯ ತಲೆದೋರಲಿದೆ


ಕರ್ನಾಟಕದಲ್ಲಿ...

- ಕಾಂಗ್ರೆಸ್‌ನ ಐದು ಗ್ಯಾರಂಟಿಗಳ ಪೈಕಿ ಕೊನೆಯ ಗ್ಯಾರಂಟಿ, ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ಹಣ ನೀಡುವ 'ಯುವನಿಧಿ' ಯೋಜನೆಗೆ ಜನವರಿ 12ರಂದು ಚಾಲನೆ ಸಿಗಲಿದೆ. ಈ ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ ₹3 ಸಾವಿರ, ಡಿಪ್ಲೊಮಾ ಹೊಂದಿರುವವರಿಗೆ ₹1,500 ಆರ್ಥಿಕ ನೆರವು ನೀಡಲಾಗುತ್ತದೆ. ಉದ್ಯೋಗ ಸಿಗುವವರೆಗೆ ಅಥವಾ ಎರಡು ವರ್ಷ ಅವಧಿಯಲ್ಲಿ ಯಾವುದು ಮೊದಲೋ ಅಲ್ಲಿಯವರಿಗೆ ಈ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ
- ಇತ್ತೀಚೆಗಷ್ಟೇ ಬಿಜೆಪಿ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಬಿ.ವೈ.ವಿಜಯೇಂದ್ರ ಅವರಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರುವ ಸವಾಲು ಇದೆ. 2019ರ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ 28ರಲ್ಲಿ 25 ಸ್ಥಾನಗಳನ್ನು ಗೆದ್ದುಕೊಂಡಿತ್ತು
- ಲೋಕಸಭೆ ಚುನಾವಣೆ ಬಳಿಕ ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿ ಚುನಾವಣೆಗಳು ನಡೆಯಬೇಕಿದೆ

ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ

ನುಡಿ ಬೆಳಗು





ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಒಮ್ಮೆ ಮುಲ್ಲಾ ನಸ್ರುದ್ದೀನ್ ಮಗನ ಜೊತೆ, ತನ್ನ ನೆಚ್ಚಿನ ಕತ್ತೆಯೊಂದಿಗೆ ನಡೆದುಕೊಂಡು ಹೋಗುತ್ತಿದ್ದ. ಆಗ ಎದುರಿಗೆ ಸಿಕ್ಕ ಜನರ ಗುಂಪೊಂದು 'ಅಯ್ಯೋ ಇಷ್ಟು ದಷ್ಟಪುಷ್ಟ ಕತ್ತೆಯಿದ್ದರೂ ಈ ಮನುಷ್ಯ ನಡೆದುಕೊಂಡು ಹೋಗುತ್ತಿದ್ದಾನಲ್ಲ' ಎಂದಂದುಕೊಂಡರು. ಇದನ್ನಾಲಿಸಿದ ಮುಲ್ಲಾ ಕತ್ತೆಯನ್ನೇರಿ ಕುಳಿತ.

ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಎದುರಾದ ಇನ್ನೊಂದು ಜನರ ಗುಂಪು 'ಚಿಕ್ಕ ಹುಡುಗನನ್ನು ನಡೆಸಿಕೊಂಡು ಹೋಗುತ್ತಾ, ಈ ಮನುಷ್ಯ ಸವಾರಿ ಮಾಡ್ತಾ ಇದ್ದಾನಲ್ಲ ಎಂಥಾ ವ್ಯಕ್ತಿ ಈತ?' ಎಂದರು. ಮುಲ್ಲಾ ತಾನು ಕತ್ತೆಯಿಂದ ಕೆಳಗಿಳಿದು, ತನ್ನ ಮಗನನ್ನು ಕೂರಿಸಿದ. ಮತ್ತೊಂದು ಜನರ ಗುಂಪು ಎದುರಾಯಿತು. 'ಇವನೆಂತಹ ದಡ್ಡ, ಇಷ್ಟು ಗಟ್ಟಿಯಾಗಿರುವ ಕತ್ತೆಯ ಮೇಲೆ ಆ ಪುಟ್ಟ ಹುಡುಗನೊಬ್ಬನನ್ನೇ ಕೂರಿಸಿದ್ದಾನಲ್ಲಾ? ಈತನೂ ಅದರ ಮೇಲೇರಬಹುದಿತ್ತಲ್ಲಾ?' ಎಂದರು. ಇದಕ್ಕೂ ಕಿವಿಗೊಟ್ಟ ಮುಲ್ಲಾ ಮಗನ ಜೊತೆಗೆ ತಾನೂ ಕತ್ತೆಯೇರಿ ಕುಳಿತ.

ಈಗ ಮತ್ತೊಂದು ಗುಂಪು ಎದುರಾಯಿತು. 'ಅಬ್ಬಾ ಇವನೆಂತಹ ಕ್ರೂರಿ. ಈ ಬಡಪಾಯಿ ಕತ್ತೆಯ ಮೇಲೆ ತನ್ನ ಮಗನೂ ಸಾಲದೆಂಬಂತೆ ತಾನು ಏರಿ ಕುಳಿತು ಸವಾರಿ ಮಾಡುತ್ತಿದ್ದನಲ್ಲಾ? ಇವನ ಮೇಲೆ ಪ್ರಾಣಿ ದಯಾ ಸಂಘಕ್ಕೆ ಖಂಡಿತಾ ದೂರು ಕೊಡಬೇಕು' ಎಂದರು ಜನರು. ಇದನ್ನಾಲಿಸಿದ ಮುಲ್ಲಾ ಕತ್ತೆಯಿಂದ ಕೆಳಗಿಳಿದು, ಮಗನನ್ನೂ ಕೆಳಗಿಳಿಸಿ ಮೊದಲಿನಂತೆ ನಡೆದುಕೊಂಡು ಹೋಗಲಾರಂಭಿಸಿದ.

ಕೆ.ಎಸ್. ನರಸಿಂಹಸ್ವಾಮಿಯವರ ಕವನದ ಸಾಲಿನಂತೆ 'ಚಳಿಗಾಲ ಬಂದಾಗ ಎಷ್ಟು ಚಳಿ ಎಂದರು,
ಬಂತಲ್ಲ ಬೇಸಿಗೆ ಕೆಟ್ಟ ಬಿಸಿಲೆಂದರು. ಮಳೆ ಬಂತೋ ಬಿಡದಲ್ಲ ಕೆಟ್ಟ ಶನಿ ಎಂಬ ಟೀಕೆ.. ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ! ನಿಂತರೆ ಕೇಳುವರು ನೀನೇಕೆ ನಿಂತೆ? ಮಲಗಿದರೆ ಗೊಣಗುವರು ನಿನಗಿಲ್ಲ ಚಿಂತೆ... ಓಡಿದರೆ ಬೆನ್ನ ಹಿಂದೆಯೇ ಇವರ ಟೀಕೆ... ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!'

ಈ ಪ್ರಪಂಚದಲ್ಲಿ ಎಲ್ಲರನ್ನೂ ಮೆಚ್ಚಿಸಿ ಜೀವನ ಮಾಡುವುದು ಅಸಾಧ್ಯ. ಹೀಗಾಗಿ ನಾವು ಮಾಡುವ ಕೆಲಸ ಸರಿ ಎಂದು ನಮಗನಿಸಿದರೆ ಬರುವ ಟೀಕೆಗಳಿಗೆ ಕಿವಿಗೊಡದೇ ನಿರ್ಲಿಪ್ತರಾಗಿ ಜೀವನ ಸಾಗಿಸುವುದೇ ಸೂಕ್ತ ಕ್ರಮ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಸೋಮವಾರ ಜನವರಿ 1, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪಂಚಮಿ ಗಂ. 14-29 **ನಕ್ಷತ್ರ:** ಮಘಾ ಗಂ. 08-36 **ಯೋಗ:** ಆಯುಷ್ಮಾನ್ ಗಂ 28-35 **ಕರಣ:** ತೈತಿಲ ಗಂ. 14-29, ಧನು ಮಾಸದ 16 ನೇ ದಿನ, **ಮಳೆನಕ್ಷತ್ರ:** ಪೂರ್ವಾಷಾಢ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-57 **ಸೂರ್ಯಾಸ್ತ:** 06-11
ಮುಸ್ಲಿಂ ದಿನಾಂಕ : 18 ಜುಮಾದುಸ್ಸಾನಿ
ದಿನ ವಿಶೇಷ : ಕ್ರಿಶ್ಚಿಯನ್ ಹೊಸ ವರ್ಷದ ದಿನ, **ಅದೃಷ್ಟ ಸಂಖ್ಯೆ :** 3, 11

ಮೇಷ: ಯಾವುದೇ ಅನಿವಾರ್ಯತೆಗಳಿಲ್ಲದೆ ಕೇವಲ ಹಿರಿಮೆಗಾಗಿ ವಿಲಾಸಿ ವಸ್ತುಗಳನ್ನು ಖರೀದಿಸುವಿರಿ. ಸಂಜೆ ಮನೆಗೆ ಒಬ್ಬ ಮುಖ್ಯ ಅತಿಥಿ ಬರುವ ಸಾಧ್ಯತೆ ಇದ್ದು, ಶುಭ ಸಮಾಚರ ಕೇಳುವಿರಿ. ಎಲ್ಲರನ್ನೂ ಗೌರವಯುತವಾಗಿ ನೋಡಿ.

ವೃಷಭ: ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳಿರಿ. ಇಂದು ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ಅಧಿಕ ಲಾಭವನ್ನು ಹೊಂದುವಿರಿ.

ಮಿಥುನ: ವಿದ್ಯಾರ್ಥಿಗಳು ಸರಾಗವಾಗಿ ತಮ್ಮ ಅಭ್ಯಾಸವನ್ನು ಮುಂದುವರಿಸುವುದರಿಂದ ಜಯವನ್ನು ಕಾಣುವರು. ನಿಮಗೆ ವಹಿಸಿದ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಕರ್ಕಾಟಕ: ಅನಾವಶ್ಯಕ ಪ್ರಯಾಣ ನಾನಾ ರೀತಿಯ ಅನಾವಶ್ಯಕ ಖರ್ಚು-ವೆಚ್ಚ ಹೆಚ್ಚುಮಾಡಲಿದ್ದು, ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕಂಡೊಯ್ಯುವಂತಾಗಲಿದೆ. ಯಾವುದಕ್ಕೂ ಆತುರ ಪಡದೆ ಸ್ಥಿತಪ್ರಜ್ಞರಾಗಿ ಕಾರ್ಯ ನಿರ್ವಹಿಸಿ.

ಸಿಂಹ: ವಸ್ತುಗಳ ರಫ್ತು ವ್ಯವಹಾರ ಮಾಡುವವರಿಗೆ ಕಾರ್ಯದಲ್ಲಿ ತಾಪತ್ರಯಗಳು ಕಾಣಿಸಿಕೊಳ್ಳಲಿದೆ. ನಿಮ್ಮ ಹಲವು ದಿನಗಳ ಕನಸು ಸ್ನೇಹಿತರ ಸಹಾಯದಿಂದ ನೆರವೇರುವುದು. ಶತ್ರು ಬಾಧೆ ನಿವಾರಣೆ ಆಗಲಿದೆ.

ಕನ್ಯಾ: ಸಾಮಾಜಿಕ ಬದುಕಿನಲ್ಲಿ ಗೌರವಯುತವಾಗಿ ವರ್ತಿಸುವುದನ್ನು ಮರೆಯದಿರಿ. ಸಂಗೀತಗಾರರಿಗೆ ಮತ್ತು ಕ್ರೀಡಾಪಟುಗಳಿಗೆ ಸಾಧನೆಗೆ ಉತ್ತಮ ಅವಕಾಶ ಸಿಗುವುದು. ಸಾಲದ ಹಣ ಈ ದಿನ ಹಿಂತಿರುಗಿ ಬರುವುದು.

ತುಲಾ: ದಾಂಪತ್ಯದಲ್ಲಿ ಯಾವುದೇ ರೀತಿಯ ಬಿರುಕು ಬರದಂತೆ ನೋಡಿಕೊಳ್ಳಿ. ಧನಾಗಮನದಲ್ಲಿ ವ್ಯತ್ಯಯ, ವಿಳಂಬ ತೋರಿಬರಲಿದೆ. ಸಿದ್ಧ ಉಡುಪು ಮಾರಾಟಗಾರರಿಗೆ ಶುಭದಿನ. ಹಂತ ಹಂತವಾಗಿ ಪ್ರಗತಿ ಪ್ರಾಪ್ತಿಯಾಗುವುದು.

ವೃಶ್ಚಿಕ: ನಿಮ್ಮ ತೀಕ್ಷ್ಣ ಮಾತುಗಳಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗುವ ಸಂಧರ್ಭ ಬರಲಿದೆ. ಕ್ರಿಯಾತ್ಮಕವಾಗಿ, ಸೃಜನಶೀಲತೆಯಿಂದ ಕಾರ್ಯ ನಿರ್ವಹಿಸಿ ಹೆಸರು ಗಳಿಸುವಿರಿ. ಮನರಂಜನೆಗಿಂತ ಕೆಲಸದ ಬಗ್ಗೆ ಗಮನವಿರಲಿ.

ಧನು: ಇಂದು ಪ್ರಭಾವಿ ವ್ಯಕ್ತಿಗಳೊಂದಿಗೆ ಹೆಚ್ಚಿನ ಸಮಯ ಕಳೆಯಬೇಕಾಗುವುದು. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ನಿಮ್ಮ ಬಹುಕಾಲಿಕ ಯೋಜನೆಗಳು ಅರ್ಧದಲ್ಲಿ ನಿಲ್ಲುವ ಲಕ್ಷಣಗಳಿದೆ.

ಮಕರ: ಆರೋಗ್ಯದ ವಿಷಯದಲ್ಲಿ ನಿಮ್ಮ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು, ಪರಿಹರಿಸುವ ಬಗೆ ಕಂಡುಹಿಡಿದರೆ ಉತ್ತಮ. ದೂರದ ಸಂಚಾರ ತೋರಿಬಂದರೂ ಮುಂದೂಡಿಕೆ ಅನಿವಾರ್ಯವಾಗುವುದು.

ಕುಂಭ: ಒಂದು ಬಾರಿ ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯುವ ಯೋಚನೆಯನ್ನು ಮಾಡಬೇಡಿ. ಸ್ವಾಧಿಷ್ಟ ಭೋಜನ ಈ ದಿನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು. ನಿಮ್ಮ ಕೆಲಸಗಳನ್ನು ನೀವೇ ನಿರ್ವಹಿಸುವಂತಾಗಲಿದೆ.

ಮೀನ: ಅತಿ ಉತ್ಸಾಹದಿಂದ ಜೀವನದಲ್ಲಿ ಹೊಸ ತಿರುವೊಂದನ್ನು ಪಡೆದುಕೊಳ್ಳುವಿರಿ. ವಾಹನ ಚಾಲಕರು ಅಥವಾ ಕಬ್ಬಿಣದ ಕೆಲಸ ಮಾಡುವವರು ಜಾಗ್ರತೆಯಿಂದಿರಿ. ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ.

ಪದಬಂಧ 5547


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಣ್ಣ ವಸ್ತುಗಳನ್ನು ದೊಡ್ಡದಾಗಿ ತೋರಿಸುವ ಯಂತ್ರ (5)
4.ಮುಪ್ಪು ಹೀಗೆ ಅಡರಿದೆ (3)
5.ಕೊನೆಗಿದ್ದ ಮಗ ತಿರುಗಿದ್ದಕ್ಕೇ ಇದು ಸಲೀಸು (3)
6.ನಲಿಯುತ್ತಿರುವ ಮಯೂರ (3)
8.ಹಸುವಿನ ಹತ್ತಿರವಿರುವ ಶಿಶು (3)
9.ಬಿಡುವು ಹೀಗೆ ಸಿಕ್ಕಿದೆ! (3)
12.ವರ ನೀಡಿರುವ ನಿರೂಪಣೆ (3)
15.ಉಗುರಿನ ತುದಿಯಿದು (3)
16.ಪ್ರಿಯತಮೆ ಇಲ್ಲಿದ್ದಾಳೆ (3)
17.ನೀರಿನಿಂದಾದ ಅನಿಲ (5)\

ಮೇಲಿಂದ ಕೆಳಕ್ಕೆ

1.ಚುರುಕು ನೋಟವಿದು (4)
2.ಇನ್ನೊಬ್ಬರ ಅಭಿಪ್ರಾಯವನ್ನು ಅನುಮೋದಿಸು (5)
3.ಕನಸು ಕಾಣುತ್ತಾ ತೋರಿಸಿದ ಶಕ್ತಿ! (3)
4.ಕುಳ್ಳ ಇಲ್ಲಿದ್ದಾನಲ್ಲಾ? (3)
7.ಪ್ರತಿಕೂಲವಾದುದು ಇದು (3)
8.ಸ್ವಲ್ಪವೂ ಭಾರವಿಲ್ಲದ್ದು (3)
10.ಈತ ಚಕ್ರವರ್ತಿ (5)
11.ಮನಸ್ಸನ್ನು ಸೆಳೆಯುವಂಥದ್ದು (4)
13.ಆ ದಿನ ತಂದಿರುವ ಮನೆಬಳಕೆ ಸಾಮಾನು (3)
14.ಅಜವನ್ನು ಹಿಡಿದಿರುವ ಅಣ್ಣ (3)



5546ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕನ್ನಡಕ 3.ಸಂಶೋಧನೆ 5.ಮರುಕ 6.ತಲೋದರಿ 8.ಟಗರು 10.ಕಳಶ 12.ಮರಕತ 15.ಮನನ 16.ಸಮಾಧಾನ 17.ವಿದ್ಯಮಾನ

ಮೇಲಿಂದ ಕೆಳಕ್ಕೆ:
1.ಕಡಿತ 2.ಕಮರಿ 3.ಸಂಕಟ 4.ನೆಪ 7.ಲೋಹಚುಂಬಕ 9.ರುದ್ರನಾಟಕ 11.ಶಮನ 12.ಮನವಿ 13.ತಲ್ಲೀನ 14.ಮೋಸ

ಸುಡೊಕು 5932

6		4	9		7	3		8
	1			4				
	7	8	2			4		6
7					8		6	
	8		4			7		
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5931 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7







ಎಂ–ಕ್ಯಾಪ್ ₹1.29 ಲಕ್ಷ ಕೋಟಿ ಏರಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ಕಳೆದ ವಾರ ₹1.29 ಲಕ್ಷ ಕೋಟಿಯಷ್ಟು ಏರಿಕೆ ಆಗಿದೆ.

ಕಳೆದ ವಾರ ಮುಂಬೈ ಷೇರು ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 1,133 ಅಂಶ ಹೆಚ್ಚಳವಾಗಿದೆ. ಡಿಸೆಂಬರ್ 28ರಂದು ಸೂಚ್ಯಂಕವು 72,484 ಅಂಶದ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ಎಚ್‌ಡಿಎಫ್‌ಸಿ ಬ್ಯಾಂಕ್ ಮಾರುಕಟ್ಟೆ ಮೌಲ್ಯ ₹29,828 ಕೋಟಿ, ಎಲ್‌ಐಸಿ ₹25,426 ಕೋಟಿ, ಭಾರ್ತಿ ಏರ್‌ಟೆಲ್ ₹24,510 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹20,735 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹13,633 ಕೋಟಿ, ಐಟಿಸಿ ₹9,164 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹4,730 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್ ₹1,869 ಕೋಟಿ ಗಳಿಕೆ ಕಂಡಿವೆ.

ಟಿಸಿಎಸ್ ₹11,105 ಕೋಟಿ ಮತ್ತು ಇನ್ಫೊಸಿಸ್ ₹7,946 ಕೋಟಿ ಇಳಿಕೆ ಕಂಡಿವೆ. ರಿಲಯನ್ಸ್ ಇಂಡಸ್ಟ್ರೀಸ್ ಪ್ರಮುಖ ಸಂಸ್ಥೆ ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ. ನಂತರದ ಸ್ಥಾನದಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್, ಭಾರ್ತಿ ಏರ್‌ಟೆಲ್, ಐಟಿಸಿ, ಎಸ್‌ಬಿಐ ಮತ್ತು ಎಲ್‌ಐಸಿ ಇವೆ.

ತೆರಿಗೆ ಉಳಿತಾಯಕ್ಕೆ ಬೇಗ ಪ್ಲಾನ್ ಮಾಡಿ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹೊಸ ವರ್ಷದ ಹೊಸ್ತಿಲಿನಲ್ಲಿ ನಾವಿದ್ದೇವೆ. 2023-24ನೇ ಆರ್ಥಿಕ ವರ್ಷವು 2024ರ ಮಾರ್ಚ್ 31ಕ್ಕೆ ಕೊನೆಗೊಳ್ಳುತ್ತದೆ. ಅಂದರೆ ಪ್ರಸಕ್ತ ಸಾಲಿನಲ್ಲಿ ತೆರಿಗೆ ಉಳಿಸಲು ನಿಮಗಿರುವ ಸಮಯಾವಕಾಶ ಕೇವಲ 3 ತಿಂಗಳು.

ಈಗಾಗಲೇ, ನಿಮ್ಮ ಉದ್ಯೋಗದಾತ ಕಂಪನಿಯ ಮಾನವ ಸಂಪನ್ಮೂಲ ವಿಭಾಗದಿಂದ ತೆರಿಗೆ ಉಳಿತಾಯದ ವಿವರವನ್ನು ಕೊಡಿ ಎಂಬ ಸಂದೇಶವೂ ಬಂದಿರುತ್ತದೆ. ಈ ಹೊತ್ತಿನಲ್ಲಿ ಕಾನೂನಿನ ಅನ್ವಯ ನ್ಯಾಯಸಮ್ಮತವಾಗಿ ತೆರಿಗೆ ಉಳಿಸಲು ಯಾವೆಲ್ಲಾ ಅವಕಾಶಗಳಿವೆ; ಬನ್ನಿ ತಿಳಿಯೋಣ.

ತೆರಿಗೆಗೆ ಒಳಪಡುವ ಆದಾಯ ಎಷ್ಟು?: ನಿಮ್ಮ ಒಟ್ಟು ಆದಾಯದಲ್ಲಿ ತೆರಿಗೆಗೆ ಒಳಪಡುವ ಆದಾಯ ಎಷ್ಟು ಎನ್ನುವುದನ್ನು ತಿಳಿಯುವುದರ ಮೂಲಕ ಆದಾಯ ತೆರಿಗೆ ಉಳಿತಾಯದ ಪ್ರಕ್ರಿಯೆ ಶುರುವಾಗುತ್ತದೆ. ಉದ್ಯೋಗದಿಂದ ಬರುವ ಆದಾಯ, ಬಾಡಿಗೆಯಿಂದ ಬರುವ ಆದಾಯ, ವೃತ್ತಿಪರ ಆದಾಯ, ಕ್ಯಾಪಿಟಲ್ ಗೇನ್ಸ್, ಡಿವಿಡೆಂಟ್ ಆದಾಯ ಹೀಗೆ ಒಟ್ಟು ಆದಾಯವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಉದಾಹರಣೆಗೆ ತೆರಿಗೆಗೆ ಒಳಪಡುವ ಒಟ್ಟು ಆದಾಯ ₹10 ಲಕ್ಷ ಎಂದುಕೊಳ್ಳೋಣ. ಇದರಲ್ಲಿ ₹50 ಸಾವಿರವನ್ನು ಸ್ಟ್ಯಾಂಡರ್ಡ್ ಡಿಡಕ್ಷನ್ ಅಡಿ ಕಡಿತಗೊಳಿಸಬಹುದು. ಸ್ಟ್ಯಾಂಡರ್ಡ್ ಡಿಡಕ್ಷನ್ ಹಳೆಯ ಮತ್ತು ಹೊಸ ತೆರಿಗೆ ಪದ್ಧತಿಗೆ ಅನ್ವಯಿಸುತ್ತದೆ. ಮನೆ ಬಾಡಿಗೆ ಭತ್ಯೆ (HRA), ಮರುಪಾವತಿ (Reimbursement) ಸೇರಿ ಒಂದು ಲಕ್ಷ ರೂಪಾಯಿಯನ್ನು ಕಡಿತ ಮಾಡೋಣ. ಸೆಕ್ಷನ್ 80ಸಿ ಮತ್ತು 80ಡಿ ಅಡಿಯಲ್ಲಿ ₹2 ಲಕ್ಷ ಉಳಿತಾಯ ಮಾಡಿದ್ದೀರಿ ಎಂದುಕೊಳ್ಳೋಣ. ಹೀಗೆ ಮಾಡಿದಾಗ ತೆರಿಗೆಗೆ ಒಳಪಡುವ ನಿಮ್ಮ ಆದಾಯ ₹6.5 ಲಕ್ಷ ಆಗುತ್ತದೆ.

ಈ ಲೆಕ್ಕಾಚಾರದ ಪ್ರಕಾರ ಸೆಸ್ ಒಳಗೊಂಡು ₹44,200 ಪಾವತಿಸಬೇಕಾಗುತ್ತದೆ. ಹಳೆಯ ತೆರಿಗೆ ಪದ್ಧತಿ ಅಡಿಯಲ್ಲಿ ಈ ಅಂದಾಜು ಮಾಡಲಾಗಿದೆ. ಹೊಸ ತೆರಿಗೆ ಪದ್ಧತಿಯಲ್ಲಿ ತೆರಿಗೆ ಉಳಿತಾಯಕ್ಕೆ ಹೆಚ್ಚಿನ ಆಯ್ಕೆಗಳಿಲ್ಲ. ಆದರೆ, ತೆರಿಗೆ ಪ್ರಮಾಣ ಕಡಿಮೆಯಿದೆ. ಹೊಸ ತೆರಿಗೆ ಪದ್ಧತಿಯಿಂದ ಹಳೆಯ ತೆರಿಗೆ ಪದ್ಧತಿಗೆ ಮತ್ತು ಹಳೆಯ ತೆರಿಗೆ ಪದ್ಧತಿಯಿಂದ ಹೊಸ ತೆರಿಗೆ ಪದ್ಧತಿಗೆ ವರ್ಗವಾಗಲು ನಿಮಗೆ ಅವಕಾಶವಿದೆ. ಆದರೆ, ಅದಕ್ಕೆ ಕೆಲ ನಿಬಂಧನೆಗಳಿವೆ.

ತೆರಿಗೆ ಉಳಿಸಲು ಇರುವ ಪ್ರಮುಖ ಅವಕಾಶಗಳು: ಹಲವು ಖರ್ಚುಗಳಿಗೆ ಮತ್ತು ಹೂಡಿಕೆಗಳಿಗೆ ತೆರಿಗೆ ಉಳಿಸುವ ಅವಕಾಶವನ್ನು ಆದಾಯ ತೆರಿಗೆ ಇಲಾಖೆಯು ಕಲ್ಪಿಸುತ್ತದೆ. ಅವುಗಳಲ್ಲಿ ಪ್ರಮುಖ ಎಂದರೆ ಮನೆ ಬಾಡಿಗೆ ಭತ್ಯೆ, ಕಾರ್ಮಿಕರ ಭವಿಷ್ಯ ನಿಧಿ, ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ, ಪ್ರಯಾಣ ವೆಚ್ಚ, ಪುಸ್ತಕ ಮತ್ತು ಪತ್ರಿಕೆ ಖರೀದಿ ವೆಚ್ಚ, ಟೆಲಿಫೋನ್–ಮೊಬೈಲ್ ವೆಚ್ಚ, ಫುಡ್ ಕೂಪನ್, ರಜೆ ಸಮಯದ ಪ್ರಯಾಣ ವೆಚ್ಚ (ಎಲ್‌ಟಿಎ) ಮತ್ತು ಇತ್ಯಾದಿ. ಈ ಬಗ್ಗೆ ಹೆಚ್ಚಿನ ವಿವರಕ್ಕಾಗಿ ನಿಮ್ಮ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗವನ್ನು ಸಂಪರ್ಕಿಸಬಹುದು.

ಹೂಡಿಕೆಗಳ ಮೂಲಕ ತೆರಿಗೆ ಉಳಿಸಿ:

1. ವಿವಿಧ ಹೂಡಿಕೆಗಳಿಗೆ ವಿನಾಯಿತಿ, ಸೆಕ್ಷನ್ 80ಸಿ: ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ ₹1.5 ಲಕ್ಷದವರೆಗೆ ತೆರಿಗೆ ವಿನಾಯಿತಿ ಲಭ್ಯವಿದೆ. ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ಕಾರ್ಮಿಕರ ಭವಿಷ್ಯ ನಿಧಿ (ಇಪಿಎಫ್), ಸುಕನ್ಯಾ ಸಮೃದ್ಧಿ ಯೋಜನೆ (ಎಸ್‌ಎಸ್‌ವೈ), ಜೀವ ವಿಮೆ ಪ್ರೀಮಿಯಂ, ಯುಲಿಪ್ ಪ್ಲಾನ್, ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ), 5 ವರ್ಷದ ಅವಧಿಯ ನಿಶ್ಚಿತ ಠೇವಣಿ (ಎಫ್.ಡಿ), ಹಿರಿಯ ನಾಗರಿಕರ ಉಳಿತಾಯ ಯೋಜನೆ, ಮಕ್ಕಳ ಶಾಲೆಯ ಬೋಧನಾ ಶುಲ್ಕ, ಮನೆ ಸಾಲದ ಮೇಲಿನ ಅಸಲು ಪಾವತಿಗೆ ಈ ವಿನಾಯಿತಿ ಪಡೆಯಬಹುದು.

2. ಎನ್‌ಪಿಎಸ್ ಹೂಡಿಕೆಗೆ ವಿನಾಯಿತಿ, ಸೆಕ್ಷನ್ 80ಸಿಸಿಡಿ (1) ಮತ್ತು ಸೆಕ್ಷನ್ 80 ಸಿಸಿಡಿ (1ಬಿ): ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿ ಈ ಅನುಕೂಲ ಪಡೆಯಬಹುದು. ನಿಮ್ಮ ವೇತನದ ಶೇ 10ರಷ್ಟು ವಿನಾಯಿತಿ ಪಡೆಯಲು ಅವಕಾಶವಿದೆ. ಸ್ವಂತ ಉದ್ಯೋಗಿಗಳಿಗೆ ಶೇ 20ರಷ್ಟು ವಿನಾಯಿತಿ ಸಿಗುತ್ತದೆ. 80ಸಿಸಿಡಿ (1ಬಿ) ಅಡಿಯಲ್ಲಿ ಹೆಚ್ಚುವರಿ ₹50 ಸಾವಿರದ ವರೆಗಿನ ಎನ್‌ಪಿಎಸ್ ಹೂಡಿಕೆಗೆ ವಿನಾಯಿತಿ ಇದೆ.

3. ಆರೋಗ್ಯ ವಿಮೆಗೆ ವಿನಾಯಿತಿ, ಸೆಕ್ಷನ್ 80ಡಿ: ಈ ಸೆಕ್ಷನ್ ಅಡಿಯಲ್ಲಿ ಕುಟುಂಬಕ್ಕೆ (ಸ್ವಂತಕ್ಕೆ, ಪತ್ನಿ, ಮಕ್ಕಳಿಗೆ) ಪಡೆಯುವ ಆರೋಗ್ಯ ವಿಮೆಗೆ ₹25 ಸಾವಿರದ ವರೆಗೆ ವಿನಾಯಿತಿ ಇದೆ. ಇದಲ್ಲದೆ ಮುನ್ನೆಚ್ಚರಿಕಾ ಆರೋಗ್ಯ ಪರೀಕ್ಷೆ ಮಾಡಿಸಿಕೊಂಡರೆ ₹5 ಸಾವಿರದ ವರೆಗೆ ವಿನಾಯಿತಿ ಪಡೆಯಬಹುದು. ಆದರೆ, ಅದು ₹25 ಸಾವಿರದ ಮಿತಿಯೊಳಗೆ ಇರಲಿದೆ. 60 ವರ್ಷ ಮೇಲ್ಪಟ್ಟ ಪೋಷಕರಿಗೆ ವಿಮೆ ಮಾಡಿಸಿದ್ದರೆ ₹50 ಸಾವಿರದ ವರೆಗೆ ತೆರಿಗೆ ವಿನಾಯಿತಿ ಅನುಕೂಲವಿದೆ. ಒಂದೊಮ್ಮೆ ಆರೋಗ್ಯ ವಿಮೆ ಇಲ್ಲ. ಆದರೆ, ವೈದ್ಯಕೀಯ ವೆಚ್ಚದ ಬಿಲ್‌ಗಳಿವೆ ಎಂದಾದರೆ ₹50 ಸಾವಿರದ ವರೆಗೆ ಅದಕ್ಕೂ ವಿನಾಯಿತಿ ಪಡೆಯಬಹುದು.

4. ಶಿಕ್ಷಣ ಸಾಲಕ್ಕೆ ವಿನಾಯಿತಿ, ಸೆಕ್ಷನ್ 80ಇ: ಸ್ವಂತಕ್ಕೆ, ಪತ್ನಿ, ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಾಲ ಪಡೆದಿದ್ದರೆ ನಿಗದಿತ ಆರ್ಥಿಕ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೇಲೆ ವಿನಾಯಿತಿ ಸಿಗುತ್ತದೆ.

5. ಗೃಹ ಸಾಲದ ಮೇಲೆ ತೆರಿಗೆ ವಿನಾಯಿತಿ: ಗೃಹ ಸಾಲದ ಅಸಲು ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ ವಿನಾಯಿತಿ ಸಿಗುತ್ತದೆ. ಆದರೆ, ಒಟ್ಟಾರೆ 80ಸಿ ಮಿತಿ ₹1.5 ಲಕ್ಷವನ್ನು ಇದು ಮೀರುವಂತಿಲ್ಲ. ಗೃಹ ಸಾಲದ ಮೇಲಿನ ಬಡ್ಡಿ ಪಾವತಿಗೆ ಆದಾಯ ತೆರಿಗೆಯ ಸೆಕ್ಷನ್ 24 ಅಡಿಯಲ್ಲಿ ₹2 ಲಕ್ಷದ ವರೆಗೆ ವಿನಾಯಿತಿ ಸಿಗುತ್ತದೆ.

(ಚಾರ್ಟರ್ಡ್ ಅಕೌಂಟೆಂಟ್)

ಉತ್ತಮ ಗಳಿಕೆ ತಂದುಕೊಟ್ಟ ಷೇರುಪೇಟೆ

2023ರಲ್ಲಿ ಷೇರುಪೇಟೆ ಹೂಡಿಕೆದಾರರಿಗೆ ಉತ್ತಮ ಗಳಿಕೆ ತಂದುಕೊಟ್ಟಿದೆ. ಡಿಸೆಂಬರ್ 29ರಂದು ಕೊನೆಗೊಂಡ ವಾರದಲ್ಲಿ ಸೂಚ್ಯಂಕಗಳು ಪುಟಿದೆದ್ದಿವೆ.

72,240 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.60ರಷ್ಟು ಗಳಿಸಿಕೊಂಡಿದೆ. 21,731 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.78ರಷ್ಟು ಹೆಚ್ಚಳ ಕಂಡಿದೆ. ಒಟ್ಟಾರೆ 2023ನೇ ವರ್ಷದಲ್ಲಿ ಕ್ರಮವಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಹೂಡಿಕೆದಾರರಿಗೆ ಶೇ 18.7 ಮತ್ತು ಶೇ 20ರಷ್ಟು ಗಳಿಕೆ ತಂದುಕೊಟ್ಟಿವೆ.

2024ರಲ್ಲಿ ಬಡ್ಡಿದರ ಇಳಿಕೆಯಾಗಬಹುದು ಎಂಬ ಆಶಾವಾದ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಸಕಾರಾತ್ಮಕತೆ ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಟೆಲಿಕಮ್ಯೂನಿಕೇಷನ್ , ಬಿಎಸ್‌ಇ ಆಟೊ ಮತ್ತು ಬಿಎಸ್‌ಇ ಮೆಟಲ್ ತಲಾ ಶೇ 4ರಷ್ಟು ಗಳಿಕೆ ಕಂಡಿವೆ. ಎಫ್‌ಎಂಸಿಜಿ ಸೂಚ್ಯಂಕ ಶೇ 3ರಷ್ಟು ಹೆಚ್ಚಳವಾಗಿದೆ. ಮತ್ತೊಂದೆಡೆ ಬಿಎಸ್‌ಇ ಐ.ಟಿ ಸೂಚ್ಯಂಕ ಶೇ 0.5ರಷ್ಟು ಕುಸಿದಿದೆ. ಇನ್ನು ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹8,648.96 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹666.06 ಕೋಟಿ ಮೌಲ್ಯದ ಷೇರುಗಳನ್ನು ಪಡೆದುಕೊಂಡಿದ್ದಾರೆ.



ಏರಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್, ಹಿಂಡಾಲ್ಕೊ ಇಂಡಸ್ಟ್ರೀಸ್, ಟಾಟಾ ಮೋಟರ್ಸ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಇಂಡಸ್ ಟವರ್ಸ್ ಮತ್ತು ಗೇಲ್ ಗಳಿಕೆ ಕಂಡಿವೆ. ಜೊಮಾಟೊ, ಅದಾನಿ ವಿಲ್ಮರ್, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ಸ್ ಮತ್ತು ಎಬಿಬಿ ಇಂಡಿಯಾ ಕುಸಿತ ಕಂಡಿವೆ.

ಮುನ್ನೋಟ: ಸದ್ಯದಲ್ಲೇ ಕಂಪನಿಗಳ ಮೂರನೇ ತ್ರೈಮಾಸಿಕ ಫಲಿತಾಂಶ ಪ್ರಕಟಗೊಳ್ಳಲಿದೆ. ಜನವರಿ ಎರಡನೇ ವಾರದಲ್ಲಿ ಇನ್ಫೊಸಿಸ್, ಟಿಸಿಎಸ್, ಎಚ್‌ಸಿಎಲ್, ವಿಪ್ರೊ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಉಳಿದಂತೆ ಬಡ್ಡಿದರ ಇಳಿಕೆ ನಿರೀಕ್ಷೆ, ವಿದೇಶಿ ಹೂಡಿಕೆದಾರರ ನಿರ್ಣಯಗಳು ಸೇರಿ ಪ್ರಮುಖ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

‘ಖರ್ಚು ಪ್ರಸ್ತಾವ ಸಲ್ಲಿಸಿ’

ನವದೆಹಲಿ (ಪಿಟಿಐ): ಎರಡನೇ ಮತ್ತು ಕೊನೆಯ ಹಂತದ ಪೂರಕ ಅನುದಾನಕ್ಕಾಗಿ ವೆಚ್ಚಗಳ ಪ್ರಸ್ತಾವ ಸಲ್ಲಿಸುವಂತೆ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ಹಣಕಾಸು ಸಚಿವಾಲಯವು ಸೂಚಿಸಿದೆ.

ಸಂಸತ್ತಿನ ಬಜೆಟ್ ಅಧಿವೇಶನವು ಜನವರಿ ಕೊನೆಯ ವಾರದಲ್ಲಿ ನಡೆಯಲಿದೆ. ಇದು 17ನೇ ಲೋಕಸಭೆಯ ಕೊನೆಯ ಅಧಿವೇಶನವಾಗಿದೆ. ಹಾಗಾಗಿ, 2024ರ ಜುಲೈವರೆಗಿನ ಲೇಖಾನುದಾನಕ್ಕೆ ಸಂಸತ್ತಿನ ಅನುಮೋದನೆ ಪಡೆದುಕೊಳ್ಳಬೇಕಿದೆ. ಸಚಿವಾಲಯಗಳು ಮತ್ತು ಇಲಾಖೆಗಳು ತಮ್ಮ ಪೂರಕ ಪ್ರಸ್ತಾವಗಳನ್ನು ಜನವರಿ 8ರೊಳಗೆ ಸಲ್ಲಿಸಬೇಕಾಗುತ್ತದೆ. 2024–25ನೇ ಸಾಲಿನ ಮಧ್ಯಂತರ ಬಜೆಟ್ ಅನ್ನು ಫೆಬ್ರುವರಿ 1ರಂದು ಮಂಡಿಸುವ ಸಾಧ್ಯತೆ ಇದೆ.

ಈ ವರ್ಷ ₹70 ಸಾವಿರಕ್ಕೆ ತಲುಪಲಿದೆ ಚಿನ್ನದ ಬೆಲೆ

ಮುಂಬೈ (ಪಿಟಿಐ): ರೂಪಾಯಿ ಸ್ಥಿರತೆ, ಜಾಗತಿಕ ರಾಜಕೀಯ ಅನಿಶ್ಚಿತ ಸ್ಥಿತಿ ಮತ್ತು ಜಾಗತಿಕ ಆರ್ಥಿಕ ಬೆಳವಣಿಗೆಯ ನಿಧಾನ ಗತಿಯ ಕಾರಣದಿಂದಾಗಿ 2024ರಲ್ಲಿ ದೇಶೀಯ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆ ₹70 ಸಾವಿರಕ್ಕೆ ತಲುಪಲಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪ್ರಸ್ತುತ 10 ಗ್ರಾಂ ಚಿನ್ನದ ದರ ₹63,060 ಇದೆ. ಡಿಸೆಂಬರ್ ಆರಂಭದಲ್ಲಿ, ಮಧ್ಯಪ್ರಾಚ್ಯದಲ್ಲಿ ಜಾಗತಿಕ ಉದ್ವಿಗ್ನತೆಗಳಿಂದ ಬೆಲೆ ಮತ್ತೆ ಗಗನಕ್ಕೇರಿವೆ ಎಂದಿದ್ದಾರೆ.

2023ರಲ್ಲಿ ಚಿನ್ನದ ದರ ಅಸ್ಥಿರವಾಗಿಯೇ ಇತ್ತು. ದೇಶೀಯ ಮಾರುಕಟ್ಟೆಯಲ್ಲಿ ಮೇ 4ರಂದು ಪ್ರತಿ 10 ಗ್ರಾಂಗೆ ₹61,845 ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಔನ್ಸ್‌ಗೆ (28.34 ಗ್ರಾಂ) 2,083 ಡಾಲರ್‌ಗೆ ತಲುಪಿತ್ತು. ನವೆಂಬರ್ 16ರಂದು ₹61,914ಕ್ಕೆ ಏರಿತು ಎಂದು ಕಾಮ್‌ಟ್ರೆಂಡ್ಸ್ ಸಂಸ್ಥೆಯ ಸಂಶೋಧನಾ ನಿರ್ದೇಶಕ ಜ್ಞಾನಶೇಖರ್ ತ್ಯಾಗರಾಜನ್ ಪಿಟಿಐಗೆ ತಿಳಿಸಿದರು.

ಡಿಸೆಂಬರ್ 4ರಂದು ಚಿನ್ನದ ಬೆಲೆಯು 10 ಗ್ರಾಂಗೆ ಸಾರ್ವಕಾಲಿಕ ಗರಿಷ್ಠ ಮಟ್ಟ ಅಂದರೆ ₹64,063ಕ್ಕೆ ತಲುಪಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 2024ರಲ್ಲಿ ಪ್ರತಿ ಔನ್ಸ್‌ಗೆ 2,400 ಡಾಲರ್‌ಗೆ ಏರಿಕೆ ಆಗುವ ನಿರೀಕ್ಷೆಯಿದೆ. ಭಾರತದಲ್ಲಿ ಚುನಾವಣೆ ನಡೆಯುವ ಸಂದರ್ಭದಲ್ಲಿ (ವಿದೇಶಿ ಸಾಂಸ್ಥಿಕ ಹೂಡಿಕೆದಾರರು ತಮ್ಮ ಬಂಡವಾಳವನ್ನು ಕಡಿಮೆ ಮಾಡುವುದರಿಂದ ರೂಪಾಯಿ ದುರ್ಬಲಗೊಳ್ಳಬಹುದು). ಇದು ದೇಶದಲ್ಲಿ ಚಿನ್ನದ ದರವನ್ನು ಮತ್ತಷ್ಟು ಹೆಚ್ಚಿಸಬಹುದು ಎಂದು ಅವರು ಹೇಳಿದರು.

ಅಖಿಲ ಭಾರತ ಹರಳುಗಳು ಮತ್ತು ಆಭರಣ ಮಂಡಳಿ (ಜಿಜೆಸಿ) ಅಧ್ಯಕ್ಷ ಸಾಯಂ ಮೆಹ್ರಾ ಮಾತನಾಡಿ, ಚಿನ್ನದ ದರದಲ್ಲಿನ ಏರಿಳಿತವು ಮಾರಾಟದ ಮೇಲೆ ಪರಿಣಾಮ ಬೀರಿದೆ. ಅಮೆರಿಕದಲ್ಲಿ ದರ ಕಡಿತ, ಜಾಗತಿಕ ರಾಜಕೀಯ ಬಿಕ್ಕಟ್ಟು ಮುಂದುವರಿಕೆ, ದುರ್ಬಲ ರೂಪಾಯಿಯಿಂದಾಗಿ ಚಿನ್ನದ ದರ ಮತ್ತಷ್ಟು ಏರುತ್ತದೆ. ಹೀಗಾಗಿ, ಚಿನ್ನದ ದರವು 2024ರಲ್ಲಿ 10 ಗ್ರಾಂಗೆ ₹68 ಸಾವಿರದಿಂದ ₹70 ಸಾವಿರ ಮುಟ್ಟುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹615

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹222-449
ದ್ವಿತಳಿ (ಬಿ.ವಿ)	₹230-555

ಸಾಮಾಜಿಕ ಜಾಲತಾಣ ಕಂಪನಿಗಳ ಜಾಹೀರಾತು ವರಮಾನ ಕುರಿತ ಅಧ್ಯಯನ

₹91 ಸಾವಿರ ಕೋಟಿ ವರಮಾನ

ನವದೆಹಲಿ (ಪಿಟಿಐ): ಇನ್‌ಸ್ಟಾಗ್ರಾಂ, ಎಕ್ಸ್ ಮತ್ತು ಸ್ನ್ಯಾಪ್‌ಚಾಟ್‌ನಂತಹ ಸಾಮಾಜಿಕ ಜಾಲತಾಣ ಕಂಪನಿಗಳು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಳಕೆದಾರರ ಕಾರಣದಿಂದಾಗಿ ಸಿಗುವ ಜಾಹೀರಾತು ವರಮಾನದ ಮೂಲಕ 2022ರಲ್ಲಿ ಒಟ್ಟು 11 ಬಿಲಿಯನ್ ಡಾಲರ್ (₹91 ಸಾವಿರ ಕೋಟಿ) ಗಳಿಸಿವೆ ಎಂದು ಅಮೆರಿಕದಲ್ಲಿ ನಡೆದಿರುವ ಅಧ್ಯಯನವೊಂದು ಹೇಳಿದೆ.



ಸ್ನ್ಯಾಪ್‌ಚಾಟ್, ಟಿಕ್‌ಟಾಕ್ ಮತ್ತು ಯೂಟ್ಯೂಬ್ ಗಳಿಸಿದ ಸರಿಸುಮಾರು ಶೇಕಡ 30ರಿಂದ ಶೇ 40ರಷ್ಟು ಜಾಹೀರಾತು ವರಮಾನವು ಯುವ ಬಳಕೆದಾರರ ಕಾರಣದಿಂದಾಗಿ ಬಂದಿರುವಂಥದ್ದು ಎಂದು ಅಧ್ಯಯನವು ಹೇಳಿದೆ. 12 ವರ್ಷ ಹಾಗೂ ಅದಕ್ಕಿಂತ ಕಡಿಮೆ ವಯಸ್ಸಿನ ಬಳಕೆದಾರರ ಕಾರಣದಿಂದ ಜಾಹೀರಾತು ವರಮಾನ ಗಳಿಸುವಲ್ಲಿ ಯೂಟ್ಯೂಬ್ ಮುಂದಿದೆ. ಕಂಪನಿಯು ಈ ವಯೋಮಾನದ ಬಳಕೆದಾರರಿಂದ 1 ಬಿಲಿಯನ್ ಡಾಲರ್ (₹8,324 ಕೋಟಿ) ವರಮಾನ ಗಳಿಸಿದೆ.

13ರಿಂದ 17 ವರ್ಷ ವಯಸ್ಸಿನ ನಡುವಿನ ಬಳಕೆದಾರರ ಕಾರಣದಿಂದ ಜಾಹೀರಾತು ವರಮಾನ ಗಳಿಸುವಲ್ಲಿ ಇನ್‌ಸ್ಟಾಗ್ರಾಂ ಕಂಪನಿ ಮುಂದಿದೆ. ಇದು ಈ ವಯೋಮಾನದವರಿಂದ 4 ಬಿಲಿಯನ್ ಡಾಲರ್ (₹33 ಸಾವಿರ ಕೋಟಿ) ವರಮಾನ ಗಳಿಸಿದೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ‘ಹಾರ್ವರ್ಡ್ ಟಿ.ಎಚ್. ಚಾನ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್’ ಈ ಅಧ್ಯಯನ ನಡೆಸಿದೆ. ಎಳೆ ವಯಸ್ಸಿನ ಬಳಕೆದಾರರ ಮೇಲೆ ಆಗುವ ಕೆಟ್ಟ ಪರಿಣಾಮಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಸ್ವಯಂ ನಿಯಂತ್ರಣ ತಮ್ಮಿಂದ ಸಾಧ್ಯ ಎಂದು ಸಾಮಾಜಿಕ ಜಾಲತಾಣ ಕಂಪನಿಗಳು ಹೇಳಿಕೊಳ್ಳುತ್ತವೆಯಾದರೂ, ಆ ಕೆಲಸವನ್ನು ಅವು ಇನ್ನೂ ಮಾಡಿಲ್ಲ ಎಂದು ಅಧ್ಯಯನ ನಡೆಸಿದವರು ಹೇಳಿದ್ದಾರೆ.

‘ಸಾಮಾಜಿಕ ಜಾಲತಾಣ ಕಂಪನಿಗಳು ಯುವ ಬಳಕೆದಾರರ ಕಾರಣದಿಂದಾಗಿ ದೊಡ್ಡ ಪ್ರಮಾಣದಲ್ಲಿ ಜಾಹೀರಾತು ವರಮಾನ ಪಡೆಯುತ್ತಿವೆ. ಇದು, ದತ್ತಾಂಶ ನಿರ್ವಹಣೆಯಲ್ಲಿ ಇನ್ನಷ್ಟು ಹೆಚ್ಚಿನ ಪಾರದರ್ಶಕತೆಯ ಅಗತ್ಯ ಇದೆ ಎಂಬುದನ್ನು ಹೇಳುತ್ತಿದೆ’ ಎಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ.

2021 ಮತ್ತು 2022ರ ಮಾರುಕಟ್ಟೆ ಸಂಶೋಧನಾ ದತ್ತಾಂಶವನ್ನು ಬಳಸಿ, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಸ್ನ್ಯಾಪ್‌ಚಾಟ್, ಟಿಕ್‌ಟಾಕ್, ಎಕ್ಸ್ ಮತ್ತು ಯೂಟ್ಯೂಬ್ ಬಳಕೆ ಮಾಡುವ ಎಳೆಯರ ಸಂಖ್ಯೆ ಎಷ್ಟು ಎಂಬುದನ್ನು ಅಂದಾಜು ಮಾಡಲಾಗಿದೆ. ಇದೇ ದತ್ತಾಂಶವನ್ನು ಬಳಸಿ, ಈ ಜಾಲತಾಣ ಕಂಪನಿಗಳ ಜಾಹೀರಾತು ವರಮಾನವನ್ನು ಅಂದಾಜು ಮಾಡಲಾಗಿದೆ.

ಸಾಮಾಜಿಕ ಜಾಲತಾಣ ಕಂಪನಿಗಳು 2022ರಲ್ಲಿ ಗಳಿಸಿದ ಜಾಹೀರಾತು ವರಮಾನದಲ್ಲಿ, 12 ವರ್ಷ ಹಾಗೂ ಅದಕ್ಕಿಂತ ಕಡಿಮೆ ವಯಸ್ಸಿನವರ ಕಾರಣದಿಂದಾಗಿ ಗಳಿಸಿರುವ ವರಮಾನದ ಮೊತ್ತ 2.1 ಬಿಲಿಯನ್ ಅಮೆರಿಕನ್ ಡಾಲರ್ (₹17 ಸಾವಿರ ಕೋಟಿ).

ಸಾಮಾಜಿಕ ಜಾಲತಾಣ ಕಂಪನಿಗಳು ತಮ್ಮ ಬಳಕೆದಾರರ ಪೈಕಿ ಯಾವ ವಯಸ್ಸಿನವರ ಪ್ರಮಾಣ ಎಷ್ಟಿದೆ ಎಂಬುದನ್ನು ಬಹಿರಂಗಪಡಿಸುವುದಿಲ್ಲ. ಹಾಗೆಯೇ, ಯಾವ ವಯಸ್ಸಿನವರ ಕಾರಣದಿಂದಾಗಿ ಎಷ್ಟು ಜಾಹೀರಾತು ವರಮಾನ ಬಂದಿದೆ ಎಂಬುದನ್ನೂ ಕಂಪನಿಗಳು ತಿಳಿಸುವುದಿಲ್ಲ. ಈ ಕಾರಣದಿಂದಾಗಿ, ಮಾರುಕಟ್ಟೆ ಸಂಶೋಧನಾ ಮೂಲಗಳನ್ನು ನೆಚ್ಚಿಕೊಂಡು ಅಧ್ಯಯನ ವರದಿ ಸಿದ್ಧಪಡಿಸಲಾಗಿದೆ.

ವಿದೇಶಿ ಬಂಡವಾಳದ ಬೃಹತ್ ಹೂಡಿಕೆಗೆ ಸಾಕ್ಷಿಯಾದ 2023

ಎಫ್‌ಪಿಐ: ₹1.7 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಜಾಗತಿಕ ಸವಾಲುಗಳ ನಡುವೆಯೂ ಭಾರತದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಬಲವಾಗಿರುವುದರ ವಿಶ್ವಾಸದಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) 2023ರಲ್ಲಿ ದೇಶದ ಷೇರು ಮಾರುಕಟ್ಟೆಯಲ್ಲಿ ₹1.7 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡಿದ್ದಾರೆ.

ಡಿಸೆಂಬರ್‌ನಲ್ಲಿ ₹66,134 ಕೋಟಿ ಒಳಹರಿವು ಆಗಿದೆ; 2023ರ ವರ್ಷವು ಎಫ್‌ಪಿಐಗಳ ಬೃಹತ್ ಹೂಡಿಕೆ ಕಂಡಿದೆ.

2024ರ ಉದ್ದಕ್ಕೂ ಅಮೆರಿಕದ ಬಡ್ಡಿ ದರದಲ್ಲಿ ನಿರಂತರ ಇಳಿಕೆಯ ಸಾಧ್ಯತೆ ಇರುವುದರಿಂದ ಎಫ್‌ಪಿಐಗಳು ಭಾರತದಲ್ಲಿ ಹೆಚ್ಚು ಹೂಡಿಕೆ ಮಾಡುವ ನಿರೀಕ್ಷೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ. ಅಮೆರಿಕ ಬಾಂಡ್ ಇಳುವರಿಯಲ್ಲಿ ಸ್ಥಿರವಾದ ಇಳಿಕೆಯು ಎಫ್‌ಪಿಐಗಳ ಕಾರ್ಯತಂತ್ರದಲ್ಲಿ ಈ ಬದಲಾವಣೆಗೆ ಕಾರಣವಾಗಿದೆ ಎಂದೂ ಹೇಳಿದ್ದಾರೆ.

2023ರಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳಲ್ಲಿ ₹1.71 ಲಕ್ಷ ಕೋಟಿ ಮತ್ತು ಸಾಲದ ಮಾರುಕಟ್ಟೆಯಲ್ಲಿ ₹68,663 ಕೋಟಿಯಷ್ಟು ಹೂಡಿಕೆ ಮಾಡಿದ್ದಾರೆ. ಬಂಡವಾಳ ಮಾರುಕಟ್ಟೆಯಲ್ಲಿ ₹2.4 ಲಕ್ಷ ಕೋಟಿ ಹೂಡಿಕೆ ಆಗಿದೆ ಎಂದು ಅಂಕಿ ಅಂಶಗಳು ತಿಳಿಸಿವೆ.

ಜಾಗತಿಕ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ನಿರಂತರವಾಗಿ ಏರಿಸಿದ್ದರಿಂದಾಗಿ 2022ರಲ್ಲಿ ಎಫ್‌ಪಿಐಗಳಿಂದ ₹1.21 ಲಕ್ಷ ಕೋಟಿಗಳಷ್ಟು ಹೊರಹರಿವು ಆಗಿತ್ತು. ಎಫ್‌ಪಿಐಗಳ ಹೂಡಿಕೆ 2021ರಲ್ಲಿ ₹25,752 ಕೋಟಿ, 2020ರಲ್ಲಿ ₹1.7 ಲಕ್ಷ ಕೋಟಿ ಮತ್ತು 2019ರಲ್ಲಿ ₹1.01 ಲಕ್ಷ ಕೋಟಿ ಆಗಿತ್ತು.

ಭಾರತದ ಅರ್ಥ ವ್ಯವಸ್ಥೆಯು ದೃಢವಾಗಿ ಬೆಳೆಯಬಹುದು ಎಂಬ ನಿರೀಕ್ಷೆ, ಜಾಗತಿಕ ಬಿಕ್ಕಟ್ಟುಗಳಿಂದ ಬಾಧಿತವಾಗದಿರುವ ಸಾಮರ್ಥ್ಯ, ದೇಶೀಯವಾಗಿ ಹೆಚ್ಚಿನ ಬಳಕೆ ಸಾಮರ್ಥ್ಯವು ದೇಶವನ್ನು ಹೂಡಿಕೆಗೆ ಆಕರ್ಷಕ ತಾಣವಾಗಿಸಿದೆ ಎಂದು ಅರಿಹಂತ್ ಕ್ಯಾಪಿಟಲ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಅಭಿಷೇಕ್ ಜೈನ್ ಅಭಿಪ್ರಾಯಪಟ್ಟಿದ್ದಾರೆ.

ಬಾಂಡ್‌ಗೆ ಬಲ

ಭಾರತ ಸರ್ಕಾರದ ಬಾಂಡ್‌ಗಳನ್ನು ತನ್ನ ಮಾರುಕಟ್ಟೆ ಸೂಚ್ಯಂಕದಲ್ಲಿ 2024ರ ಜೂನ್‌ನಲ್ಲಿ ಸೇರ್ಪಡೆ ಮಾಡುವುದಾಗಿ ಜೆ.ಪಿ. ಮಾರ್ಗನ್ ಚೇಸ್ ಆ್ಯಂಡ್ ಕಂಪನಿಯು 2023ರ ಸೆಪ್ಟೆಂಬರ್‌ನಲ್ಲಿ ಘೋಷಿಸಿತ್ತು. ಬಾಂಡ್‌ನಲ್ಲಿ ಹೂಡಿಕೆ ಮಾಡಲು ವಿದೇಶಿ ಹೂಡಿಕೆದಾರರು ಆಸಕ್ತಿ ತೋರಲು ಇದು ಕಾರಣವಾಯಿತು.

2024ರ ಜೂನ್ ಬಳಿಕದ 18ರಿಂದ 24 ತಿಂಗಳಲ್ಲಿ ಭಾರತಕ್ಕೆ ₹1.7 ಲಕ್ಷ ಕೋಟಿಯಿಂದ ₹3.5 ಲಕ್ಷ ಕೋಟಿಯವರೆಗೆ ವಿದೇಶಿ ಹೂಡಿಕೆ ಹರಿದು ಬರಬಹುದು ಎಂದು ಅಂದಾಜಿಸಲಾಗಿದೆ. ಈ ಒಳಹರಿವಿನಿಂದಾಗಿ ಭಾರತದ ಬಾಂಡ್‌ಗಳು ವಿದೇಶಿಯರಿಗೆ ಸುಲಭವಾಗಿ ಲಭ್ಯವಾಗಬಹುದು. ಪರಿಣಾಮವಾಗಿ ರೂಪಾಯಿ ಬಲವರ್ಧನೆಯ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕ ಸೇನೆಯಿಂದ 10 ಹುತಿ ಬಂಡುಕೋರರ ಹತ್ಯೆ

ಯೆಮೆನ್ (ಎಎಫ್‌ಪಿ): ಕೆಂಪು ಸಮುದ್ರದಲ್ಲಿ ಸರಕು ಸಾಗಣೆ ಹಡಗಿನ ಮೇಲೆ ದೋಣಿಗಳಿಂದ ದಾಳಿ ನಡೆಸುತ್ತಿದ್ದ ಇರಾನ್ ಬೆಂಬಲಿತ 10 ಹುತಿ ಬಂಡುಕೋರರನ್ನು ನೌಕಾಪಡೆಯ ಹೆಲಿಕಾಪ್ಟರ್‌ನಿಂದ ಗುಂಡಿನ ದಾಳಿ ನಡೆಸಿ ಕೊಲ್ಲಲಾಗಿದೆ ಎಂದು ಅಮೆರಿಕ ಸೇನೆ ಭಾನುವಾರ ತಿಳಿಸಿದೆ.

ಸಿಂಗಪುರ ಧ್ವಜದ, ಡೆನ್ಮಾರ್ಕ್ ಒಡೆತನದ ಮಾರ್ಸ್ಕ್ ಹ್ಯಾಂಗ್‌ಝೌ ಹೆಸರಿನ ಕಂಟೈನರ್ ಹಡಗಿನಿಂದ ತುರ್ತು ನೆರವಿನ ಕರೆ ನೌಕಾಪಡೆಗೆ ಬಂದಿತ್ತು. ಕೆಂಪು ಸಮುದ್ರದಲ್ಲಿ ಸಾಗುವಾಗ ಈ ಹಡಗು 24 ತಾಸುಗಳಲ್ಲಿ ಎರಡನೇ ಬಾರಿಗೆ ದಾಳಿಗೆ ತುತ್ತಾಗಿತ್ತು.

ಈ ಹಡಗು ಮೊದಲು ಎರಡು ಹಡಗು ಧ್ವಂಸಕ ಬ್ಯಾಲಿಸ್ಟಿಕ್ ಕ್ಷಿಪಣಿಗಳಿಗೆ ಗುರಿಯಾಗಿದ್ದು, ಇದರಲ್ಲಿ ಒಂದನ್ನು ಅಮೆರಿಕ ಸೇನೆ ಹೊಡೆದುರುಳಿಸಿತ್ತು. ಇನ್ನೊಂದು ಕ್ಷಿಪಣಿ ಹಡಗಿಗೆ ಅಪ್ಪಳಿಸಿತ್ತು ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ಹೇಳಿದೆ.

ನೆರವಿಗೆ ಧಾವಿಸಿದ ಅಮೆರಿಕದ ಹೆಲಿಕಾಪ್ಟರ್‌ನತ್ತಲೂ ಹಡಗಿಗೆ 20 ಮೀಟರ್ ಹತ್ತಿರದಲ್ಲಿದ್ದ ದೋಣಿಗಳಿಂದ ಹುತಿ ಬಂಡುಕೋರರು ಗುಂಡು ಹಾರಿಸಿದರು. ಆಗ ಸ್ವರಕ್ಷಣೆಗೆ ಹೆಲಿಕಾಪ್ಟರ್‌ನಿಂದ ಸ್ವಯಂಚಾಲಿತ ಗುಂಡು ಹಾರಿಸಿದಾಗ ಮೂರು ದೋಣಿಗಳು ಮುಳುಗಿವೆ. ಮೂರು ದೋಣಿಗಳಲ್ಲಿದ್ದ ಬಂಡುಕೋರರು ಹತರಾಗಿದ್ದಾರೆ. ಒಂದು ದೋಣಿ ತಪ್ಪಿಸಿಕೊಂಡಿದೆ ಎಂದು ಅದು ಹೇಳಿದೆ.

ಮ್ಯಾಕ್ರನ್ ಭೇಟಿ ವೇಳೆ ರಕ್ಷಣಾ ಒಪ್ಪಂದಗಳ ಚರ್ಚೆ ಸಾಧ್ಯತೆ

ನವದೆಹಲಿ: ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಅವರು ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸುವುದರೊಂದಿಗೆ ಭಾರತ ಮತ್ತು ಫ್ರಾನ್ಸ್ ನಡುವಿನ ಬೃಹತ್ ರಕ್ಷಣಾ ಒಪ್ಪಂದಗಳಿಗೂ ವೇಗ ಸಿಗುವ ನಿರೀಕ್ಷೆಗಳಿವೆ.

26 ರಫೇಲ್ ಯುದ್ಧ ವಿಮಾನ ಖರೀದಿ ಮತ್ತು ಫ್ರಾನ್ಸ್‌ನ ತಂತ್ರಜ್ಞಾನ ಹಂಚಿಕೆಯೊಂದಿಗೆ ಭಾರತದಲ್ಲಿ ನಿರ್ಮಾಣವಾಗಲಿರುವ ಮೂರು ಜಲಾಂತರ್ಗಾಮಿ ಯೋಜನೆಗಳು ಅಂತಿಮಗೊಳ್ಳುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಜ. 26ರ 75ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಬರಲಿರುವ ಇಮ್ಯಾನುಯಲ್ ಮ್ಯಾಕ್ರನ್ ಅವರು ಸೇನಾ ಪಥಸಂಚಲನದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದ್ದಾರೆ.



ಹೊಸ ವರ್ಷದ ಅಂಗವಾಗಿ ಅಮೃತಸರದ ಹೊರವಲಯದಲ್ಲಿ ಭಾನುವಾರ ಜನರು ಗಾಳಿಪಟ ಹಾರಿಸಿದರು –ಪಿಟಿಐ ಚಿತ್ರ

ದಕ್ಷಿಣ ಕೊರಿಯಾ: ದಾಖಲೆ ಹಿಮಪಾತ

ಸೋಲ್ (ಎಪಿ): ‘ದಕ್ಷಿಣ ಕೊರಿಯಾ ರಾಜಧಾನಿ ಸೋಲ್‌ನಲ್ಲಿ ಶನಿವಾರ ದಾಖಲೆಯ (12.2 ಸೆಂಟಿಮೀಟರ್) ಹಿಮಪಾತವಾಗಿದೆ’ ಎಂದು ಕೊರಿಯಾ ಹವಾಮಾನ ಇಲಾಖೆ ಭಾನುವಾರ ತಿಳಿಸಿದೆ.

‘40 ವರ್ಷಗಳಲ್ಲೇ (1981ರಿಂದೀಚೆಗೆ) ಈ ಡಿಸೆಂಬರ್‌ನಲ್ಲಿ ಅತಿ ಹೆಚ್ಚಿನ ಹಿಮಪಾತವಾಗಿದೆ. ಇಲ್ಲಿಯವರೆಗೆ ಯಾವುದೇ ಸಾವು–ನೋವು ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಕೊರಿಯಾದ ಇತರ ಭಾಗಗಳಲ್ಲೂ ಶನಿವಾರದಂದು ಹಿಮಪಾತ ಅಥವಾ ಮಳೆಯಾಗಿದೆ’ ಎಂದು ಅದು ಹೇಳಿದೆ.

ಕೇಪ್‌ಟೌನ್‌ನಲ್ಲಿ ನಾಳೆಯಿಂದ ಟೆಸ್ಟ್: ಅಲನ್ ಡೊನಾಲ್ಡ್ ಅಭಿಮತ

ವೇಗಿಗಳ ಸೃಜನಶೀಲತೆ ಪರೀಕ್ಷೆ


ದಕ್ಷಿಣ ಆಫ್ರಿಕಾದಲ್ಲಿ ಭಾರತ ತಂಡದ ಆಟಗಾರರ ಅಭ್ಯಾಸ –ಪಿಟಿಐ ಚಿತ್ರ

ಕೇಪ್‌ಟೌನ್ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಎರಡನೇ ಟೆಸ್ಟ್ ನಡೆಯಲಿರುವ ನ್ಯೂಲ್ಯಾಂಡ್ ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಇತಿಹಾಸ ಹೊಂದಿದೆ.

ಮೊದಲ ಪಂದ್ಯ ನಡೆದ ಸೆಂಚುರಿಯನ್ ಕ್ರೀಡಾಂಗಣದ ಪಿಚ್ ಬೌಲರ್‌ಗಳ ಸ್ನೇಹಿಯಾಗಿತ್ತು. ಆದರೂ ಭಾರತದ ಬೌಲರ್‌ಗಳು ಯಶಸ್ವಿಯಾಗಿರಲಿಲ್ಲ. ಆದ್ದರಿಂದ ಬ್ಯಾಟರ್ ಸ್ನೇಹಿಯಾಗಿರುವ ಇಲ್ಲಿ ಅವರಿಗೆ ಕಠಿಣ ಸವಾಲು ಎದುರಾಗುವ ಸಾಧ್ಯತೆ ಇದೆ.

‘ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಬೌಲರ್‌ಗಳು ಅಂಕಣದ 5 ಮತ್ತು 5.5 ಮೀಟರ್ಸ್ ವ್ಯಾಪ್ತಿಯಲ್ಲಿ ನಿರಂತರವಾಗಿ ಎಸೆತಗಳನ್ನು ಹಾಕಿದರು. ಆ ಕಾರ್ಯದಲ್ಲಿ ಬೌಲರ್‌ಗಳಿಗೆ ಅಪಾರ ಸಹನೆ ಇತ್ತು. ಆದರೆ ಭಾರತದ ಬೌಲರ್‌ಗಳು ಈ ವಿಷಯದಲ್ಲಿ ಎಡವಿದರು. ಇಲ್ಲಿ (ಕೇಪ್‌ಟೌನ್) ಭಾರತದ ಬೌಲರ್‌ಗಳ ಸೃಜನಶೀಲತೆಯ ಪರೀಕ್ಷೆ ನಡೆಯುವುದು ಖಚಿತ’ ಎಂದು ದಕ್ಷಿಣ ಆಫ್ರಿಕಾದ ಕ್ರಿಕೆಟ್ ದಂತಕಥೆ ಅಲನ್ ಡೊನಾಲ್ಡ್ ಅಭಿಪ್ರಾಯಪಟ್ಟಿದ್ದಾರೆ.

‘ಭಾರತ ತಂಡದಲ್ಲಿ ಒಬ್ಬ ಬೌಲರ್ (ಪ್ರಸಿದ್ಧಕೃಷ್ಣ) ಪದಾರ್ಪಣೆ ಪಂದ್ಯ ಆಡಿದರು. ಭಾರತದ ಬೌಲರ್‌ಗಳು ಪಿಚ್ ಪರಿಸ್ಥಿತಿ ಬದಲಾವಣೆಯ ನಿರೀಕ್ಷೆಯಲ್ಲಿದ್ದರು. ಶಾರ್ಟ್ ಪಿಚ್ ಎಸೆತಗಳನ್ನು ಪ್ರಯೋಗಿಸಲು ಆರಂಭಿಸಿದರು. ಅದರಿಂದಾಗಿ ಲೈನ್ ಮತ್ತು ಲೆಂಗ್ತ್ ಕಳೆದುಕೊಂಡರು. ಪಿಚ್ ಎರಡೂ ಕಡೆ ಚೆಂಡನ್ನು ಹೊಡೆಯುವ ಅವಕಾಶ ಬ್ಯಾಟರ್‌ಗಳಿಗೆ ಲಭಿಸಿತು. ಸ್ಕ್ವೇರ್ ಲೆಗ್ ಹಾಗೂ ಆಫ್‌ಸೈಡ್‌ನಲ್ಲಿ ಬ್ಯಾಟರ್‌ಗಳು ರನ್ ಗಳಿಸಿದರು’ ಎಂದು 57 ವರ್ಷದ ಡೊನಾಲ್ಡ್ ವಿಶ್ಲೇಷಿಸಿದರು.

‘ಕೇಪ್‌ಟೌನ್‌ಗೆ ಬರುವ ಎರಡೂ ತಂಡಗಳು ಈಗ ಕಠಿಣ ಪರಿಶ್ರಮ ಪಡಲೇಬೇಕು. ಎಲ್ಲ ಆಟಗಾರರಿಗೂ ಹೆಚ್ಚು ಶಕ್ತಿ ಬೇಕು. ಉಭಯ ತಂಡಗಳವರ ನೈಜ ಸಾಮರ್ಥ್ಯವನ್ನು ಒರೆಗೆ ಹಚ್ಚಲಿದೆ ಈ ತಾಣ’ ಎಂದು ಹೇಳಿದರು.

‘ಇಲ್ಲಿಯ ಪಿಚ್‌ಗಳು ಸಪಾಟಾಗಿವೆ. ಬ್ಯಾಟರ್‌ಗಳಿಗೆ ಜೊತೆಯಾಟವನ್ನು ದೀರ್ಘವಾಗಿ ಬೆಳೆಸಲು ಅನುವು ಮಾಡಿಕೊಡುತ್ತವೆ. ಎರಡೂ ತಂಡಗಳ ಬೌಲರ್‌ಗಳು ಹೆಚ್ಚು ಕ್ರಿಯಾಶೀಲವಾಗಿ ಆಡಬೇಕು. ಹೊಸ ತಂತ್ರಗಳನ್ನು ಪ್ರಯೋಗಿಸಬೇಕು’ ಎಂದು ಮಾಜಿ ವೇಗಿ ಡೊನಾಲ್ಡ್ ಅಭಿಪ್ರಾಯಪಟ್ಟರು.

‘ಪಂದ್ಯದ ಕೊನೆಯ ಹಂತಗಳಲ್ಲಿ ಸ್ಪಿನ್ನರ್‌ಗಳಿಗೆ ಒಂದಿಷ್ಟು ನೆರವು ಸಿಕ್ಕಬಹುದು. ಆದರೆ ದಕ್ಷಿಣ ಆಫ್ರಿಕಾ ಪಿಚ್‌ಗಳಲ್ಲಿ ಭಾರತೀಯ ಸ್ಪಿನ್ನರ್‌ಗಳು ಪಾರುಪತ್ಯ ನಡೆಸುವುದು ಕಷ್ಟ. ಅದನ್ನು ಮರೆತೇ ಬಿಡಿ’ ಎಂದೂ ಹೇಳಿದರು.

ಗಿಲ್ ಟೆಸ್ಟ್ ಮಾದರಿಗೆ ಹೊಂದಿಕೊಳ್ಳಲಿ: ಗಾವಸ್ಕರ್

ನವದೆಹಲಿ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಟೆಸ್ಟ್ ಮಾದರಿಯಲ್ಲಿ ಸ್ವಲ್ಪ ಆಕ್ರಮಣಶೀಲರಾಗಿ ಆಡುತ್ತಿದ್ದಾರೆ. ಆದರೆ ಟಿ20, ಏಕದಿನ ಮಾದರಿಗಳಲ್ಲಿ ಆಡುವುದಕ್ಕಿಂತ ಟೆಸ್ಟ್ ಕ್ರಿಕೆಟ್ ಭಿನ್ನವಾದದ್ದು ಎಂದು ವೀಕ್ಷಕ ವಿವರಣೆಕಾರ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

ಗಿಲ್ ಅವರು ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ (2 ಮತ್ತು 26) ವೈಫಲ್ಯ ಅನುಭವಿಸಿದ್ದರು. ಅವರು ಕ್ರಮವಾಗಿ ವೇಗಿಗಳಾದ ನಾಂದ್ರೆ ಬರ್ಗರ್ ಮತ್ತು ಮಾರ್ಕೊ ಯಾನ್ಸೆನ್ ಅವರ ಎಸೆತಗಳಲ್ಲಿ ಔಟಾಗಿದ್ದರು.

ಈ ಕುರಿತು ಸ್ಟಾರ್ ಸ್ಪೋರ್ಟ್ಸ್ ಕಾರ್ಯಕ್ರಮದಲ್ಲಿ ಮಾತನಾಡಿರುವ ಗಾವಸ್ಕರ್, ‘ಬಿಳಿ ಚೆಂಡಿಗಿಂತಲೂ ಕೆಂಪು ಚೆಂಡಿನ ಚಲನೆಯು ಗಾಳಿಯಲ್ಲಿ ತುಸು ಹೆಚ್ಚಿರುತ್ತದೆ. ಅಲ್ಲದೇ ಹೆಚ್ಚು ಬೌನ್ಸ್ ಕೂಡ ಆಗುತ್ತದೆ. ಅದನ್ನು ಗಿಲ್ ಅರಿತುಕೊಂಡು ಆಡಬೇಕು’ ಎಂದಿದ್ದಾರೆ.

‘ಗಿಲ್ ತಮ್ಮ ವೃತ್ತಿಜೀವನದ ಆರಂಭವನ್ನು ತುಂಬಾ ಚೆನ್ನಾಗಿ ಮಾಡಿದ್ದರು. ಆಗ ಅವರ ಹೊಡೆತಗಳನ್ನು ನಾವೆಲ್ಲರೂ ಶ್ಲಾಘಿಸಿದ್ದೇವೆ. ಈಗಲೂ ಅವರು ಟೆಸ್ಟ್ ಕ್ರಿಕೆಟ್‌ಗೆ ಸರಿಹೊಂದುವಂತಹ ಆಟಕ್ಕೆ ಕುದುರಿಕೊಳ್ಳುವರು ಎಂಬ ಭರವಸೆ ಇಡಬಹುದು’ ಎಂದು ಹೇಳಿದ್ದಾರೆ.

ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಉತ್ತಮವಾಗಿ ಆಡುವ ಗಿಲ್, ಟೆಸ್ಟ್ ಮಾದರಿಯಲ್ಲಿ ಹೆಚ್ಚು ರನ್ ಗಳಿಸಿಲ್ಲ. 2023ರಲ್ಲಿ ಆಡಿರುವ ಹತ್ತು ಇನಿಂಗ್ಸ್‌ಗಳಲ್ಲಿ ಕೇವಲ ಒಂದು ಅರ್ಧಶತಕ ಗಳಿಸಿದ್ದಾರೆ.

ಅನಾಹತ್‌ಗೆ ಸ್ಕಾಟಿಷ್ ಓಪನ್ ಕಿರೀಟ


ಅನಾಹತ್ ಸಿಂಗ್

ನವದೆಹಲಿ (ಪಿಟಿಐ): ಭಾರತದ ಯುವಪ್ರತಿಭೆ ಅನಾಹತ್ ಸಿಂಗ್, 19 ವರ್ಷದೊಳಗಿನವರ ಬಾಲಕಿಯರ ಸ್ಕಾಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಎಡಿನ್‌ಬರ್ಗ್‌ನಲ್ಲಿ ಶನಿವಾರ ನಡೆದ ಟೂರ್ನಿಯ ಫೈನಲ್‌ನಲ್ಲಿ ಅನಾಹತ್ 11-6, 11-1, 11-5ರಿಂದ ಸ್ಥಳೀಯ ಪ್ರತಿಭೆ ರೊಬೈನ್ ಮೆಕಅಲ್ಪಾಯಿನ್ ಅವರನ್ನು ಮಣಿಸಿದರು.

ದೆಹಲಿಯ ಅನಾಹತ್ ಅವರಿಗೆ ಇದು ಸಾಧನೆಗಳ ವರ್ಷವಾಗಿದೆ. 19 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಡಬಲ್ ಸಾಧನೆ ಮಾಡಿದರು.

ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ತಂಡ ಮತ್ತು ಮಿಶ್ರ ಡಬಲ್ಸ್ ವಿಭಾಗದಲ್ಲಿ ಕಂಚಿನ ಪದಕಗಳನ್ನು ಜಯಿಸಿದ ಸಾಧನೆ ಅವರದ್ದಾಗಿದೆ.

ಮಿಶ್ರ ಡಬಲ್ಸ್‌ನಲ್ಲಿ ಅವರು ಅಭಯಸಿಂಗ್ ಅವರೊಂದಿಗೆ ಪದಕ ಸಾಧನೆ ಮಾಡಿದ್ದರು. 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಭಾರತದ ಸುಭಾಷ್ ಚೌಧರಿ 5-11, 11-4, 6-11, 11-8, 11-5ರಿಂದ ಭಾರತದವರೇ ಆದ ಶಿವೇನ್ ಅಗರವಾಲ್ ಅವರನ್ನು ಮಣಿಸಿದರು.

13 ವರ್ಷದೊಳಗಿನ ಬಾಲಕರ ಫೈನಲ್‌ನಲ್ಲಿ ಶ್ರೇಷ್ಠ ಅಯ್ಯರ್ 11-8, 11-8, 3-11, 11-8ರಿಂದ ಶ್ರೇಯಾಂಶ್ ಝಾ ವಿರುದ್ಧ ಗೆದ್ದರು. 11ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರಭವ್ ಬಜೋರಿಯಾ 5-11, 9-11, 11-5, 11-8, 11-6ರಿಂದ ಎರಡನೇ ಶ್ರೇಯಾಂಕದ ಆದಿತ್ಯ ಶಾ ವಿರುದ್ಧ ಜಯಭೇರಿ ಬಾರಿಸಿದರು. ಬಾಲಕಿಯರ 13 ವರ್ಷದೊಳಗಿನವರ ಫೈನಲ್‌ನಲ್ಲಿ ಭಾರತದ ಅಗ್ರಶ್ರೇಯಾಂಕದ ಆಟಗಾರ್ತಿ ಆದ್ಯಾ ಬುಧಿಯಾ 9-11, 11-8, 8-11, 11-8, 11-9ರಿಂದ ಮಲೇಷ್ಯಾದ ನೀಯಾ ಚಿವ್ ವಿರುದ್ಧ ಜಯಿಸಿದರು. 11 ವರ್ಷದ ಬಾಲಕಿಯರ ವಿಭಾಗದಲ್ಲಿ ದಿವ್ಯಾಂಶಿ ಜೈನ್ ರನ್ನರ್ ಅಪ್ ಆದರು.

ಟೂರ್ನಿಯಲ್ಲಿ 30 ದೇಶಗಳ 200 ಆಟಗಾರರು ಸ್ಪರ್ಧಿಸಿದ್ದರು.


ಯುಗಾಂಡಾದ ಅಥ್ಲೀಟ್ ಕೊಲೆ

ನೈರೋಬಿ (ಎಎಫ್‌ಪಿ): ಯುಗಾಂಡಾದ ಅಥ್ಲೀಟ್ ಬೆಂಜಮಿನ್ ಕಿಪ್ಲಗ್ಯಾಟ್ ಅವರ ಮೃತದೇಹ ಕೆನ್ಯಾದಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಅವರನ್ನು ಕೊಲೆಗೈಯ್ಯಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ತಿಳಿಸಿವೆ.

ಕೆನ್ಯಾ ಸಂಜಾತರಾದ 34 ವರ್ಷದ ಕಿಪ್ಲಗ್ಯಾಟ್ 3,000 ಮೀಟರ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಕೆಲವು ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಷಿಪ್ ಸೇರಿದಂತೆ ಹಲವು ಕೂಟಗಳಲ್ಲಿ ಯುಗಾಂಡವನ್ನು ಪ್ರತಿನಿಧಿಸಿದ್ದಾರೆ. ಅವರ ಮೃತದೇಹ ಶನಿವಾರ ರಾತ್ರಿ ರಿಫ್ಟ್ ವ್ಯಾಲಿಯ ನಗರ ಎಲ್ಡೊರೆಟ್ ಎಂಬಲ್ಲಿ ಕಾರಿನಲ್ಲಿ ಪತ್ತೆಯಾಗಿದೆ.

‘ಅಧಿಕಾರಿಗಳು ಸುಳಿವಿಗಾಗಿ ಬೆನ್ನುಹತ್ತಿದ್ದಾರೆ’ ಎಂದು ಸ್ಥಳೀಯ ಪೊಲೀಸ್ ಕಮಾಂಡರ್ ಸ್ಟೀಫನ್ ಓಕಲ್ ಎಲ್ಡೊರೆಟ್‌ನಲ್ಲಿ ವರದಿಗಾರರಿಗೆ ತಿಳಿಸಿದರು. ಕಿಪ್ಲಗ್ಯಾಟ್ ಅವರ ಕುತ್ತಿಗೆಗೆ ಆಳವಾಗಿ ಇರಿಯಲಾಗಿದೆ.

ಹಾಕಿ: ಸಿಮ್ರನ್‌ಜೀತ್, ರಜನಿಗೆ ನಾಯಕತ್ವ


ಸಿಮ್ರನ್‌ಜೀತ್ ಸಿಂಗ್

ನವದೆಹಲಿ (ಪಿಟಿಐ): ಸಿಮ್ರನ್‌ಜೀತ್ ಸಿಂಗ್ ಮತ್ತು ರಜನಿ ಇತಿಮಪ್ರು ಅವರನ್ನು ಕ್ರಮವಾಗಿ ಎಫ್‌ಐಎಚ್ 5 ಎ ಸೈಡ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ಪುರುಷ ಮತ್ತು ಮಹಿಳಾ ತಂಡಗಳಿಗೆ ನಾಯಕರನ್ನಾಗಿ ಮಾಡಲಾಗಿದೆ.

ಮಸ್ಕತ್‌ನಲ್ಲಿ ಜನವರಿ 24 ರಿಂದ 27ರ ವರೆಗೆ ಮಹಿಳೆಯರ ಟೂರ್ನಿ ಮತ್ತು 28ರಿಂದ 31ರವರೆಗೆ ಪುರುಷರ ಟೂರ್ನಿ ಆಯೋಜಿಸಲಾಗಿದೆ.

ಗೋಲ್‌ಕೀಪರ್ ರಜನಿ ನಾಯಕತ್ವದ ತಂಡದಲ್ಲಿ ಡಿಫೆಂಡರ್ ಮಹಿಮಾ ಚೌಧರಿ ಉಪನಾಯಕಿಯಾಗಿದ್ದಾರೆ. ಎರಡನೇ ಗೋಲ್‌ಕೀಪರ್ ಆಗಿ ಬಾನ್ಸುರಿ ಸೋಳಂಕಿ, ಡಿಫೆಂಡರ್ಸ್ ಅಕ್ಷತಾ ಅಬಾರೊ ಢಕಳೆ ಮತ್ತು ಜ್ಯೋತಿ ಚೇಟ್ರಿ , ಮಿಡ್‌ಫೀಲ್ಡರ್ ಮರಿಯಾನಾ ಕುಜುರ್, ಮುಮ್ತಾಜ್ ಖಾನ್, ಫಾರ್ವರ್ಡ್ಸ್ ಅಜಮಿನಾ ಕುಜುರ್, ಖುತುಜಾ ದಾದಸೊ ಪಿಸಾಳ ಮತ್ತು ದೀಪಿಕಾ ಅವರು ತಂಡದಲ್ಲಿ ದ್ದಾರೆ.

ಮಹಿಳಾ ತಂಡವು ಸಿ ಗುಂಪಿನಲ್ಲಿ ಆಡಲಿದೆ. ನಮಿಬಿಯಾ, ಪೋಲೆಂಡ್ ಮತ್ತು ಅಮೆರಿಕ ತಂಡಗಳು ಈ ಗುಂಪಿನಲ್ಲಿವೆ.

ಪುರುಷರ ತಂಡಕ್ಕೆ ಮನದೀಪ್ ಮೋರ್ ಉಪನಾಯಕನಾಗಿ ದ್ದಾರೆ. ಗೋಲ್‌ಕೀಪರ್‌ಗಳಾದ ಸೂರಜ್ ಕರ್ಕೆರಾ, ಪ್ರಶಂತ್ ಕುಮಾರ್ ಚೌಹಾಣ್, ಮಿಡ್‌ಫೀಲ್ಡರ್ ಮೊಹಮ್ಮದ್ ರಾಹಿಲ್ ಮೌಸಿನ್, ಮಣಿಂದರ್ ಸಿಂಗ್, ಫಾರ್ವರ್ಡ್‌ನಲ್ಲಿ ಪವನ್ ರಾಜಭರ್, ಗುರ್ಜೋತ್ ಸಿಂಗ್ ಮತ್ತು ಉತ್ತಮ್ ಸಿಂಗ್ ಇದ್ದಾರೆ.

ಪುರುಷರ ತಂಡವು ಬಿ ಗುಂಪಿನಲ್ಲಿ ಆಡಲಿದೆ. ಈಜಿಪ್ಟ್, ಜಮೈಕಾ ಮತ್ತು ಸ್ವಿಟ್ಜರ್‌ಲೆಂಡ್ ತಂಡಗಳನ್ನು ಎದುರಿಸಲಿದೆ.

ಎ ಗುಂಪಿನಲ್ಲಿ ನೆದರ್ಲೆಂಡ್ಸ್, ನೈಜಿರಿಯಾ, ಪಾಕಿಸ್ತಾನ ಮತ್ತು ಪೋಲೆಂಡ್, ಸಿ ಗುಂಪಿನಲ್ಲಿ ಆಸ್ಟ್ರೇಲಿಯಾ, ಕೆನ್ಯಾ, ನ್ಯೂಜಿಲೆಂಡ್, ಟ್ರಿನಿಡಾಡ್ ಮತ್ತು ಟೊಬ್ಯಾಗೊ, ಡಿ ಗುಂಪಿನಲ್ಲಿ ಫಿಜಿ, ಮಲೇಷ್ಯಾ, ಒಮನ್ ಮತ್ತು ಅಮೆರಿಕ ತಂಡಗಳು ಇವೆ.

‘ನಮ್ಮ ತಂಡಗಳು ಉತ್ತಮವಾಗಿವೆ. ಎಲ್ಲ ವಿಭಾಗಗಳಲ್ಲಿ ಸಮತೋಲನ ಕಾಯ್ದುಕೊಂಡಿವೆ. ಈ ಮಾದರಿಯು ರೋಚಕವಾಗಿದ್ದು, ಅದಕ್ಕೆ ತಕ್ಕಂತೆ ತಂಡಗಳನ್ನು ಸಿದ್ಧಗೊಳಿಸಲಾಗಿದೆ’ ಎಂದು ಕೋಚ್ ಸರ್ದಾರ್ ಸಿಂಗ್ ಹೇಳಿದ್ದಾರೆ.

ಧೀರಜ್ ಗೌಡ ಶತಕ: ಕರ್ನಾಟಕ ಬಿಗಿ ಹಿಡಿತ

ಹುಬ್ಬಳ್ಳಿಯಲ್ಲಿ ಕೂಚ್ ಬಿಹಾರ್ ಟ್ರೋಫಿ; ಸಮಿತ್ ದ್ರಾವಿಡ್ ಉತ್ತಮ ಬೌಲಿಂಗ್

ಪ್ರಜಾವಾಣಿ ವಾರ್ತೆ


ಧೀರಜ್‌ಗೌಡ

ಹುಬ್ಬಳ್ಳಿ: ಅಮೋಘ ಶತಕ ಗಳಿಸಿದ ಧೀರಜ್ ಗೌಡ ಮತ್ತು ಶಿಸ್ತಿನ ದಾಳಿ ನಡೆಸಿದ ಸಮಿತ್ ದ್ರಾವಿಡ್ ನೆರವಿನಿಂದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಧ್ಯಪ್ರದೇಶದ ವಿರುದ್ಧ ಬಿಗಿ ಹಿಡಿತ ಸಾಧಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 147 ರನ್‌ಗಳ ಮುನ್ನಡೆ ಸಾಧಿಸಿತ್ತು. ಅದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಮಧ್ಯಪ್ರದೇಶ ತಂಡವು ಮೂರನೇ ದಿನದಾಟದ ಅಂತ್ಯಕ್ಕೆ 38 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿದೆ. ಆತಿಥೇಯರ ಮುನ್ನಡೆಯ ಬಾಕಿ ಚುಕ್ತಾ ಮಾಡಲು ಮಧ್ಯಪ್ರದೇಶಕ್ಕೆ ಇನ್ನೂ 34 ರನ್‌ಗಳ ಅಗತ್ಯವಿದೆ. ಸೋಮವಾರ ಬೆಳಿಗ್ಗೆ ಮಧ್ಯಪ್ರದೇಶದ ಮೂರು ವಿಕೆಟ್‌ಗಳನ್ನು ಬೇಗನೆ ಕಬಳಿಸಿದರೆ ಕರ್ನಾಟಕ ತಂಡಕ್ಕೆ ಇನಿಂಗ್ಸ್ ಗೆಲುವಿನ ಅವಕಾಶವಿದೆ.

ಎರಡನೇ ಇನಿಂಗ್ಸ್ ಆರಂಭಿಸಿದ ಮಧ್ಯಪ್ರದೇಶ ತಂಡಕ್ಕೆ ಸಮಿತ್ ದ್ರಾವಿಡ್ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಸಮಿತ್ ಎಸೆದ ಮೊದಲ ಓವರ್‌ನ ಎರಡನೇ ಎಸೆತದಲ್ಲಿ ಆರಂಭಿಕ ಆಟಗಾರ ವಿಕಾಸ್ ಶರ್ಮಾ ಧ್ರುವ್ ಪ್ರಭಾಕರ್‌ಗೆ ಕ್ಯಾಚಿತ್ತರು. ಮರು ಎಸೆತದಲ್ಲಿ ಅಭಿ ಅಗ್ನಿ ಕ್ಲೀನ್ ಬೌಲ್ಡ್ ಆದರು. ನಂತರ ಆಯುಷ್ ಆನಂದ್ ಅವರ ವಿಕೆಟ್ ಕಿತ್ತ ಸಮಿತ್ ಪಾರಮ್ಯ ಮೆರೆದರು.

ತಾಳ್ಮೆಯಿಂದ ಆಡುತ್ತಿದ್ದ ಸಾರಾಂಶ್ ಸುರಾನಾ (45, 86ಎ, 4X4) ಅವರಿಗೆ ಹಾರ್ದಿಕ್ ರಾಜ್ ಪೆವಿಲಿಯನ್ ದಾರಿ ತೋರಿಸಿದರು. ದಿನದಾಟದ ಅಂತ್ಯಕ್ಕೆ ಧನಂಜಯ್ ದೀಕ್ಷಿತ್ (26), ಅನಂತ್ ದುಬೆ (1) ಕ್ರೀಸ್‌ನಲ್ಲಿದ್ದರು.

ಧೀರಜ್ ಶತಕ: ಶನಿವಾರ ದಿನದಾಟದ ಅಂತ್ಯಕ್ಕೆ 80 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 227 ರನ್ ಗಳಿಸಿದ್ದ ಕರ್ನಾಟಕ ತಂಡಕ್ಕೆ ಭಾನುವಾರ ಬೆಳಿಗ್ಗೆ ಧ್ರುವ್ ಪ್ರಭಾಕರ್ ಮತ್ತು ತಂಡದ ನಾಯಕ ಧೀರಜ್ ಗೌಡ ಬಲ ತುಂಬಿದರು. ಇವರಿಬ್ಬರೂ ಏಳನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು.

ಧ್ರುವ್ ಪ್ರಭಾಕರ್ ಅರ್ಧಶತಕ (54) ಗಳಿಸಿ ನಿರ್ಗಮಿಸಿದರು. ನಂತರ ವೇಗವಾಗಿ ರನ್ ಕಲೆಹಾಕಿದ ಧೀರಜ್ ಗೌಡ ಶತಕ (157; 182ಎ, 4X22, 6X1) ಸಿಡಿಸಿದರು. ಧೀರಜ್ ಮತ್ತು ಎನ್. ಸಮರ್ಥ್ (18 ರನ್) ಅವರು ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 118 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತ 400ರ ಗಡಿ ದಾಟಿತು. ಸ್ಪಿನ್ನರ್ ವಿಷ್ಣು ಭಾರದ್ವಾಜ್ 116 ರನ್ ನೀಡಿ 7 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ ಮೊದಲ ಇನಿಂಗ್ಸ್: 101.1 ಓವರ್‌ಗಳಲ್ಲಿ 269. ಕರ್ನಾಟಕ ಮೊದಲ ಇನಿಂಗ್ಸ್ 129.3 ಓವರ್‌ಗಳಲ್ಲಿ 416 (ಧೀರಜ್‌ಗೌಡ 157, ಧ್ರುವ್ ಪ್ರಭಾಕರ್ 54, ಎನ್.ಸಮರ್ಥ್ 18, ವಿಷ್ಣು ಭಾರದ್ವಾಜ್ 116ಕ್ಕೆ 7). ಮಧ್ಯಪ್ರದೇಶ ಎರಡನೇ ಇನಿಂಗ್ಸ್ 38 ಓವರ್‌ಗಳಲ್ಲಿ 7 ವಿಕೆಟ್‌ಗೆ 113 (ಸಾರಾಂಶ್ ಸುರಾನ 45, ಧನಂಜಯ್ ದೀಕ್ಷಿತ್ 26, ಅನ್ವೇಶ್ ಚಾವ್ಲಾ 24, ಸಮಿತ್ ದ್ರಾವಿಡ್ 16ಕ್ಕೆ 3, ಹಾರ್ದಿಕ್ ರಾಜ್ 24ಕ್ಕೆ 2)

ಹೊಸ ವರ್ಷದಲ್ಲಿ ಮರಳಲಿದ್ದಾರೆ ರಿಷಭ್: ಹುಸೇನ್

ದುಬೈ (ಪಿಟಿಐ): ರಸ್ತೆ ಅಪಘಾತದಲ್ಲಿ ಗಾಯಗೊಂಡು ದೀರ್ಘ ಕಾಲದಿಂದ ಕ್ರಿಕೆಟ್‌ನಿಂದ ದೂರವುಳಿದಿರುವ ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಮತ್ತೆ ಕಣಕ್ಕೆ ಮರಳುವ ಸಿದ್ಧತೆಯಲ್ಲಿದ್ದಾರೆ.

2024ರಲ್ಲಿ ‘ಬಾಕ್ಸ್ ಆಫೀಸ್ ಕ್ರಿಕೆಟರ್’ ರಿಷಭ್ ಕ್ರಿಕೆಟ್‌ಗೆ ಮರಳಿ ಮಿಂಚುವರು ಎಂದು ಇಂಗ್ಲೆಂಡ್ ತಂಡದ ಮಾಜಿ ನಾಯಕ ನಾಸೀರ್ ಹುಸೇನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

2022ರ ಡಿಸೆಂಬರ್‌ನಲ್ಲಿ ಸಂಭವಿಸಿದ್ದ ಕಾರು ಅಪಘಾತದಲ್ಲಿ ರಿಷಭ್ ಗಂಭೀರವಾಗಿ ಗಾಯ ಗೊಂಡಿದ್ದರು. ಆಗಿನಿಂದ ಇಲ್ಲಿಯವರೆಗೆ ಅವರು ಶಸ್ತ್ರಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ. ಇತ್ತೀಚೆಗೆ ಅವರು ಫಿಟ್‌ನೆಸ್‌ಗೆ ಮರಳುತ್ತಿರುವುದಾಗಿ ವರದಿಗಳು ಬಂದಿವೆ.

‘ಅವರ (ರಿಷಭ್) ಚೇತರಿಕೆಗಾಗಿ ಇಡೀ ಜಗತ್ತು ಉಸಿರು ಬಿಗಿಹಿಡಿದು ಹಾರೈಸಿತ್ತು. ನಿಧಾನವಾಗಿ ಚೇತರಿಸಿಕೊಂಡಿದ್ದಾರೆ’ ಎಂದಿದ್ದಾರೆ ಹುಸೇನ್.

ಕಿವೀಸ್‌ಗೆ ಜಯ; ಸರಣಿ ಸಮಬಲ


ನ್ಯೂಜಿಲೆಂಡ್‌ನ ಆಲ್‌ರೌಂಡರ್ ಜಿಮ್ಮಿ ನೀಶಮ್ ಅವರ ಬ್ಯಾಟಿಂಗ್ ವೈಖರಿ– ಎಎಫ್‌ಪಿ ಚಿತ್ರ

ಮೌಂಟ್ ಮಾಂಗನೂಯಿ (ನ್ಯೂಜಿಲೆಂಡ್), (ಎಎಫ್‌ಪಿ): ಮಿಚೆಲ್ ಸ್ಯಾಂಟ್ನರ್ (16ಕ್ಕೆ4) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡ ಭಾನುವಾರ ನಡೆದ ಮೂರನೇ ಹಾಗೂ ಅಂತಿಮ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಡಕ್‌ವರ್ತ್ ಲೂಯಿಸ್ ನಿಯಮದಡಿ 17 ರನ್‌ಗಳಿಂದ ಸೋಲಿಸಿತು. ಇದರಿಂದ ಸರಣಿ 1–1ರಿಂದ ಸಮಬಲವಾಯಿತು.

ಬಾಂಗ್ಲಾದೇಶ ತಂಡವನ್ನು 110 ರನ್‌ಗಳಿಗೆ (19.2 ಓವರುಗಳಲ್ಲಿ) ಸೀಮಿತಗೊಳಿಸಿದ ನ್ಯೂಜಿಲೆಂಡ್, ನಂತರ ಅಗ್ರಕ್ರಮಾಂಕದ ಆಟಗಾರರನ್ನು ಬೇಗನೇ ಕಳೆದುಕೊಂಡಿತು.

ಆದರೆ ಆಲ್‌ರೌಂಡರ್ ಜಿಮ್ಮಿ ನೀಶಮ್ (ಔಟಾಗದೇ 28) ಮತ್ತು ಮಿಚೆಲ್ ಸ್ಯಾಂಟ್ನರ್ (ಔಟಾಗದೇ 18) ಚೇತರಿಕೆ ನೀಡಿದರು.

ಆತಿಥೇಯರು 14.4 ಓವರುಗಳಲ್ಲಿ 5 ವಿಕೆಟ್‌ಗೆ 95 ರನ್ ಗಳಿಸಿದಾಗ, ಭಾರಿ ಮಳೆಯಿಂದ ಆಟ ಸ್ಥಗಿತಗೊಂಡಿತು.

ಆದರೆ ನ್ಯೂಜಿಲೆಂಡ್ ಡಕ್‌ವರ್ತ್ ಲೂಯಿಸ್ ನಿಯಮದಡಿ ನಿಗದಿಯಾದ ಗುರಿಗಿಂತ ಸಾಕಷ್ಟು ಮುಂದಿತ್ತು. 14.4 ಓವರುಗಳಲ್ಲಿ ತಂಡ 79 ರನ್ ಗಳಿಸಿದ್ದರೆ ಸಾಕಿತ್ತು.

ಮೊದಲ ಪಂದ್ಯ ಮಳೆಗೆ ಕೊಚ್ಚಿಹೋಗಿತ್ತು. ಎರಡನೇ ಪಂದ್ಯದಲ್ಲಿ ಬಾಂಗ್ಲಾದೇಶ ಜಯಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 19.2 ಓವರುಗಳಲ್ಲಿ 110 (ಮಿಚೆಲ್ ಸ್ಯಾಂಟ್ನರ್ 16ಕ್ಕೆ4, ಟಿಮ್ ಸೌತಿ 25ಕ್ಕೆ2, ಆ್ಯಡಂ ಮಿಲ್ನೆ 23ಕ್ಕೆ2, ಬೆನ್ ಸಿಯರ್ಸ್ 28ಕ್ಕೆ2);

ನ್ಯೂಜಿಲೆಂಡ್: 14.4 ಓವರುಗಳಲ್ಲಿ 5 ವಿಕೆಟ್‌ಗೆ 79 (ಫಿನ್ ಅಲೆನ್ 38, ಜಿಮ್ಮಿ ನೀಶಮ್ ಔಟಾಗದೇ 28, ಸ್ಯಾಂಟ್ನರ್ ಔಟಾಗದೇ 18; ಮೆಹದಿ ಹಸನ್ 18ಕ್ಕೆ2, ಶರೀಫುಲ್ ಇಸ್ಲಾಂ 17ಕ್ಕೆ2).

ಫೆ.2ರಿಂದ ರಾಷ್ಟ್ರೀಯ ಕುಸ್ತಿ

ನವದೆಹಲಿ (ಪಿಟಿಐ): ಜೈಪುರದಲ್ಲಿ ಫೆಬ್ರುವರಿ 2 ರಿಂದ 5ರವರೆಗೆ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್ ನಡೆಯಲಿದೆ ಎಂದು ಭಾರತ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ)ಯ ಅಡ್‌ಹಾಕ್ ಸಮಿತಿ ತಿಳಿಸಿದೆ.

ಸೀನಿಯರ್ ಫ್ರೀ ಸ್ಟೈಲ್, ಗ್ರಿಕೊ ರೋಮನ್ ಮತ್ತು ಮಹಿಳಾ ವಿಭಾಗ ದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಸಮಿತಿಯ ಮುಖ್ಯಸ್ಥ ಭೂಪಿಂದರ್ ಸಿಂಗ್ ಬಜ್ವಾ ನೇತೃತ್ವದ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

‘ಎಲ್ಲಾ ಪತ್ರ ವ್ಯವಹಾರಗಳನ್ನು ತಾತ್ಕಾಲಿಕ ಸಮಿತಿಯೊಂದಿಗೆ ಮಾಡಬೇಕು. ಅಮಾನತುಗೊಂಡಿರುವ ಆಡಳಿತ ಸಮಿತಿ ಸದಸ್ಯರೊಂದಿಗೆ ಯಾವುದೇ ಮಧ್ಯಸ್ಥಗಾರರು ಸಂಪರ್ಕದಲ್ಲಿ ಇರಬಾರದು’ ಎಂದು ಸ್ಪಷ್ಟಪಡಿಸಿದೆ.

ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಗಣಪತಿ ನಗರದ ರೈಲ್ವೆ ಕ್ರೀಡಾಂಗಣದಲ್ಲಿ ಟೂರ್ನಿ ಆಯೋಜಿಸಿದೆ. ಕೆಲ ದಿನಗಳ ಹಿಂದೆಯಷ್ಟೇ ನಿಯಮ ಉಲ್ಲಂಘನೆ ಕಾರಣಕ್ಕಾಗಿ ಕ್ರೀಡಾ ಸಚಿವಾಲಯವು ಡಬ್ಲ್ಯುಎಫ್‌ಐ ಆಡಳಿತ ಸಮಿತಿಯನ್ನು ಅಮಾನತುಗೊಳಿಸಿದ ಬಳಿಕ ಭಾರತ ಒಲಿಂಪಿಕ್ ಸಂಸ್ಥೆಯು ಮೂರು ಸದಸ್ಯರ ತಾತ್ಕಾಲಿಕ ಸಮಿತಿ ನೇಮಕ ಮಾಡಿದೆ.

ಪ್ರಶಸ್ತಿ ಮರಳಿಸಿದ ವಿನೇಶಾ: ಮೋದಿ ವಿರುದ್ಧ ರಾಹುಲ್ ಕಿಡಿ

ನವದೆಹಲಿ (ಪಿಟಿಐ); ಕುಸ್ತಿಪಟು ವಿನೇಶಾ ಫೋಗಾಟ್ ಅವರು ತಮ್ಮ ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ಕರ್ತವ್ಯ ಪಥದಲ್ಲಿ ಇಟ್ಟು ಮರಳಿರುವುದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಒಲಿಂಪಿಕ್ ಪದಕವಿಜೇತರಾದ ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪೂನಿಯಾ ಅವರೊಂದಿಗೆ ಫೋಗಾಟ್ ಅವರೂ ನಿಕಟಪೂರ್ವ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಭಾರತ ಕುಸ್ತಿ ಫೆಡರೇಶನ್ (ಡಬ್ಲ್ಯುಎಫ್‌ಐ) ಅಧ್ಯಕ್ಷರಾಗಿ ಆಯ್ಕೆಯಾಗಿದ್ದನ್ನು ವಿರೋಧಿಸಿದ್ದರು.

ಕರ್ತವ್ಯ ಪಥದಲ್ಲಿನ ಫೋಗಾಟ್ ವಿಡಿಯೊ ಹಂಚಿಕೊಂಡ ರಾಹುಲ್, ‘ದೇಶದ ಪ್ರತಿಯೊಬ್ಬ ಮಗಳಿಗೆ ಆತ್ಮಗೌರವವು ಮೊದಲನೆ ಯದು. ಇತರ ಯಾವುದೇ ಪದಕ ಅಥವಾ ಗೌರವವು ಅದರ ನಂತರ ಬರುತ್ತದೆ’ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ರಾಜಕೀಯ ಲಾಭಗಳು’ ಈ ಧೈರ್ಯಶಾಲಿ ಹೆಣ್ಣುಮಕ್ಕಳ ಕಣ್ಣೀರನ್ನು ಮೀರಿವೆಯೇ? ಪ್ರಧಾನಿ ರಾಷ್ಟ್ರದ ರಕ್ಷಕ. ಅವರ ಕಡೆಯಿಂದ ಇಂತಹ ಕ್ರೌರ್ಯ ನೋಡುವುದು ನೋವುಂಟು ಮಾಡುತ್ತದೆ’ ಎಂದು ಹೇಳಿದ್ದಾರೆ.

ಬೆಂಗಳೂರು ಬುಲ್ಸ್‌ಗೆ ರೋಚಕ ಗೆಲುವು


ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಬೆಂಗಳೂರು ಬುಲ್ಸ್ ಮತ್ತು ತಮಿಳ್ ತಲೈವಾಸ್ ತಂಡಗಳ ನಡುವಣ ಪಂದ್ಯ.

ನೊಯ್ಡಾ (ಪಿಟಿಐ): ಭರತ್ ನಡೆಸಿದ ಮಿಂಚಿನ ದಾಳಿಯ ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ತಮಿಳ್ ತಲೈವಾಸ್ ಎದುರು ರೋಚಕ ಜಯ ಸಾಧಿಸಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 38–37ರಿಂದ ತಲೈವಾಸ್ ವಿರುದ್ಧ ಗೆದ್ದಿತು.

ಪಂದ್ಯದ ಮೊದಲಾರ್ಧದಲ್ಲಿ ತಲೈವಾಸ್ ತಂಡವು 20–17ರ ಮುನ್ನಡೆ ಸಾಧಿಸಿತ್ತು. ನರೇಂದರ್ ಅವರು ಉತ್ತಮ ದಾಳಿ ಸಂಘಟಿಸಿ 12 ಅಂಕ ಗಳಿಸಿದರು. ಆದರೆ ವಿರಾಮದ ನಂತರ ಚುರುಕಾದ ಆಟ ತೋರಿಸಿದ ಬೆಂಗಳೂರು ಬಳಗವು ಮುನ್ನಡೆ ಸಾಧಿಸಿತು. ಭರತ್ 10 ಅಂಕ ಗಳಿಸಿದರು. ರೇಡರ್ ವಿಕಾಸ್ ಖಂಡೋಲಾ, ನೀರಜ್ ನರ್ವಾಲ್ ಮತ್ತು ಸೌರಭ್ ನಂದಾಲ್ ತಲಾ 4 ಅಂಕ ಗಳಿಸಿದರು.

ಗುಜರಾತ್‌ಗೆ ಜಯ: ರೇಡರ್ ಪ್ರತೀಕ್ ದಹಿಯಾ ಗಳಿಸಿದ 25 ಅಂಕಗಳ ಬಲದಿಂದ ಗುಜರಾತ್ ಜೈಂಟ್ಸ್ ತಂಡ 51–42 ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಿಸಿತು.

ಇಂದಿನ ಪಂದ್ಯ : ತೆಲುಗು ಟೈಟನ್ಸ್–ಪುಣೇರಿ ಪಲ್ಟನ್ (ರಾತ್ರಿ 8), ಯುಪಿ ಯೋಧಾಸ್–ಪಟ್ನಾ ಪೈರೆಟ್ಸ್ (ರಾತ್ರಿ 9)

ಅಡಕತ್ತರಿಯಲ್ಲಿ ಕುಣಿಗಲ್ ಕುದುರೆ ಫಾರ್ಮ್

ಒಂದನೇ ಪುಟದಿಂದ

‘ಪಶುಸಂಗೋಪನಾ ಇಲಾಖೆಯ ಸ್ವಾಧೀನದಲ್ಲಿರುವ ಜಮೀನನ್ನು ನಗರಾಭಿವೃದ್ಧಿ ಇಲಾಖೆಯ ಸ್ವಾಧೀನಕ್ಕೆ ಪಡೆದು ಟೌನ್‌ಶಿಪ್ ನಿರ್ಮಿಸಬೇಕಾಗುತ್ತದೆ. ಈ ಕುರಿತು ಸಚಿವರ ಹಂತದಲ್ಲಿ ಚರ್ಚೆ ನಡೆದಿದೆ. ಟೌನ್‌ಶಿಪ್ ನಿರ್ಮಾಣದ ಕುರಿತು ತಜ್ಞರಿಂದ ಕಾರ್ಯಸಾಧ್ಯತಾ ವರದಿ ಪಡೆಯಲು ನಿರ್ಧರಿಸಲಾಗಿದೆ. ವರದಿ ಬಂದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ನಗರಾಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.



ಮೈಸೂರು ಸಂಸ್ಥಾನದ ಆಳ್ವಿಕೆ ನಡೆಸುತ್ತಿದ್ದ ಟಿಪ್ಪು ಸುಲ್ತಾನ್ ಉತ್ಕೃಷ್ಟ ಗುಣಮಟ್ಟದ ಕುದುರೆಗಳ ತಳಿ ಅಭಿವೃದ್ಧಿಗಾಗಿ ಈಗ ಪಟ್ಟಣವಾಗಿರುವ ಕುಣಿಗಲ್‌ನಲ್ಲಿ ‘ಕುಣಿಗಲ್ ಕುದುರೆ ಫಾರ್ಮ್’ ಆರಂಭಿಸಿದ್ದರು. ಪಶು ಸಂಗೋಪನಾ ಇಲಾಖೆ ಸ್ವಾಮ್ಯದಲ್ಲಿರುವ 421 ಎಕರೆ 23 ಗುಂಟೆ ವಿಸ್ತೀರ್ಣದಲ್ಲಿ ಕುದುರೆ ಫಾರ್ಮ್ ಇದೆ. ಅನೇಕ ವರ್ಷಗಳಿಂದ ಇದನ್ನು ಖಾಸಗಿಯವರು ಗುತ್ತಿಗೆ ಆಧಾರದಲ್ಲಿ ನಡೆಸುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುತ್ತಿಗೆ ನವೀಕರಿಸುವ ಪ್ರಕ್ರಿಯೆ ಆರಂಭವಾಗಿತ್ತು.

ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಐತಿಹಾಸಿಕ ಕುದುರೆ ಫಾರ್ಮ್ ಅನ್ನು ಸ್ಥಗಿತಗೊಳಿಸಿ, ಟೌನ್‌ಶಿಪ್ ನಿರ್ಮಿಸುವ ಪ್ರಸ್ತಾವಕ್ಕೆ ಸ್ಥಳೀಯರಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಬಹುಕೋಟಿ ಬೆಲೆ ಬಾಳುವ ಜಮೀನನ್ನು ಅನ್ಯ ಉದ್ದೇಶಕ್ಕೆ ಪರಿವರ್ತಿಸುವುದರ ಹಿಂದೆ, ‘ರಹಸ್ಯ ಲಾಭ’ದ ಹಿತಾಸಕ್ತಿ ಕೆಲಸ ಮಾಡುತ್ತಿದೆ ಎಂಬ ಆಪಾದನೆಯೂ ಇದೆ.

ಅತಂತ್ರ ಸ್ಥಿತಿಯಲ್ಲಿ ಫಾರ್ಮ್: ವಿಜಯ್ ಮಲ್ಯ ಒಡೆತನದ ಯುನೈಟೆಡ್ ಬ್ರೀವರೀಸ್ ಸಮೂಹದ ಯುನೈಟೆಡ್ ರೇಸಿಂಗ್ ಆ್ಯಂಡ್ ಬ್ಲಡ್‌ಸ್ಟಾಕ್ ಬ್ರೀಡರ್ಸ್ ಲಿಮಿಟೆಡ್‌ಗೆ 30 ವರ್ಷಗಳಿಗೆ ಕುಣಿಗಲ್ ಕುದುರೆ ಫಾರ್ಮ್ ಅನ್ನು ಗುತ್ತಿಗೆಗೆ ನೀಡಲಾಗಿತ್ತು. ಗುತ್ತಿಗೆ ಅವಧಿ 2022ರ ಸೆಪ್ಟೆಂಬರ್ 30ಕ್ಕೆ ಕೊನೆಗೊಂಡಿತ್ತು.

ಹೊಸ ಗುತ್ತಿಗೆದಾರರನ್ನು ನೇಮಿಸಲು ಅಂತರರಾಷ್ಟ್ರೀಯ ಮಟ್ಟದ ಬಿಡ್ ಆಹ್ವಾನಿಸಲಾಗಿತ್ತು. ವಾರ್ಷಿಕ ₹1.16 ಕೋಟಿ ಕನಿಷ್ಠ ಗುತ್ತಿಗೆ ಶುಲ್ಕವನ್ನು ನಿಗದಿಪಡಿಸಲಾಗಿತ್ತು. ₹1.40 ಕೋಟಿಗೆ ವಿಲ್ಲೂ ಪೂನಾವಾಲಾ ಗ್ರೀನ್‌ಫೀಲ್ಡ್ ಫಾರ್ಮ್ಸ್ ಸಲ್ಲಿಸಿದ್ದ ಬಿಡ್ ಸ್ವೀಕೃತವಾಗಿತ್ತು. ಈ ಸಂಸ್ಥೆಗೆ 30 ವರ್ಷಗಳಿಗೆ ಕುದುರೆ ಫಾರ್ಮ್ ಅನ್ನು ಗುತ್ತಿಗೆಗೆ ನೀಡುವ ಪ್ರಕ್ರಿಯೆ ಆರಂಭವಾಗಿತ್ತು.

ಬಿಡ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುವಾಗಲೇ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆದಿತ್ತು. ಬಿಜೆಪಿ ಅಧಿಕಾರ ಕಳೆದುಕೊಂಡು ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂತು. 2023ರ ಸೆಪ್ಟೆಂಬರ್ 29ರಂದು ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ ಆಯುಕ್ತರಿಗೆ ಪತ್ರ ಬರೆದಿರುವ ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ ಕಾರ್ಯದರ್ಶಿ, ಕುಣಿಗಲ್ ಕುದುರೆ ಫಾರ್ಮ್‌ನ ಗುತ್ತಿಗೆ ಪ್ರಕ್ರಿಯೆಯನ್ನು ಕೈಬಿಟ್ಟಿರುವುದಾಗಿ ತಿಳಿಸಿದ್ದಾರೆ.

‘ಜನರ ಹಿತಾಸಕ್ತಿಯೇ ಮುಖ್ಯ’

‘ಬೆಂಗಳೂರು ಟರ್ಫ್ ಕ್ಲಬ್ ಅನ್ನು ಕುಣಿಗಲ್‌ಗೆ ಸ್ಥಳಾಂತರಿಸಬೇಕೆಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಯೋಚನೆ. ಉಳಿದ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಿಸುವಂತೆ ನಾನು ಮತ್ತು ಸಂಸದರು ಪ್ರಸ್ತಾವ ಸಲ್ಲಿಸಿದ್ದೇವೆ. ಉದ್ಯೋಗ ಸೃಷ್ಟಿ ಮತ್ತು ತೆರಿಗೆ ವರಮಾನ ಹೆಚ್ಚಿಸುವುದು ನಮ್ಮ ಉದ್ದೇಶ’ ಎನ್ನುತ್ತಾರೆ ಕುಣಿಗಲ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಡಿ. ರಂಗನಾಥ್.

‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ವರ್ಷಕ್ಕೆ ₹1.40 ಕೋಟಿ ಶುಲ್ಕಕ್ಕೆ 421 ಎಕರೆ ಜಮೀನನ್ನು ಗುತ್ತಿಗೆಗೆ ನೀಡುವುದು ಯಾವ ನ್ಯಾಯ? ಕನಿಷ್ಠ ₹300 ಕೋಟಿ ತೆರಿಗೆ ಸಂಗ್ರಹಕ್ಕೆ ಪೂರಕವಾದ ಯೋಜನೆ ನಮ್ಮದು. 2,000ಕ್ಕಿಂತ ಹೆಚ್ಚು ಉದ್ಯೋಗ ಸೃಷ್ಟಿಯೂ ಆಗಲಿದೆ’ ಎಂದರು.

‘ಕುದುರೆ ಫಾರ್ಮ್ ಗುತ್ತಿಗೆಯ ಹಿಂದೆ ವ್ಯವಸ್ಥಿತ ಜಾಲವೇ ಇದೆ. ಕುದುರೆಗಳನ್ನು ಮಾರುಕಟ್ಟೆಯಲ್ಲಿ ಲಕ್ಷಾಂತರ ರೂಪಾಯಿಗೆ ಮಾರಿ ಹಣ ಗಳಿಸುವವರು ನಮ್ಮ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಟೌನ್‌ಶಿಪ್ ಪ್ರಸ್ತಾವ ಕೈಬಿಡುವಂತೆ ಆಮಿಷ ಒಡ್ಡುವುದಕ್ಕೂ ಬಂದಿದ್ದರು’ ಎಂದು ದೂರಿದರು.

ಟೌನ್‌ಶಿಪ್ ನಿರ್ಮಿಸಿದರೆ ಯಾವುದೇ ಮಾಲಿನ್ಯಕಾರಕ ಕೈಗಾರಿಕೆಗಳಿಗೆ ಅವಕಾಶ ನೀಡುವುದಿಲ್ಲ. ಅಮೆರಿಕದ ಸಿಲಿಕಾನ್ ವ್ಯಾಲಿಯಲ್ಲಿದ್ದಂತೆ ಕಾರ್ಪೊರೇಟ್ ಕಚೇರಿಗಳ ಕೇಂದ್ರವನ್ನಾಗಿ ಅದನ್ನು ಪರಿವರ್ತಿಸುವ ಸ್ಪಷ್ಟ ಯೋಜನೆ ತಮ್ಮ ಮುಂದಿದೆ. ಕುಣಿಗಲ್ ಜನರಿಗೆ ಲಾಭ ತಂದುಕೊಡದ ಯಾವ ತೀರ್ಮಾನಕ್ಕೂ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ರೇಸ್‌ಕೋರ್ಸ್ ಸ್ಥಳಾಂತರ: ಬೆಂಗಳೂರು ಟರ್ಫ್ ಕ್ಲಬ್‌ನ ಚಟುವಟಿಕೆಗಳನ್ನು ಕುಣಿಗಲ್ ಕುದುರೆ ಫಾರ್ಮ್‌ಗೆ ಸ್ಥಳಾಂತರಿಸುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿದೆ.

ಈ ಉದ್ದೇಶಕ್ಕೆ ಕುದುರೆ ಫಾರ್ಮ್‌ನ ಜಮೀನನ್ನು ಗುತ್ತಿಗೆ ಆಧಾರದಲ್ಲಿ ಟರ್ಫ್ ಕ್ಲಬ್‌ಗೆ ಹಸ್ತಾಂತರಿಸಬೇಕಿರುವುದರಿಂದ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಮೊದಲು ರಾಜ್ಯದಲ್ಲಿ ವಾಣಿಜ್ಯ ಉದ್ದೇಶದ ಕುದುರೆ ತಳಿ ಅಭಿವೃದ್ಧಿಯ 17 ಕೇಂದ್ರಗಳಿದ್ದವು. ಈಗ ಕುಣಿಗಲ್ ಕುದುರೆ ಫಾರ್ಮ್ ಮಾತ್ರ ಉಳಿದಿದೆ.

‘ಕುಣಿಗಲ್ ಕುದುರೆ ಫಾರ್ಮ್‌ನಲ್ಲಿ 120 ಕಾಯಂ ಮತ್ತು 60 ಗುತ್ತಿಗೆ ನೌಕರರಿದ್ದಾರೆ. ಫಾರ್ಮ್‌ನ ಭವಿಷ್ಯದ ಕುರಿತು ಸರ್ಕಾರ ಸ್ಪಷ್ಟವಾದ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದರೆ ಕುದುರೆ ಸಾಕಾಣಿಕೆ ಮತ್ತು ತಳಿ ಸಂವರ್ಧನೆ ಚಟುವಟಿಕೆ ನಡೆಸುವುದು ಕಷ್ಟ’ ಎನ್ನುತ್ತಾರೆ ಯುನೈಟೆಡ್ ರೇಸಿಂಗ್ ಆ್ಯಂಡ್ ಬ್ಲಡ್‌ಸ್ಟಾಕ್ ಬ್ರೀಡರ್ಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಝೆಯ್ನ್ ಮಿರ್ಜಾ.

ಪ್ರಮುಖ ಘಟನಾವಳಿಗಳು

- **ಸೆಪ್ಟೆಂಬರ್ 30, 2022**– ಯುನೈಟೆಡ್ ರೇಸಿಂಗ್ ಆ್ಯಂಡ್ ಬ್ಲಡ್‌ಸ್ಟಾಕ್ ಬ್ರೀಡರ್ಸ್ ಲಿಮಿಟೆಡ್‌ಗೆ ನೀಡಿದ್ದ ಕುಣಿಗಲ್ ಕುದುರೆ ಫಾರ್ಮ್ ಗುತ್ತಿಗೆ ಅವಧಿ ಅಂತ್ಯ
- **ಜನವರಿ 6, 2023**– ಕುಣಿಗಲ್ ಕುದುರೆ ಫಾರ್ಮ್ ನಿರ್ವಹಣೆಗೆ ಅಂತರರಾಷ್ಟ್ರೀಯ ಮಟ್ಟದ ಬಿಡ್ ಆಹ್ವಾನ
- **ಫೆಬ್ರುವರಿ 21, 2023**– ವಿಲ್ಲೂ ಪೂನಾವಾಲಾ ಗ್ರೀನ್‌ಫೀಲ್ಡ್ ಫಾರ್ಮ್ಸ್ ಕಂಪನಿಯ ಹಣಕಾಸು ಬಿಡ್ ಅಂಗೀಕಾರ
- **ಮಾರ್ಚ್ 20, 2023**– ಬಿಡ್ ಅಂಗೀಕರಿಸಿದ ಹಣಕಾಸು ಇಲಾಖೆ, ಮುಂದಿನ ಕ್ರಮಕ್ಕಾಗಿ ಪಶುಸಂಗೋಪನಾ ಇಲಾಖೆಗೆ ಕಡತ ರವಾನೆ
- **ಮಾರ್ಚ್ 27, 2023**– ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಘೋಷಣೆ
- **ನವೆಂಬರ್ 29, 2023**– ಟೆಂಡರ್ ರದ್ದುಗೊಳಿಸಿ ಕನಿಷ್ಠ ಠೇವಣಿ ಮೊತ್ತ ಹಿಂದಿರುಗಿಸುವಂತೆ ಪಶುಸಂಗೋಪನಾ ಇಲಾಖೆ ಆಯುಕ್ತರಿಗೆ ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ ಪತ್ರ
- **ಡಿಸೆಂಬರ್ 11, 2023**– ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಿರುವುದಾಗಿ ಪಶುಸಂಗೋಪನಾ ಇಲಾಖೆಯಿಂದ ಮಾಹಿತಿ

ಫಾರ್ಮ್ ಉಳಿಸಿ: ದೇವೇಗೌಡ


ದೇವೇಗೌಡ

ಕುಣಿಗಲ್ ಕುದುರೆ ಫಾರ್ಮ್ ಜಮೀನಿನಲ್ಲಿ ಟೌನ್‌ಶಿಪ್ ನಿರ್ಮಿಸುವ ಯೋಜನೆಯನ್ನು ಕೈಬಿಡಬೇಕು. ಅದನ್ನು ಒಂದು ಪಾರಂಪರಿಕ ತಾಣ ಎಂದು ಘೋಷಿಸಿ, ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಡಿಸೆಂಬರ್ 28ರಂದು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು, 250 ವರ್ಷಗಳ ಇತಿಹಾಸವಿರುವ ಕುದುರೆ ಫಾರ್ಮ್ ಅಸ್ತಿತ್ವ ಕಳೆದುಕೊಳ್ಳಲು ಬಿಡಬಾರದು ಎಂದು ಒತ್ತಾಯಿಸಿದ್ದಾರೆ.

ಹಡಗು ಮೇಲೆ ದಾಳಿ: ಕಣ್ಗಾವಲು ಬಲ ಹೆಚ್ಚಳ

ಒಂದನೇ ಪುಟದಿಂದ

ಸೌದಿ ಅರೇಬಿಯಾದಿಂದ ಮಂಗಳೂರಿಗೆ ಕಚ್ಚಾ ತೈಲ ಸಾಗಿಸುತ್ತಿದ್ದ ಎಂವಿ ಚೆಮ್ ಪ್ಲುಟೊ ಹಡಗಿನ ಮೇಲೆ ಅರಬ್ಬಿ ಸಮುದ್ರದಲ್ಲಿ ಡಿ.23ರಂದು ಡ್ರೋನ್ ದಾಳಿ ನಡೆದಿತ್ತು. ಭಾರತಕ್ಕೆ ಬರುತ್ತಿದ್ದ ಎಂವಿ ಸಾಯಿಬಾಬಾ ಹಡಗನ್ನು ಗುರಿಯಾಗಿಸಿ ದಕ್ಷಿಣ ಕೆಂಪು ಸಮುದ್ರದಲ್ಲಿ ಹುತಿ ಬಂಡುಕೋರರು ದಾಳಿ ನಡೆಸಿದ್ದರು.

ಇಸ್ರೇಲ್-ಹಮಾಸ್ ಸಂಘರ್ಷ ಶುರುವಾದ ಬಳಿಕ ಇರಾನ್ ಬೆಂಬಲಿತ ಹುತಿ ಬಂಡುಕೋರರು ಕೆಂಪು ಸಮುದ್ರದಲ್ಲಿ ಹಡಗುಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸುತ್ತಿದ್ದಾರೆ.

ರಾಷ್ಟ್ರಪತಿ ಶುಭಾಶಯ

ನವದೆಹಲಿ (ಪಿಟಿಐ): ದೇಶದ ನಾಗರಿಕರಿಗೆ ಭಾನುವಾರ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ‘ಸಮೃದ್ಧ ರಾಷ್ಟ್ರ ನಿರ್ಮಾಣದ ಸಂಕಲ್ಪ ಕೈಗೊಳ್ಳಿ’ ಎಂದರು.

‘ಹೊಸ ಗುರಿ ಮತ್ತು ಉದ್ದೇಶಗಳೊಂದಿಗೆ ಮುನ್ನಡೆಯಲು ಹೊಸವರ್ಷ ಬರುತ್ತಿದೆ’ ಎಂದು ರಾಷ್ಟ್ರಪತಿ ಭವನದಿಂದ ಹೊರಡಿಸಲಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ 2024



ಪ್ರಜಾವಾಣಿ ಚಿತ್ರ: ರಂಜು ಪಿ.

ಜನವರಿ

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11●	18	25○	
ಶುಕ್ರ	5	12	19	26	
ಶನಿ	6	13	20	27	

ಫೆಬ್ರುವರಿ

ಭಾನು		4	11	18	25
ಸೋಮ		5	12	19	26○
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9●	16	23	
ಶನಿ	3	10	17	24○	

ಮಾರ್ಚ್

ಭಾನು	31	3	10●	17	24
ಸೋಮ		4	11	18	25○
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ಏಪ್ರಿಲ್

ಭಾನು		7	14	21	28
ಸೋಮ	1	8●	15	22	29
ಮಂಗಳ	2	9	16	23○	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ಮೇ

ಭಾನು		5	12	19	26
ಸೋಮ		6	13	20	27
ಮಂಗಳ		7	14	21	28
ಬುಧ	1	8●	15	22	29
ಗುರು	2	9	16	23○	30
ಶುಕ್ರ	3	10	17	24	31
ಶನಿ	4	11	18	25	

ಜೂನ್

ಭಾನು	30	2	9	16	23
ಸೋಮ		3	10	17	24
ಮಂಗಳ		4	11	18	25
ಬುಧ		5	12	19	26
ಗುರು		6●	13	20	27
ಶುಕ್ರ		7	14	21	28
ಶನಿ	1	8	15	22○	29

ಜುಲೈ

ಭಾನು		7	14	21○	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5●	12	19	26	
ಶನಿ	6	13	20	27	

ಆಗಸ್ಟ್

ಭಾನು		4●	11	18	25
ಸೋಮ		5	12	19○	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

ಸೆಪ್ಟೆಂಬರ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3●	10	17	24	
ಬುಧ	4	11	18○	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

ಅಕ್ಟೋಬರ್

ಭಾನು		6	13	20	27
ಸೋಮ		7	14	21	28
ಮಂಗಳ	1	8	15	22	29
ಬುಧ	2●	9	16	23	30
ಗುರು	3	10	17○	24	31
ಶುಕ್ರ	4	11	18	25	
ಶನಿ	5	12	19	26	

ನವೆಂಬರ್

ಭಾನು		3	10	17	24
ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1●	8	15○	22	29
ಶನಿ	2	9	16	23	30

ಡಿಸೆಂಬರ್

ಭಾನು	1●	8	15○	22	29
ಸೋಮ	2	9	16	23	30●
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

● ಅಮಾವಾಸ್ಯೆ ○ ಹುಣ್ಣಿಮೆ ■ ಸಾರ್ವತ್ರಿಕ ರಜೆ ■ ನಿರ್ಬಂಧಿತ ರಜೆ

ರಜಾ ದಿನಗಳು

ಜನವರಿ
- 1- ಕ್ರೈಸ್ತ ವರ್ಷಾರಂಭ (ನಿ.)
- 15- ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯ ಕಾಲ
- 26- ಗಣರಾಜ್ಯೋತ್ಸವ

ಫೆಬ್ರುವರಿ
- 18- ಮಧ್ವನವಮಿ
- 26- ಷಬ್-ಎ-ಬರಾತ್ (ನಿ.)

ಮಾರ್ಚ್
- 8- ಮಹಾಶಿವರಾತ್ರಿ
- 25- ಹೋಳಿ ಹಬ್ಬ (ನಿ.)
- 29- ಗುಡ್ ಫ್ರೈಡೇ
- 30- ಹೋಲಿಸ್ಯಾಟರ್‌ಡೇ (ನಿ.)

ಏಪ್ರಿಲ್
- 5- ಜಮಾತ್-ಉಲ್-ವಿದಾ (ನಿ.)
- 6- ಷಬ್-ಎ-ಖದರ್ (ನಿ.)
- 9- ಚಾಂದ್ರಮಾನ ಯುಗಾದಿ
- 11- ಖುತ್ಬ್-ಎ-ರಂಜಾನ್
- 14- ಅಂಬೇಡ್ಕರ್ ಜಯಂತಿ
- 17- ಶ್ರೀರಾಮ ನವಮಿ (ನಿ.)
- 21- ಮಹಾವೀರ ಜಯಂತಿ

ಮೇ
- 1- ಕಾರ್ಮಿಕರ ದಿನಾಚರಣೆ
- 10- ಬಸವ ಜಯಂತಿ, ಅಕ್ಷಯ ತೃತೀಯ
- 12- ಶಂಕರಾಚಾರ್ಯ, ರಾಮಾನುಜ ಜಯಂತಿ (ನಿ.)
- 23- ಬುದ್ಧ ಪೂರ್ಣಿಮೆ (ನಿ.)

ಜೂನ್
- 17- ಬಕ್ರೀದ್

ಜುಲೈ
- 17- ಮೊಹರಂ ಕಡೇ ದಿನ

ಆಗಸ್ಟ್
- 15- ಸ್ವಾತಂತ್ರ್ಯ ದಿನಾಚರಣೆ
- 16- ವರಮಹಾಲಕ್ಷ್ಮೀ ವ್ರತ (ನಿ.)
- 19- ಯಜುರ್ ಉಪಾಕರ್ಮ (ನಿ.)
- 21- ಬ್ರಹ್ಮಶ್ರೀ ನಾರಾಯಣಗುರು ಜಯಂತಿ (ನಿ.)
- 26- ಶ್ರೀಕೃಷ್ಣ ಜನ್ಮಾಷ್ಟಮಿ (ನಿ.)

ಸೆಪ್ಟೆಂಬರ್
- 6- ಸ್ವರ್ಣಗೌರಿ ವ್ರತ (ನಿ.)
- 7- ವರಸಿದ್ಧಿ ವಿನಾಯಕ ವ್ರತ
- 16- ಈದ್ ಮಿಲಾದ್
- 17- ವಿಶ್ವಕರ್ಮ ಜಯಂತಿ (ನಿ.)

ಅಕ್ಟೋಬರ್
- 2- ಗಾಂಧಿ ಜಯಂತಿ
- 11- ಮಹಾನವಮಿ, ಆಯುಧ ಪೂಜೆ
- 12- ವಿಜಯದಶಮಿ
- 17- ವಾಲ್ಮೀಕಿ ಜಯಂತಿ
- 31- ನರಕ ಚತುರ್ದಶಿ

ನವೆಂಬರ್
- 1- ಕರ್ನಾಟಕ ರಾಜ್ಯೋತ್ಸವ
- 2- ಬಲಿಪಾಡ್ಯಮಿ, ದೀಪಾವಳಿ
- 15- ಗುರುನಾನಕ ಜಯಂತಿ (ನಿ.)
- 17- ಹುತ್ತರಿ ಹಬ್ಬ (ನಿ.)
- 18- ಕನಕದಾಸ ಜಯಂತಿ

ಡಿಸೆಂಬರ್
- 24- ಕ್ರಿಸ್‌ಮಸ್ ಈವ್ (ನಿ.)
- 25- ಕ್ರಿಸ್‌ಮಸ್